ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 07

ಫೆಬ್ರವರಿ 12, 2012

ಪುಟ 16

ರೂ. 5/-





ಆರ್‌ಎಸ್‌ಎಸ್ ಶಿಬಿರ

ದೇಶಪ್ರೇಮದ ಹುಸಿಬೊಬ್ಬೆ

ಚುನಾವಣಾ ಪೂರ್ವ ತಾಲೀಮು

ಶಾಸಕರ ಅನರ್ಹತೆ : 'ಪಕ್ಷಪಾತಿ' ಸಭಾಧ್ಯಕ್ಷರ ಭಂಡಾಟ

ಮೀನುಗಾರರು : ನೀರಿನಿಂದ ಹೊರಬಿದ್ದ ಬದುಕು



ಸಂಘ ಪರಿವಾರದ ಹಿಂದುತ್ವಕ್ಕಿಂತ ಬೇರೆಯಾದ ಶೂದ್ರ ಸನ್ಯಾಸಿ ವಿವೇಕಾನಂದರ ಹಿಂದೂ ಧರ್ಮ

ದೆಹಲಿ ಮುಟ್ಟಿದ ಕೈಗಾ ಸಂತ್ರಸ್ತರ ಅಹವಾಲು

ಫೆಬ್ರವರಿ 28, 2012

ಮಹಾನ್ ಅಖಿಲ ಭಾರತ ಮುಷ್ಕರದತ್ತ

ಐಕ್ಯ ದುಡಿಯುವ ವರ್ಗ.....

ಕಿರುಕುಳಗಳ ವಿರುದ್ಧ ಉದ್ಯೋಗ ಭದ್ರತೆಗಾಗಿ




ಬಿಸಿಯೂಟ ನೌಕರರ ಹಗಲು-ರಾತ್ರಿ ಹೋರಾಟ

ಮೀನುಗಾರರು : ನೀರಿನಿಂದ ಹೊರ ದಬ್ಬಿದ ಮೀನುಗಳು

ಜೀವವನ್ನೇ ಪಣವಾಗಿಟ್ಟು ದುಡಿಮೆ ಮಾಡುವ ಸಾಹಸ ಜೀವಿಗಳು, ಶ್ರಮಜೀವಿಗಳು ಈ ಮೀನುಗಾರರು. ಜಾಗತೀಕರಣದ ಅಲೆಗಳಬ್ಬರದಲ್ಲಿ ಮೀನುಗಾರರ ಬದುಕು ತಲುಪಿರುವ ದುಸ್ತರ ಸ್ಥಿತಿಯ ಕಡೆ ಬೆಳಕು ಚೆಲ್ಲುತ್ತಿದೆ ಈ ಲೇಖನ.

ಕೆ.ಶಂಕರ್



ಭಾರತ ವಿಶಾಲವಾದ ದೇಶ, ವಿಶಾಲ ಕರಾವಳಿ, ಹಲವಾರು ದೊಡ್ಡ ಮತ್ತು ಸಣ್ಣ ನದಿಗಳು, ಅಣೆಕಟ್ಟುಗಳು, ಸರೋವರಗಳನ್ನು ಮತ್ತಿತರ ಹಲವಾರು ವಿಧದ ಮೀನುಗಾರಿಗೆ ಅಗತ್ಯವಾದ ಸೌಲಭ್ಯಗಳನ್ನು ಹೊಂದಿದೆ. ಜಗತ್ತಿನಲ್ಲಿ ಸಮಗ್ರ ಮೀನುಗಾರಿಕೆಯಲ್ಲಿ (ಭಾರತಕ್ಕೆ) ಮೂರನೇ ಸ್ಥಾನ ಹಾಗೂ ಸಿಹಿ ನೀರು ಮೀನುಗಾರಿಕೆಯಲ್ಲಿ ಎರಡನೇ ಸ್ಥಾನವಿದೆ. ದೇಶದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳಲ್ಲಿ ಮೀನುಗಾರಿಕಾ ವಲಯಕ್ಕೆ ಪ್ರಮುಖ ಸ್ಥಾನವಿದೆ. ಇದು ಹಲವಾರು ಇತರ ಪೂರಕ ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಗಿದ್ದು, ವಿದೇಶಿ ಗಳಿಕೆಯಲ್ಲೂ ವಿಶಿಷ್ಟ ಸ್ಥಾನ ಗಳಿಸಿದೆ. ಈ ವ್ಯವಸಾಯವು ದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಸಾಮಾಜಿಕವಾಗಿ ತುಳಿತಕ್ಕೊಳಗಾದ ವಿಶಾಲ ಜನ ಸಮುದಾಯಕ್ಕೆ ಉದ್ಯೋಗವನ್ನೊದಗಿಸುತ್ತದೆ.

ಯೋಜನಾ ಆಯೋಗದ ವರದಿಯ ಪ್ರಕಾರ ಸುಮಾರು 38–40 ಲಕ್ಷ ಜನರು ಈ ಉದ್ಯಮದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಸುಮಾರು 38 ಲಕ್ಷ ಜನರು ಸಂಸ್ಕರಣ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಒಟ್ಟಾರೆ ದೇಶದಲ್ಲಿ ಸುಮಾರು 3 ಕೋಟಿಗೂ ಹೆಚ್ಚು ಜನರ ಬದುಕು ಈ ಉದ್ಯಮವನ್ನು ಅವಲಂಬಿಸಿದೆ.

ಬಡನತ ಬದುಕು

ಆದರೆ ಮೀನುಗಾರರ ಬದುಕು ಮಾತ್ರ ಅತ್ಯಂತ ಕಷ್ಟದಲ್ಲಿದೆ. ಅತ್ಯಂತ ಸಾಹಸಮಯ ದುಡಿಮೆಯಿಂದ ದೇಶದ ಆರ್ಥಿಕ ಬೆಳವಣಿಗೆ ಅಮೂಲ್ಯ ಕೊಡುಗೆ ನೀಡುತ್ತಿರುವ ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರ ಬದುಕು ಮಾತ್ರ ಅತ್ಯಂತ ಬಡತನದಲ್ಲಿದೆ. ಅದರಲ್ಲೂ ಸಾಗರ ವಿಭಾಗದವರು ಯಾವುದೇ ಸಾಮಾಜಿಕ ಭದ್ರತೆಯಿಲ್ಲದೆ ಅದೂ ವೃದ್ಧಾಪ್ಯದಲ್ಲಿ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟವರಾಗಿ ಯಾವುದೇ ಸವಲತ್ತುಗಳಿಲ್ಲದೆ ಒತ್ತಾಡುತ್ತಿದ್ದಾರೆ. ಅನಾರೋಗ್ಯ ಮತ್ತು ಅನಕ್ಷರತೆ, ಅವರ ಜೀವ ಹಿಂಡುತ್ತಿದೆ. ಅವರ ವಾಸ ಸ್ಥಳಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ವ್ಯವಸ್ಥೆಗಳಿಲ್ಲ.

ಅಸಮರ್ಪಕ ಹಾಗೂ ಪರಿಣಾಮಕಾರಿಯಲ್ಲದ ಪೂರ್ವ ಸೂಚನಾ ವಿಧಾನಗಳಿಂದಾಗಿ ಚಂಡಮಾರುತ ಮತ್ತು ಸುನಾಮಿ ಮತ್ತಿತರ ನೈಸರ್ಗಿಕ ವಿಕೋಪಗಳು ಹಲವಾರು ಬಾರಿ ನೂರಾರು ಮೀನುಗಾರರ ಕುಟುಂಬಗಳನ್ನು ನಿರ್ಗತಿಕರನ್ನಾಗಿಸಿದೆ. ದಾರಿ ತಪ್ಪಿ ಅಕಸ್ಮಾತ್ ನೆರೆಯ ದೇಶಗಳ ಸಮುದ್ರಗಳಿಗೆ ಸೆಳೆಯಲ್ಪಟ್ಟ ಮೀನುಗಾರರು ಹಿಡಿಯಲ್ಪಟ್ಟು ಬಂಧನಕ್ಕೊಳಗಾಗುತ್ತಿದ್ದಾರೆ.

ಹೆಚ್ಚಾಗಿ ಮಹಿಳೆಯರು ಮತ್ತು ಇತರ ಪ್ರದೇಶಗಳಿಂದ ವಲಸೆ ಬಂದವರು ಇನ್ನೂ ಹೆಚ್ಚಿನ ಸುಲಿಗೆಗೊಳಗಾಗುತ್ತಿದ್ದಾರೆ. ಅವರಿಗೆ ಕನಿಷ್ಠ ವೇತನವಿಲ್ಲ. ಸಾಮಾಜಿಕ ಭದ್ರತೆಯ ಸೌಲಭ್ಯಗಳಿಲ್ಲ. ಮೀನು ಸಂಸ್ಕರಣೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಲೈಂಗಿಕ ಕಿರುಕುಳಗಳನ್ನು ಎದುರಿಸಬೇಕಾದ ಸ್ಥಿತಿಗಳಿವೆ. ಮೀನು ಮಾರಾಟಗಾರರು ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ತಮ್ಮ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಕರ್ಯಗಳ ಕೊರತೆಯಿದೆ.

ಪ್ರಮುಖ ಉದ್ಯಮ

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆ ಒಂದು ಪ್ರಾಮುಖ್ಯವಾದ ಉದ್ಯಮವಾಗಿದ್ದು, ಪೌಷ್ಠಿಕ ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮೀನುಗಾರಿಕೆಯು ಉದ್ಯೋಗದ ಅವಕಾಶ, ಪೌಷ್ಠಿಕ ಆಹಾರ ಮತ್ತು ವಿದೇಶಿ ವಿನಿಮಯದ ಒಂದು ಪ್ರಮುಖ ಸಂಪನ್ಮೂಲವಾಗಿರುವುದರಿಂದ ಕರಾವಳಿ ಜಿಲ್ಲೆಗಳ ಆರ್ಥಿಕ ಪ್ರಗತಿಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ಸುಮಾರು 21 ಮೀನುಗಾರಿಕಾ ಗ್ರಾಮಗಳಿದ್ದು, ಅದರಲ್ಲಿ 52,218 ಮೀನುಗಾರರು ವಾಸಿಸುತ್ತಿದ್ದಾರೆ. ಅವರಲ್ಲಿ ಸುಮಾರು 27,597 ಮೀನುಗಾರರು ವೃತ್ತಿ ನಿರತರಾಗಿರುತ್ತಾರೆ. ಸುಮಾರು 60 ಪರ್ಸಿನ್ ದೋಣಿಗಳು, 950 ಟ್ರಾಟರ್ ದೋಣಿಗಳು, 1,021 ಯಾಂತ್ರೀಕೃತ ನಾಡದೋಣಿಗಳು ಹಾಗೂ 242 ಯಾಂತ್ರೀಕೃತವಲ್ಲದ ನಾಡದೋಣಿಗಳು ಮೀನುಗಾರಿಕೆಯಲ್ಲಿ ಕಾರ್ಯನಿರತವಾಗಿದೆ.

ಹಾಗೆಯೇ 2ನೇ ಸ್ಥಾನದಲ್ಲಿ ಉಡುಪಿ ಮತ್ತು 3ನೇ ಸ್ಥಾನದಲ್ಲಿ ಉತ್ತರ ಕನ್ನಡ ಜಿಲ್ಲೆ ಇದೆ.

ಒಳನಾಡು ಮೀನುಗಾರಿಕೆಯಲ್ಲಿ ತೊಡಗಿದವರಿಗೆ ಸರಕಾರಿ ಸೌಲಭ್ಯಗಳು ಸಾಕಷ್ಟು ಸಿಗುವುದಿಲ್ಲ. ಕರಾವಳಿಯಲ್ಲಿ ಮೀನುಗಾರರ ಮಧ್ಯೆ ಈಗಾಗಲೇ ಸಂಘಟನೆ ಇರುವುದರಿಂದ ಕೆಲವು ಸವಲತ್ತುಗಳು ಸಿಗುತ್ತಿವೆ.

ಒಳನಾಡು ಮೀನುಗಾರಿಕೆಯಲ್ಲಿ ಮೀನು ಮರಿ ಉತ್ಪಾದನೆ ಸಾಕಣೆ ಮತ್ತು ಹಂಚಿಕೆ ವ್ಯವಸ್ಥೆ ಪರಿಣಾಮಕಾರಿಯಾಗಿಲ್ಲ.

ಕಡಲ ಮೀನು ಉತ್ಪಾದನೆಯು ಇಳಿಮುಖವಾಗುತ್ತಿರುವುದರಿಂದ, ಉತ್ಪಾದನೆ ಹೆಚ್ಚಿಸುವ ಸಲುವಾಗಿ ಸಿಗಡಿ ಮತ್ತು ಮೀನು ಮರಿಗಳನ್ನು ಸಮುದ್ರದ ಸಿಹಿ ನೀರಿನಲ್ಲಿ ದಾಸ್ತಾನು ಮಾಡುವ ವ್ಯವಸ್ಥೆ ಇತ್ತೀಚಿಗೆ ಇದೆ.

ಬೇಡಿಕೆಗಳು


ಮೀನುಗಾರರ ಬೇಡಿಕೆಗಳ ಬಗ್ಗೆ ಕೇಂದ್ರ ಸರಕಾರ ಗಮನಹರಿಸಬೇಕು. ಕೇಂದ್ರ ಸರಕಾರ ಮೀನುಗಾರಿಕಾ ಉದ್ಯಮಕ್ಕಿರುವ ಆರ್ಥಿಕ ಪಾಲು ಹಂಚಿಕೆ ಹೆಚ್ಚಿಸಬೇಕು. ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಕೆಲಸದ ನಿಯಮಾವಳಿಗಳು, ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತಾ ಸವಲತ್ತುಗಳನ್ನೊದಗಿಸುವ ಕೇಂದ್ರೀಯ ಕಾಯಿದೆಯನ್ನು ಜಾರಿಗೊಳ್ಳುವಂತೆ ಮಾಡಬೇಕು. ವಿವಿಧ ಮೀನುಗಾರಿಕಾ ಹಡಗುಗಳ ಮೇಲೆ ಮುರಾರಿ ಆಯೋಗದ ತೀರ್ಪು ಜಾರಿಗೊಳಿಸಬೇಕು ಮತ್ತು ಭಾರತೀಯ ಸಮುದ್ರದಲ್ಲಿ ವಿದೇಶಿ ಮೀನುಗಾರಿಕೆಯನ್ನು ನಿಷೇಧಿಸಬೇಕು.

ನಮ್ಮ ದೇಶದ ಮೀನುಗಳ ಜೀವ ವೈವಿಧ್ಯವನ್ನು ರಕ್ಷಿಸಲು ಬೇಕಾದ ಸೂಕ್ತ ಕ್ರಮಗಳನ್ನೊಳಗೊಳ್ಳುವ ಮೀನುಗಾರಿಕಾ ನಿಯಮಗಳನ್ನು ರೂಪಿಸಬೇಕು.

ಸುನಾಮಿ, ಬಿರುಗಾಳಿ, ಚಂಡಮಾರುತಗಳಂತಹ ಹವಾಮಾನ ವೈಪರಿತ್ಯಗಳ ಕುರಿತು ಸಾಕಷ್ಟು ಮುಂಚಿತವಾಗಿ ಮೀನುಗಾರರಿಗೆ ತಿಳಿಸುವ ಕ್ರಮ ಕೈಗೊಳ್ಳಬೇಕು. ಮೀನು ಮಾರುಕಟ್ಟೆಗಳನ್ನು ಏಲಂ ಮಾಡಬಾರದು. ಮಹಿಳಾ ವ್ಯಾಪಾರಿಗಳಿಗೆ ಮತ್ತು ಅವರ ಸಹಕಾರಿ ಸಂಘಗಳಿಗೆ ಸಾಂಕೇತಿಕ ಬಾಡಿಗೆಯಲ್ಲಿ ಅಗತ್ಯವನ್ನು ಒದಗಿಸಬೇಕು. ಮೀನು ಮಾರುಕಟ್ಟೆಗಳಲ್ಲಿ ನೀರು, ನೈರ್ಮಲ್ಯೀಕರಣ ಚರಂಡಿ, ಪಾಯಿಖಾನೆಗಳಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಎಲ್ಲಾ ಮೀನುಗಾರರಿಗೆ ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಬಿ.ಪಿ.ಎಲ್. ರೇಷನ್ ಕಾರ್ಡ್ ಒದಗಿಸಬೇಕು. ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಿಸಬೇಕು. ಬಿ.ಪಿ.ಎಲ್. ಮಾನದಂಡ ತೆಗೆದು ಎಲ್ಲಾ ಯಾಂತ್ರಿಕ ದೋಣಿ ಮೀನುಗಾರರಿಗೆ ಲೀಟರ್ ಮೇಲೆ 3 ರೂ.ರಂತೆ ಕೇಂದ್ರದ ಡೀಸೆಲ್ ಸಬ್ಸಿಡಿ ನೀಡಬೇಕು. ಸಿ.ಆರ್.ಝಡ್ ಅಧಿಸೂಚನೆ ರದ್ದಾಗಬೇಕು.

ಕರ್ನಾಟಕ ರಾಜ್ಯದ ಕರಾವಳಿಯ 15 ಬಂದರುಗಳ ಹೂಳೆತ್ತಿ, ಶಾಶ್ವತ ತಡೆಗೋಡೆ ನಿರ್ಮಿಸಬೇಕು. ಕರಾವಳಿ ಮೂರು ಜಿಲ್ಲೆಗಳಲ್ಲಿರುವ ಮೂರು ಮಾರ್ಕೆಟ್ ಕೇಂದ್ರದ ಶೇಕಡಾ 90 ಸಹಾಯಧನದಿಂದ ಅಭಿವೃದ್ಧಿಪಡಿಸಬೇಕು. ಕೇಂದ್ರ ಸರಕಾರದ ನೆರವಿನೊಂದಿಗೆ ಹೊಸ ಬಂದರುಗಳನ್ನು ನಿರ್ಮಿಸಬೇಕು. ಕರಾವಳಿ, ನಿಯಂತ್ರಣ ವಲಯ ಅಧಿನಿಯಮವು ಸಾಂಪ್ರದಾಯಕ ಜನಜೀವನ, ಆರ್ಥಿಕ ಅಭಿವೃದ್ಧಿ ಮತ್ತು ಪ್ರವಾಸೋದ್ಯಮಕಾಗುವ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ಹಾಗೂ ಸಂಶೋಧನೆ ನಡೆಯಬೇಕು. ಕರಾವಳಿ ಮೀಸಲು ವಲಯ (ಸಿಆರ್‌ಝಡ್) ಯೋಜನೆ ಕೈ ಬಿಡಲು ಸ್ವಾಮಿನಾಥನ್ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿದೆ. ಗೋವಾದಲ್ಲಿ ಅಭಿವೃದ್ಧಿ ನಿಷೇಧಿತ ವಲಯದಲ್ಲಿ 2,000 ಕಟ್ಟಡ ನಿರ್ಮಾಣವಾಗಿದೆ.

ಪರಿಸರ, ಸಮುದ್ರ ತೀರ, ಜೀವ ವೈವಿಧ್ಯ, ಸಮುದ್ರ ಮಟ್ಟ ಏರಿಕೆ, ಜಾಗತಿಕ ತಾಪಮಾನ ಹೆಚ್ಚಳವನ್ನು ಗಮನದಲ್ಲಿಟ್ಟು ನಿಯಮ ರೂಪಿಸಬೇಕಾಗಿದೆ. ಮೀನುಗಾರರ ಸಂಘಟನೆಯನ್ನು ಕಟ್ಟಿ ಬೆಳೆಸಲು ಪ್ರಯತ್ನ ಮುಂದಿನ ದಿವಸಗಳಲ್ಲಿ ಸಾಧ್ಯವಾಗಬೇಕು. ●



ಜನಶಕ್ತಿ

ಸಂಪಾದಕೀಯ

ರಾಜ್ಯಪಾಲರ ಭಾಷಣ: ಡೆಮ್ಮಿ ಸರ್ಕಾರದ ವಂಚನೆಯ ವರಸೆ

ವಿಧಾನಸಭೆಯ ಹತ್ತು ದಿನಗಳ ಅಧಿವೇಶನದ ಆರಂಭದಲ್ಲಿನ ರಾಜ್ಯಪಾಲ ಹಂಸರಾಜ್ ಭಾರದ್ವಾಜ್‌ರವರ ಭಾಷಣ ಕೇವಲ ಔಪಚಾರಿಕ ಎನ್ನುವುದು ಬಿಟ್ಟರೆ ರಾಜ್ಯದ ಜನತೆಯ ಜ್ವಲಂತ ಪ್ರಶ್ನೆಗಳಿಗೆ ಪರಿಹಾರವಾಗಲೀ, ಬೆಳವಣಿಗೆಯ ಹೊಸ ಅಂಶಗಳಾಗಲೀ ಇಲ್ಲವೇ ಇಲ್ಲ. ಬದಲಾಗಿ ಸರ್ಕಾರದ ದಿಕ್ಕುದೆಶೆಯಿಲ್ಲದ, ನಿಷ್ಕಾಳಜಿಯ ಪ್ರತೀಕವಾಗಿದೆ. ಅದು ಅನುಸರಿಸುತ್ತಿರುವ ಜನದ್ರೋಹದ ಮುಂದುವರಿಕೆಯಾಗಿದೆ.

ರಾಜ್ಯಪಾಲರಿಂದ ಇಂತಹ ಭಾಷಣ ಮಾಡಿಸುವುದು ವಾಡಿಕೆಯೇನೋ ನಿಜ. ಆದರೆ ಈ ಅವಧಿಯುದ್ದಕ್ಕೂ ರಾಜ್ಯಪಾಲರು ಬಿಜೆಪಿಯ ಈ ಸರ್ಕಾರದ ಬಗ್ಗೆ ಹಲವಾರು ಬಾರಿ ಕಟು ವಿಮರ್ಶೆ ಮಾಡಿದವರು, ಲೋಕಾಯುಕ್ತರ ನೇಮಕ, ಭ್ರಷ್ಟಾಚಾರ,ಜಾನುವಾರು ಹತ್ಯೆ ಮಸೂದೆ, ಕೋಮುಗಲಭೆಗಳಂತಹ ಹಲವಾರು ಪ್ರಸಂಗಗಳಲ್ಲಿ ಸರ್ಕಾರದೊಂದಿಗೆ ಸಂಘರ್ಷಕ್ಕೆ ಇಳಿದವರು. ಆದರೆ ಈ ಭಾಷಣದುದ್ದಕ್ಕೂ ಸರ್ಕಾರದ ಬೆನ್ನು ಚಪ್ಪರಿಸಿರುವುದು ಒಂದು ವಿಪರ್ಯಾಸ.

ರಾಜ್ಯದಲ್ಲಿ 98 ತಾಲೂಕುಗಳು ಬರದ ದವಡೆಗೆ ಸಿಲುಕಿವೆ, ಅಲ್ಲಿ ಪರಿಹಾರದ ಕಾರ್ಯಗಳೇ ಆರಂಭಗೊಂಡಿಲ್ಲ. ಬೇಸಿಗೆ ಬರುತ್ತಿದ್ದಂತೆ ನೀರು-ಮೇವಿಗಾಗಿ ಅಪಾರ ಸಂಕಷ್ಟಕ್ಕೆ ಸಿಲುಕುವ ಸ್ಪಷ್ಟ ಸೂಚನೆಗಳಿದ್ದರೂ ಮುಂಜಾಗರುಕತಾ ಕ್ರಮಗಳು ವಿಧಾನಸೌಧದ ಹವಾನಿಯಂತ್ರಿತ ಕೋಣೆಯಿಂದ ಹೊರ ಬರಲಿಲ್ಲ. ಕಾರ್ಷಿಕ ಬಿಕ್ಕಟ್ಟಿನ ಕ್ರೌರ್ಯ, ನಿಲ್ಲದ ರೈತರ ಆತ್ಮಹತ್ಯೆ, ಗ್ರಾಮೀಣ ಪ್ರದೇಶಗಳ ದಿವಾಳಿತನ ನಿತ್ಯವೂ ಕಣ್ಣಿಗೆ ರಾಚುತ್ತಿದ್ದರೂ ಕನಿಷ್ಟ ಕ್ರಮಗಳಿಲ್ಲ.

ರಾಜ್ಯ ತೀವ್ರವಾಗಿ ವಿದ್ಯುತ್ ಅಭಾವವೆದುರಿಸುತ್ತಿದೆ. ಇದರಿಂದಾಗಿಯೂ ಕೈಗಾರಿಕಾ ವಲಯ ಉತ್ಪಾದನೆ ಕುಸಿಯುತ್ತಿದೆ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಕುಡಿವ ನೀರು ಒಳಗೊಂಡು ನೀರಾವರಿಯ ಯೋಜನೆಗಳು ನೆನೆಗುದಿಗೆ ಬಿದ್ದ ಪ್ರಕರಣಗಳಿವೆ. ರಾಜ್ಯದಲ್ಲಿ ಅತ್ಯಂತ ಹಿಂದುಳಿದ ದೇವದುರ್ಗ ಮಾತ್ರವಲ್ಲ ಮುಂದುವರೆದಿದೆ ಎನ್ನಲಾಗುವ ಮೈಸೂರು ಪ್ರಾಂತ್ಯದಲ್ಲಿಯೂ ಅಪೌಷ್ಟಿಕತೆಯ ಅನಾಹುತಗಳಿಗೆ ಕಂದಮ್ಮಗಳು, ಮಹಿಳೆಯರು ಬಲಿಯಾಗುತ್ತಿರುವ ಧಾರುಣ ವರದಿಗಳಿವೆ. ರೇಷನ್ ಕಾರ್ಡ್, ರೇಷನ್ ಸಮಸ್ಯೆ ಇತ್ಯರ್ಥಗೊಳ್ಳದೇ ಕನ್ನಡಿಯೊಳಗಿನ ಬುತ್ತಿ ಗಂಟಾಗಿದೆ. ಬೆಲೆಗಳು ಏರುತ್ತಲೇ ಇವೆ.ಜಾತಿ ದಮನ, ಮರ್ಯಾದಾ ಹತ್ಯೆ, ಅಲ್ಪಸಂಖ್ಯಾತರ ಮೇಲೆ ಧಾಳಿ, ಕೋಮುಗಲಭೆಗಳ ಪಿತೂರಿ ಹೆಡೆ ಎತ್ತಿವೆ. ರಾಜ್ಯ ಸರ್ಕಾರ ಎಲ್ಲಾ ರಂಗಗಳಲ್ಲಿಯೂ ವಿಫಲವಾಗಿದೆ. ಭ್ರಷ್ಟಾಚಾರ, ಅಕ್ರಮ-ಹಗರಣಗಳ ತಾಂಡವವಿದೆ. ಆಡಳಿತವೇ ಕುಸಿದು ಹೋಗಿ ಜನರಪಾಲಿಗೆ ಅದು ಇಲ್ಲವಾಗಿದೆ. ಹೀಗೆ ಎಷ್ಟೊಂದು ವೈಫಲ್ಯಗಳು, ಜನದ್ರೋಹಗಳು. ಆದರೆ ಇದರಲ್ಲಿ ಒಂದಕ್ಕಾದರೂ ಪರಿಹಾರವಾಗಲೀ, ಕೊನೆಗೆ ಪ್ರಸ್ತಾಪವಾಗಲೀ ಬರಲೇ ಇಲ್ಲ. ಅಂದರೆ ಕ್ರೂರ ವಾಸ್ತವವನ್ನು ಮರೆ ಮಾಚಲು ನಡೆಸಿದ ಯತ್ನವೇ ರಾಜ್ಯಪಾಲರ ಭಾಷಣವಾಗಿದೆ.

ರಾಜ್ಯ ಸರ್ಕಾರದ ಸಾಲದ ಭಾರ 1 ಲಕ್ಷ ಕೋಟಿಗೆ ತಲುಪುತ್ತಿದೆ. ಹಲವಾರು ಯೋಜನೆಗಳಿಗೆ ಹಣವೇ ಬಿಡುಗಡೆಯಾಗಿಲ್ಲ. ಬಿಜೆಪಿ ಆಡಳಿತವಿರುವ ಬೆಂಗಳೂರು ಮಹಾನಗರ ಪಾಲಿಕೆಯು ಒಂದು ಸಾಲ ತೀರಿಸಲು ಮತ್ತೊಂದು ಸಾಲಕ್ಕೆ ಕೈಚಾಚಿ ಅತ್ಯಂತ ಹಳೆಯ, ಪ್ರತಿಷ್ಠಿತ ಕೆ.ಆರ್.ಮಾರ್ಕೆಟ್ಟನ್ನು ಒತ್ತೆ ಇಡಲು ನಿರ್ಧರಿಸಿರುವುದು ಆರ್ಥಿಕ ದಿವಾಳಿಯ ಸೂಚನೆಯಲ್ಲವೇ? ಆದರೆ ಹಣಕಾಸಿನಲ್ಲಿ ಸರ್ಕಾರ ಸುಸ್ಥಿರವಾಗಿದೆಯೆಂದು ಸರ್ಕಾರದ ಹೇಳಿಕೆ ಹಸಿ ಸುಳ್ಳು 1 ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸುವ ಮಾತುಗಳು ವಂಚನೆಯಲ್ಲವೇ ?


ಬಜೆಟ್ ಪೂರ್ವದಲ್ಲಿನ ಈ ಅಧಿವೇಶನಕ್ಕೆ ಹಲವಾರು ಮಗ್ಗಲುಗಳಿಂದಲೂ ಮಹತ್ವವಿದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ಕಾರ್ಯಯೋಜನೆಗಳ ಕೈಪಿಡಿಯಾಗಿ ರಾಜ್ಯಪಾಲರ ಮೂಲಕ ಸರ್ಕಾರ ಸ್ಪಷ್ಟ ಸೂಚನೆ ನೀಡಬೇಕಿತ್ತು. ಆದರೆ ಹಾಗೆ ಮಾಡದೇ ಹಿಂದಿನ ಸರ್ಕಾರದ ಪ್ರಕಟಿತ ಯೋಜನೆಗಳನ್ನೇ ಪುನರುಚ್ಚರಿಸಿದೆ. ಆರ್ಥಿಕ ಅಭಿವೃದ್ಧಿಯೆಂದರೆ ವಿದೇಶಿ ಹೂಡಿಕೆ ಸಮಾವೇಶ ಎನ್ನುವುದಕ್ಕೆ ಸೀಮಿತಗೊಂಡು ಉದಾರೀಕರಣ ನೀತಿಗಳನ್ನೇ ಎತ್ತಿ ಹಿಡಿದಿದೆ. ಸದಾನಂದಗೌಡ ಮುಖ್ಯಮಂತ್ರಿಯಾಗಿ ಸರ್ಕಾರದ ನೇತೃತ್ವ ಬದಲಾದರೂ ಕಾರ್ಯ ನೀತಿ, ಆಡಳಿತ ವೈಖರಿ ಬದಲಾಗದು ಎಂಬ ಸ್ಪಷ್ಟ ಸಂದೇಶವನ್ನೇ ರಾಜ್ಯಪಾಲರ ಮೂಲಕ ನೀಡುತ್ತಿದೆ. ಇದು ಭ್ರಷ್ಟರಿಗೆ, ಲೂಟಿ ಹೊಡೆಯುತ್ತಿರುವ ಭೂ ಹಾಗೂ ಗಣಿ ಮಾಫಿಯಾಗಳಿಗೆ, ನೆಲ, ಜಲ, ಸಂಪತ್ತು ನುಂಗಿ ನೊಣೆಯ ಬಯಸುವ ಕಾರ್ಪೋರೇಟ್ ಕಂಪನಿಗಳಿಗೆ ನೀಡಿದ ಭರವಸೆಯಿರಬಹುದು. ಆದರೆ ಜನಸಾಮಾನ್ಯರಿಗೆ, ರಾಜ್ಯಕ್ಕೆ ನೀಡಿದ ಪ್ರಹಾರವಾಗಿದೆ.

ಇಷ್ಟೊಂದು ಭ್ರಷ್ಟಾಚಾರದ-ಪ್ರಕರಣಗಳು ತಾಂಡವಾಡುತ್ತಿದ್ದರೂ, ಹಗರಣಗಳಿಂದ ಮುಖ್ಯಮಂತ್ರಿ ರಾಜೀನಾಮೆ ನೀಡಿದರೂ ಅವುಗಳ ಪ್ರಸ್ತಾಪ ದೃಢ ಕ್ರಮ ಪ್ರಕಟವಾಗಬೇಕಿತ್ತು. ಲೋಕಾಯುಕ್ತ ನೇಮಕಾತಿ ಬಗ್ಗೆ ಭಾಷಣದಲ್ಲಿ ಚಕಾರ ಎತ್ತದಿರುವುದು ಏನನ್ನೂ ತೋರಿಸುತ್ತದೆ. ತೀವ್ರತರವಾಗಿ ಆಂತರಿಕ ಕಿತ್ತಾಟ, ಹಗರಣ ಮುಚ್ಚಿಕೊಳ್ಳಲು ಹಲವಾರು ಪಿತೂರಿ-ಕಸರತ್ತುಗಳು, ಭಿನ್ನಮತ-ಗುಂಪುಗಾರಿಕೆಯಿಂದ ಅಭದ್ರತೆ ಅನುಭವಿಸುವ ಬಿಜೆಪಿ ಸರ್ಕಾರ, ರಾಜಿಸಂಧಾನ ಒಪ್ಪಂದ ಒತ್ತಡಗಳು ಸರ್ಕಾರದ ಕಾರ್ಯವೈಖರಿಯಲ್ಲಿ ಪ್ರತಿಫಲನಗೊಂಡಿವೆ. ಹೀಗಾಗಿ ಸದಾನಂದಗೌಡರ ಸರ್ಕಾರ ಡೆಮ್ಮಿ ಸರ್ಕಾರ ಎಂಬುದನ್ನೇ ಇವೆಲ್ಲಾ ಧ್ವನಿಸುತ್ತವೆ. ಹೀಗಾಗಿಯೇ ರಾಜ್ಯಪಾಲರ ಭಾಷಣ-ಸರ್ಕಾರದ ಕಾರ್ಯವೈಖರಿ, ನೀತಿಗಳು ಅತ್ಯಂತ ಹಳಸಲು, ಜನದ್ರೋಹಿಯೇ ಆಗಿರುವುದು ಮತ್ತೊಮ್ಮೆ ಸ್ಪಷ್ಟವಾಗಿದೆ. ಹೀಗಿರುವಾಗಲೂ ಚುನಾವಣೆ ಮೇಲೆ ಕಣ್ಣಿರಿಸಿ ಜನ ಮರಳು ಬಜೆಟ್ ನೀಡುವ ಹುನ್ನಾರದ ಎದುರಲ್ಲಿ ಅದರ ಮುಖವಾಡ ತೆಗೆದೆಸೆಯಬೇಕೆಂದರೆ ಜನತೆಯ ರಾಜಕೀಯ ಆಂದೋಲನ ಅಷ್ಟೇ ಜರೂರಿಯಾಗಿದೆ.

'ಪಕ್ಷಪಾತಿ' ಸಭಾಧ್ಯಕ್ಷರ ಮೊಂಡಾಟ-ಭಂಡಾಟ

ಶಾಸನ ಸಭೆಗಳ ಸಭಾಧ್ಯಕ್ಷರ ಸ್ಥಾನ ನ್ಯಾಯಮೂರ್ತಿಗಳ ಸ್ಥಾನದಂತೆ ಎನ್ನಲಾಗುತ್ತದೆ. ಆಡಳಿತ, ವಿರೋಧ ಪಕ್ಷಗಳ ಎಲ್ಲರಲ್ಲೂ ವಿಶ್ವಾಸ ಹುಟ್ಟಿಸುವ, ನಿಷ್ಪಕ್ಷಪಾತ ನಡವಳಿಕೆಯನ್ನು ಅವರಿಂದ ನಿರೀಕ್ಷಿಸಲಾಗುತ್ತದೆ. ಅವರು ಒಂದು ಪಕ್ಷದಿಂದಲೇ ಆಯ್ಕೆಯಾಗಿದ್ದರೂ, ಸಭಾಧ್ಯಕ್ಷರಾದ ನಂತರ ಬಂದ ಪಕ್ಷದ ಪಕ್ಷಪಾತಿಯಾಗಿ ನಡೆಯದೇ ಸಂವಿಧಾನಾತ್ಮಕ ನೀತಿ-ನಿಯಮಗಳಂತೆ ನಡೆಯುವುದಕ್ಕೇ ಅತ್ಯಂತ ಗೌರವ ಸ್ಥಾನವೂ ಲಭಿಸಿದೆ.

ಇಂತಹ ಅಂಶವನ್ನು ಪದೇ ಪದೇ ನೆನಪಿಸುತ್ತಿರುವವರೆನೆಂದರೆ ನಮ್ಮ ವಿಧಾನ ಸಭಾಧ್ಯಕ್ಷರಾದ ಬೋಪಯ್ಯನವರು! ಇದು ಅವರ ಆದರ್ಶಪ್ರಾಯವಾದ ನಡವಳಿಕೆ ಕಾರಣಕ್ಕೆ ಅಲ್ಲ ಎಂಬುದೇ ವಿಷಾದ. ಬದಲಾಗಿ ಕಳಂಕಗಳ ಕಪ್ಪು ಮಸಿಯನ್ನು ಮೆತ್ತಿಕೊಳ್ಳುತ್ತಲೇ ಗೌರವಾನ್ವಿತ ಹುದ್ದೆಯಲ್ಲಿ ಮುಂದುವರಿಯುತ್ತಿದ್ದಾರೆ ಎಂಬ ಅಸಹ್ಯದಿಂದಾಗಿ!



ವಿಧಾನ ಸಭಾ ಅಧಿವೇಶನ ಮೊನ್ನೆ ಜನವರಿ 30ರಂದು ಆರಂಭಗೊಂಡಾಗಿನಿಂದಲೂ ಕಪ್ಪು ಬಾವುಟದ ಪ್ರತಿಭಟನೆ ಎದುರಿಸುತ್ತಿದ್ದಾರೆ. ವಿರೋಧ ಪಕ್ಷಗಳಿಂದ ತೀವ್ರ ಟೀಕೆಗೂ ಒಳಗಾಗಿದ್ದಾರೆ. ಹಿಂದೆ ಬಿಜೆಪಿ ಪಕ್ಷದೊಳಗೆ ಬಂಡಾಯ ಸ್ಫೋಟಗೊಂಡು 5 ಜನ ಪಕ್ಷೇತರರು ಒಳಗೊಂಡ 16 ಶಾಸಕರು ಯಡಿಯೂರಪ್ಪನವರ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆದಿದ್ದರಿಂದಾಗಿ ಅಲ್ಪ ಮತಕ್ಕೆ ಇಳಿದು ಸರ್ಕಾರ ಉರುಳುವ ಸನ್ನಿವೇಶ ಸೃಷ್ಟಿಯಾಗಿತ್ತಲ್ಲ, ಆಗ ಬೋಪಯ್ಯನವರು ಬಿಜೆಪಿ ಸರ್ಕಾರವನ್ನು ಉಳಿಸಲೆಂದೇ ರಾಜ್ಯಪಾಲರು ಬಹುಮತ ಸಾಬೀತಿಗೆ ನೀಡಿದ ಅವಧಿಗೆ ಮುನ್ನವೇ ಶಾಸಕರನ್ನು ಅನರ್ಹಗೊಳಿಸಿ ಮತದಾನಕ್ಕೆ ಬರದಂತೆ ತಡೆದರು. ಸರ್ಕಾರ ಉಳಿದುಕೊಳ್ಳುವಂತೆ ನೋಡಿಕೊಂಡಿದ್ದರು. ಇದು ನಡೆದದ್ದು ಅಕ್ಟೋಬರ್ 10, 2010 ರಂದು, ಮತದಾನವಾಗಿದ್ದು 11 ರಂದು. ಮುಂದೆ ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದಾಗ ಸಭಾಧ್ಯಕ್ಷರ ನಿರ್ಧಾರವನ್ನು ಫೆಬ್ರವರಿ 14, 2011 ರಂದು ಎತ್ತಿ ಹಿಡಿದಿತ್ತು !. ನಂತರ ಸುಪ್ರಿಂ ಕೋರ್ಟ್ (ನ್ಯಾ ಅಲ್ತಮಸ್ ಕಬೀರ್ ಮತ್ತು ನ್ಯಾ ಸಿರಿಯಾಕ್ ಜೋಸೆಫ್‌ರ ಪೀಠ) ಮೇ 13, 2011 ರ ತೀರ್ಪಿನಲ್ಲಿ ಸಭಾಧ್ಯಕ್ಷರ ನಿರ್ಧಾರವನ್ನು, ಕಟು ಶಬ್ದಗಳಲ್ಲಿ ಟೀಕಿಸಿ ಯಡಿಯೂರಪ್ಪನವರ ಸರ್ಕಾರ ಉಳಿಸಲೆಂದೇ ಕೈಗೊಂಡ ಕ್ರಮ ಅತ್ಯಂತ ಪಕ್ಷಪಾತದಿಂದ ಕೂಡಿದೆ ಎಂದು ಹೇಳಿತ್ತು. ಈಗ ಆ ತೀರ್ಪು ಪೂರ್ಣ ಲಭ್ಯವಾಗಿದೆ.

ಅಂದರೆ ಸಭಾಧ್ಯಕ್ಷರು ತಮ್ಮ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಸಂವಿಧಾನಾತ್ಮಕವಾಗಿ ನಡೆದುಕೊಂಡಿಲ್ಲ. ಹೀಗಾಗಿ ಆ ಸ್ಥಾನದಲ್ಲಿ ಮುಂದುವರೆಯಲು ಯಾವುದೇ ನೈತಿಕ ಹಕ್ಕಿಲ್ಲ.

ಆದರೆ ಜಗತ್ತಿಗೆ ನೀತಿಪಾಠ ಹೇಳುವ ಆರೆಸ್ಸೆಸ್‌ನ ಸ್ವಯಂ ಸೇವಕರೂ ಆಗಿರುವ ಕೆ.ಜಿ.ಬೋಪಯ್ಯನವರು ರಾಜೀನಾಮೆ ನೀಡಲು ಸುತರಾಂ ಸಿದ್ಧರಿಲ್ಲ. ಹಾಗೇ ಇದನ್ನೂ ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿಯ ಭಂಡತನಕ್ಕೂ ಮಿತಿಯೇ ಇಲ್ಲ. ಸಭಾಧ್ಯಕ್ಷರ ನಡವಳಿಕೆ ಖಂಡನಾರ್ಹ. ಇಂತಹ ಹಿನ್ನೆಲೆಯಲ್ಲಿ 4 ಪಕ್ಷೇತರರು ಕಪ್ಪು ಬಾವುಟ ಸದನದಲ್ಲಿ ತೋರಿಸುತ್ತಿದ್ದಾರೆ ನಿಜ. ಸದನದ ಆರಂಭಕ್ಕೆ ಮೊದಲು, ನಂತರ ಕಾಂಗ್ರೆಸ್ ರಾಜೀನಾಮೆ ಕೇಳೀತು. ಜೆಡಿ(ಎಸ್) ಹೌದೆಂದು ಮೌನ ವಹಿಸಿತು. ಪಕ್ಷೇತರರ ಪ್ರತಿಭಟನೆ ಮುಂದುವರೆಯಿತು. ಆದರೆ ವಿರೋಧ ಪಕ್ಷಗಳಾದ ಕಾಂಗ್ರೆಸ್-ಜೆಡಿ(ಎಸ್)ಗಳು ಅವಿಶ್ವಾಸ ನಿರ್ಣಯ ಮಂಡಿಸದೇ ಮನಸ್ಸಿನಲ್ಲೇ ಮಂಡಿಗೆ ಮೇಯುತ್ತಿರುವುದು ವಿಚಿತ್ರ !. ಸದನದಲ್ಲಿ ನಿರ್ಣಯ ಮಂಡಿಸಲು 14 ದಿನಗಳು ಬೇಕು ಎಂಬುದೇನೋ ಸರಿ. ಆದರೆ

ಪುಟ 15ಕ್ಕೆ...

ಕಾರ್ಟೂನ್ ಕಾರ್ನರ್



ಬೇಡಿಕೆ ಈಡೇರಿಸದ ಸರ್ಕಾರ : ಹಗಲು ರಾತ್ರಿ ಬಿಸಿಯೂಟ ನೌಕರರ ಮುಷ್ಕರ

ಬಿಟ್ಟಿ ಚಾಕರಿ ಎಂಬುದು ಯಾವುದೋ ಮುಗಿದು ಹೋದ ಹಳೆಯ ಕಾಲದ ಅಂತೆ ಕಂತೆಯಲ್ಲ. ಆಳುವ ಸರ್ಕಾರಗಳೇ ನೀತಿ ನಿಯಮ, ಕಾನೂನು ಉಲ್ಲಂಘಿಸಿ ಬಹುತೇಕ ಬಿಟ್ಟಿ ಚಾಕರಿ ಎನ್ನುವಂತಹ ದುಡಿಮೆಯನ್ನು ನೌಕರರಿಂದ ಮಾಡಿಸುತ್ತಿವೆ. ಇದಲ್ಲದೇ ಹಲವು ಬಗೆಯ ಕಿರುಕುಳಗಳು ಬಿಸಿಯೂಟ ನೌಕರರ ಪಾಲಿಗೆ. ಇವರ ಇತ್ತೀಚಿನ ಹೋರಾಟದ ಕುರಿತು ಓದಿ.



ಎಸ್.ವರಲಕ್ಷ್ಮಿ

ಹಾಸನ ಜಿಲ್ಲೆ, ಅರಸೀಕೆರೆ ತಾಲೂಕು ಧನಂಜಯಪುರ ಶಾಲೆಯಲ್ಲಿ 9 ವರ್ಷಗಳಿಂದ ದುಡಿಯುತ್ತಿದ್ದ ಮುಖ್ಯ ಅಡುಗೆದಾರರಿಗೆ ಅವರ ಮುಖ್ಯೋಪಾಧ್ಯಾಯರು "ನೀವು ಶಾಲೆಯೊಳಗಿನ ನೀರನ್ನು ಬಳಸಬೇಡಿ, ಹೊರಗಡೆಯಿಂದ ನೀರನ್ನು ತಂದು ನಮಗೆ ಪ್ರತ್ಯೇಕ ಅಡುಗೆ ಮಾಡಬೇಕು" ಎಂದು ಹೇಳಿದ್ದರು. " ಎರಡೆರಡು ತರಹ ನೀರನ್ನು ತಂದು ಅಡುಗೆ ಮಾಡಲು ಆಗೊಲ್ಲ" ಎಂದು ಹೇಳಿದ್ದಕ್ಕೆ ಬಿಸಿಯೂಟ ನೌಕರಳಿಗೆ ಸಿಕ್ಕಿದ್ದು ಕಪಾಳಮೋಕ್ಷ.

ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಶಾಲೆಗಳಲ್ಲಿ ಬಿಸಿಯೂಟ ಮಹಿಳೆಯರಿಗೆ 1000 ಸಂಬಳದ ಬದಲಿಗೆ 800ರೂ. ಮಾತ್ರ ಕೊಡುವುದು.

ಶಾಲೆಯಲ್ಲಿ ಬೆಳಿಗ್ಗೆ 10 ಗಂಟೆ ಆಗುವುದರೊಳಗೆ ಹಾಜರಿ ಇರಬೇಕು, ಅಧಿಕೃತವಾಗಿ ಕೆಲಸ ಒಂದೂವರೆ ತನಕ ಮಾತ್ರ ಆದರೆ ಬಿಸಿಯೂಟ ನೌಕರರು 3 ಗಂಟೆಯಾದರೂ ಶಾಲೆಯೊಳಗೆ ಇರಬೇಕು.

ಅಧಿಕೃತವಾಗಿ ಅಡುಗೆ ಮಾಡಿ, ಧಾನ್ಯಗಳನ್ನು ಸ್ವಚ್ಛ ಮಾಡಿ, ಪಾತ್ರೆ ತೊಳೆಯುವುದು, ಊಟ ಬಡಿಸುವುದು ಮಾತ್ರ ಇವರ ಕೆಲಸ. ಆದರೆ ಹಲವಾರು ಶಾಲೆಗಳಲ್ಲಿ ಕಸ ಗುಡಿಸುವುದು, ಶೌಚಾಲಯ ತೊಳೆಯುವುದು, ಶಾಲಾ ಮಾಸ್ತರುಗಳಿಗೆ ಪ್ರತ್ಯೇಕ ಅಡುಗೆ ಮಾಡುವುದು, ಸಾರ್ವಜನಿಕ ದಿನಾಚರಣೆಗಳಲ್ಲಿ ಅಡುಗೆ ಮಾಡುವುದನ್ನು ನಿರಂತರವಾಗಿ ಮಾಡಿಸುತ್ತಲೇ ಬರಲಾಗುತ್ತಿದೆ.

ಕೆಲವೆಡೆ ಲೈಂಗಿಕ ಕಿರುಕುಳಗಳು, ಅಕ್ಟೋಬರ್ 2011ರಿಂದ ಇವರಿಗೆ. ಬರುವ ರೂ.1000ಗಳ ಸಂಬಳವು ಇದುವರೆಗೂ ಪಾವತಿಯಾಗಿಲ್ಲ.

ಇವರ ಕೆಲಸ ಖಾಯಂ ಅಲ್ಲದ್ದರಿಂದ ಎಸ್‌ಡಿಎಂಸಿ (ಶಾಲಾಭಿವೃದ್ಧಿ ಸಮಿತಿ) ಅವರಿಗೆ ಶಾಲಾಭಿವೃದ್ಧಿಯ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಅಡುಗೆಯವರನ್ನು ಮೇಲ್ವಿಚಾರಣೆ ಮಾಡೋದು ಹೆಚ್ಚು. ಪ್ರತಿನಿತ್ಯ ಅವರ ಕಿರಿಕಿರಿ, ಗ್ರಾಮ ಪಂಚಾಯಿತಿ ಸದಸ್ಯರ ಕಿರಿಕಿರಿ, ರಾಜಕೀಯ ಪುಡಾರಿಗಳ ಕಿರಿಕಿರಿ. ಎಲ್ಲರ ಕಣ್ಣು ಇವರ ಮೇಲೆ. ಇಷ್ಟೆಲ್ಲಾ ಕಿರಿಕಿರಿಯಾದರೂ, ಯಾರೂ ಎಷ್ಟೇ ಪ್ರಶ್ನೆ ಕೇಳಿದರೂ ಇವರು ಮಾತ್ರ ಸಮಾಧಾನದಿಂದಲೇ ಉತ್ತರಿಸಬೇಕು. ಇಲ್ಲದಿದ್ದರೆ ಇವರಿಗೆ ಕೆಲಸದಿಂದ ತೆಗೆಯುವ ಬೆದರಿಕೆ.

ರೂ.1000 ಹಣವು ಆ ಮಹಿಳೆಯರಿಗೆ ಯಾಕೆ ಹೋಗಬೇಕು. ನಮ್ಮ ಜಾತಿಯ ಜನರಿಗ್ಯಾರಿಗಾದರೂ ಸಿಗಲಿ ಅಥವಾ ನಮ್ಮ ಕುಟುಂಬಕ್ಕೆ ಸಿಗಲಿ ಎಂದು ಕಾಯುವ ಜಾತಿವಾದಿ, ಸ್ವಾರ್ಥಿಜನಗಳ ಕಾಟ. ಜೋರಾಗಿ ಉಸಿರಾಡಿದರೂ ಕೆಲಸ ಹೋಗುವ ಅಪಾಯ.

ಶಾಲೆಗೆ ಸರಬರಾಜು ಆಗುವ ಅಕ್ಕಿ, ಬೇಳೆ ಯಾವತ್ತು ಸರಿ ಪ್ರಮಾಣದಲ್ಲಿರುವುದಿಲ್ಲ. ಮತ್ತು ಒಳ್ಳೆ ಗುಣಮಟ್ಟದ ಆಹಾರವನ್ನು ಸರಬರಾಜು ಮಾಡುವುದಿಲ್ಲ, ತೂಕ ಕಡಿಮೆ ಆಗಿರುವುದನ್ನು ಪ್ರಶ್ನೆ ಮಾಡದೇ ಅಡುಗೆಯವರ ಮೇಲೆ ಕಳ್ಳತನದ ಆರೋಪಗಳನ್ನು ಹೊರಿಸುವುದು ಮಾಮೂಲಿಯಾಗುತ್ತಿದೆ.

ಹೀಗೆ ಹಲವು ರೂಪದ ಅವಮಾನಗಳನ್ನು ಸಹಿಸಿಕೊಂಡು ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಇವರ ಅಕ್ಷರ ದಾಸೋಹ ಯೋಜನೆಯಲ್ಲಿ ದುಡಿಯುತ್ತಿರುವ ಮಹಿಳೆಯರು ಒಂದು ಲಕ್ಷ ಮೂರು ಸಾವಿರ ಮಹಿಳೆಯರು 10 ವರ್ಷಗಳಿಂದ ಯಾವುದೇ ಕನಿಷ್ಟ ಸವಲತ್ತುಗಳು ಇಲ್ಲದೆ ದುಡಿಯುತ್ತಿದ್ದಾರೆ.

ಶಾಲಾ ಮಕ್ಕಳ ಗೈರು ಹಾಜರಾತಿ ತಡೆಯಲು, ಕಲಿಕೆಯಲ್ಲಿ ಗಮನವಿಡುವುದಕ್ಕೆ ಅನುಕೂಲ ಮಾಡಿಕೊಡಲು, ಪ್ರತಿಯೊಂದು ಮಗುವು ಶಾಲೆಗೆ ಬರಬೇಕೆಂಬ ಘೋಷಣೆಯೊಂದಿಗೆ ಬಂದಿರುವುದು ಈ ಕೇಂದ್ರ ಸರ್ಕಾರದ ಈ ಯೋಜನೆ. ಸರ್ಕಾರಗಳು ಹಲವು ಯೋಜನೆಗಳನ್ನು ದೊಡ್ಡ ದೊಡ್ಡ ಘೋಷಣೆಗಳೊಂದಿಗೆ ತರುತ್ತಿವೆ. ಆದರೆ ಯೋಜನೆಯ ಬೆನ್ನೆಲುಬಾಗಿ ದುಡಿಯುವಂತವರಿಗೆ ಸೌಲಭ್ಯಗಳನ್ನು ವಂಚಿಸುವುದು ಸಾಮಾನ್ಯವಾಗುತ್ತಿದೆ.

ಈ ಯೋಜನೆಯಲ್ಲಿ ಸುಮಾರು 70 ಲಕ್ಷ ಮಕ್ಕಳಿಗೆ ದಿನನಿತ್ಯ ಊಟ ಬಡಿಸಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ 837 ಕೋಟಿ ರೂ.ಹಣವನ್ನು ಇದಕ್ಕಾಗಿ ವ್ಯಯಿಸಲಾಗುತ್ತಿದೆ. ಪಕ್ಕದ ಕೇರಳದಲ್ಲಿ ದಿನಕ್ಕೆ ಒಬ್ಬರಿಗೆ 150, ತಮಿಳುನಾಡಿನಲ್ಲಿ ತಿಂಗಳಿಗೆ ಒಬ್ಬರಿಗೆ ರೂ.5,000 ವೇತನ ನೀಡಿ "ಡಿ"ಗ್ರೂಪ್ ಎಂದು ಪರಿಗಣಿಸಿ ಖಾಯಂ ಮಾಡಲಾಗಿದೆ. ಆದರೆ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವ ರಾಜ್ಯ ಬಿಜೆಪಿ ಸರ್ಕಾರ ದಿನಕ್ಕೆ ರೂ.38 ಕೂಲಿ ಕೊಡುತ್ತಿದೆ.

ಇದನ್ನು ಹೆಚ್ಚಳ ಮಾಡಬೇಕೆಂದು ಮತ್ತು ಇತರ ಬೇಡಿಕೆಗಳನ್ನಿಟ್ಟು ಮುಖ್ಯಮಂತ್ರಿಗಳನ್ನು, ಶಿಕ್ಷಣ ಸಚಿವರನ್ನು, ಸಂಬಂಧಿಸಿದ ಅಧಿಕಾರಿಗಳನ್ನು ಹಲವು ಬಾರಿ ಭೇಟಿ ಮಾಡಿ ಮನವಿ ಕೊಟ್ಟರೂ ಉಪಯೋಗವಾಗುತ್ತಿಲ್ಲ. ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ 'ಅಕ್ಷರ ದಾಸೋಹ ನೌಕರರ ಸಂಘಟನೆ'-(ಸಿಐಟಿಯು) ನೇತೃತ್ವದಲ್ಲಿ ಜನವರಿ 23-24, 2012ರಂದು ರಾತ್ರಿ ಹಗಲು ಹೋರಾಟವನ್ನು ನಡೆಸಲಾಯಿತು. ಈ ಹೋರಾಟಕ್ಕೆ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಹಾಸನ, ಬೆಳಗಾಂ, ಗದಗ, ಬಿಜಾಪುರ, ಬಾಗಲಕೋಟೆ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ಉಡುಪಿ ಜಿಲ್ಲೆಗಳಿಂದ ಸುಮಾರು 3,000 ಮಹಿಳೆಯರು ಬಂದಿದ್ದರು.

ಬೆಂಗಳೂರಿನ ಕೊರೆಯುವ ಚಳಿಯಲ್ಲಿ ರಾತ್ರಿಯೆಲ್ಲಾ ಬೀದಿಯಲ್ಲಿಯೇ ಮಲಗಿದ್ದರು. ಶಿಕ್ಷಣ ಇಲಾಖೆಯ ಆಯುಕ್ತರು ಹೋರಾಟದ ಸ್ಥಳಕ್ಕೆ ಆಗಮಿಸಿ ಕೆಲವು ಆಶ್ವಾಸನೆಗಳನ್ನು ನೀಡಿದರು. ಈ ಹೋರಾಟಕ್ಕೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಕೆಪಿಆರ್‌ಎಸ್‌ನ ಮಾರುತಿ ಮಾನ್ಪಡೆ, ಕೃಷಿಕೂಲಿಕಾರರ ಸಂಘದ ನಿತ್ಯಾನಂದಸ್ವಾಮಿ, ಸಿಐಟಿಯುವಿನ ಮೀನಾಕ್ಷಿ ಸುಂದರಂ, ಎಸ್‌ಎಫ್‌ಐನ ಅನಂತ ನಾಯಕ್, ಡಿವೈಎಫ್‌ಐನ ರಾಜಶೇಖರಮೂರ್ತಿ.ಬಿ, ಜೆಎಂಎಸ್‌ನ ಕೆ.ಎಸ್.ಲಕ್ಷ್ಮಿರವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. ಎಸ್‌ಎಫ್‌ಐ ಮತ್ತು ಸಮುದಾಯದ ಗೆಳೆಯರು ಮಧ್ಯರಾತ್ರಿಯವರೆಗೂ ಕ್ರಾಂತಿಗೀತೆಗಳನ್ನು ಹಾಡುವ ಮುಖಾಂತರ ಹೋರಾಟಕ್ಕೆ ಹುರುಪನ್ನು ತುಂಬಿದರು.

ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆದು ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಲು ಭರವಸೆ ನೀಡಿರುತ್ತಾರೆ.

1. ವೇತನವನ್ನು ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಲು ಪ್ರಯತ್ನಿಸುವುದು.
2. ಜನಶ್ರೀ ಭೀಮಾ ಯೋಜನೆ ಕೊಡುವುದು
3. ಹಾಜರಾತಿ ಆಧಾರದಲ್ಲಿ ಕೆಲಸ ಕಳೆದುಕೊಂಡವರಿಗೆ ಮಕ್ಕಳ ದಾಖಲಾತಿ ಸಂಖ್ಯೆ ಜಾಸ್ತಿ ಆದಲ್ಲಿ ಪುನ: ಇದರಡಿ ನೇಮಕ ಮಾಡಿಕೊಳ್ಳುವುದು.
4. ಸಕಾರಣವಿಲ್ಲದೇ ಅಡುಗೆ ಸಿಬ್ಬಂದಿಯವರನ್ನು ಕೈಬಿಡುವ ಕ್ರಮಕ್ಕೆ ತಡೆ, ತಪ್ಪುಗಳು ನಡೆದಿದೆ ಎಂದಾಗ ಅಡುಗೆಯವರಿಗೆ ಮೆಮೊ ಕೊಟ್ಟು ತಪ್ಪನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಆದೇಶ.
5. ಇನ್ನು ಮುಂದೆ ಯಾವುದೇ ಶಾಲೆಯ ಬಿಸಿಯೂಟ ಪೂರೈಕೆ ಹೊಣೆಯನ್ನು ಖಾಸಗಿಯವರಿಗೆ ನೀಡದಿರುವುದು, ಪರಿಶೀಲನಾ ಸಮಿತಿ ಕಳುಹಿಸಲು ಕ್ರಮ.

ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿರುತ್ತಾರೆ. ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಹೋರಾಟ ಹಿಂತೆಗೆದುಕೊಳ್ಳಲಾಯಿತು.





ಭ್ರಷ್ಟಾಚಾರಿ ಸರಕಾರವನ್ನು ಬೆಂಬಲಿಸುವ ಆರೆಸ್ಸೆಸ್‌ಗೆ ಸರ್ವ ಸಂಪನ್ನಳಾದ ಭಾರತಮಾತೆಯನ್ನು ರೂಪಿಸುವುದು ಸಾಧ್ಯವೇ? ಸಿಪಿಐ(ಎಂ) ಪ್ರಶ್ನೆ

ಜನವರಿ 31, 2011 ರಂದು ಸಿಪಿಐ(ಎಂ) ರಾಜ್ಯ ಸಮಿತಿ ಬಿಡುಗಡೆ ಮಾಡಿರುವ ಹೇಳಿಕೆ

ಬಹುತೇಕ 4 ವರ್ಷಗಳಿಂದ ಬಿಜೆಪಿ ಸರಕಾರದ ಭ್ರಷ್ಟಾಚಾರವನ್ನು ಸಹಿಸಿಕೊಂಡು, ಪೋಷಿಸಿಕೊಂಡು ಬಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್.ಎಸ್.ಎಸ್.)ವು ಈಗ ಭ್ರಷ್ಟಾಚಾರಿಗಳನ್ನು ಕರೆದು ಬುದ್ದಿವಾದ ಹೇಳುತ್ತಿರುವುದು 'ಚುನಾವಣಾ ಗಿಮಿಕ್' ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಮಂಡಳಿ ಪತ್ರಿಕಾ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ.

"ದೋಷ ಮುಕ್ತ, ಸರ್ವ ಸಂಪನ್ನಳಾದ ಭಾರತ ಮಾತೆಯನ್ನು ರೂಪಿಸುವುದೇ ಆರ್.ಎಸ್.ಎಸ್ ನ ಗುರಿಯಾಗಿದೆ" ಎಂದು ಆ ಸಂಘಟನೆಯ ಸರ ಸಂಘ ಚಾಲಕರಾದ ಮೋಹನ್ ಭಾಗವತ್ ರವರು "ಹಿಂದೂ ಶಕ್ತಿ ಸಂಗಮ"ದ ಸಮಾರೋಪದ ಸಂದರ್ಭದಲ್ಲಿ ಹೇಳಿದ್ದಾರೆ. ಭೂ ಕಬಳಿಕೆಯ ಆರೋಪದ ಹಿನ್ನೆಲೆಯಲ್ಲಿ ಸ್ವತಃ 'ಸ್ವಯಂ ಸೇವಕ'ರಾಗಿರುವ ಯಡಿಯೂರಪ್ಪನವರು ಜೈಲು ಸೇರಬೇಕಾಗಿ ಬಂದಾಗ ಅವರ ಮೇಲೆ ಆರ್.ಎಸ್.ಎಸ್ ಯಾವುದೇ ಕ್ರಮ ಕೈಗೊಂಡಿಲ್ಲ, ಮಾತ್ರವಲ್ಲದೆ ಹಿಂದೂ ಶಕ್ತಿ ಸಂಗಮದಲ್ಲಿ 'ಗಣ ವೇಷ'ಧರಿಸಿ ಸಮಾರಂಭ'ದಲ್ಲಿ ಹಾಜರಾಗಿದ್ದ ಯಡಿಯೂರಪ್ಪನವರು ಹಾಗೂ ಮೋಹನ್ ಭಾಗವತ್‌ರವರು 45 ನಿಮಿಷಗಳ ಕಾಲ ಮಾತುಕತೆ ನಡೆಸಿದ ವರದಿ ಇದೆ. ಅಂದರೆ ಆರ್.ಎಸ್.ಎಸ್. ಭ್ರಷ್ಟಾಚಾರಿಗಳನ್ನು ಪೋಷಿಸುತ್ತಿದೆ ಮತ್ತು ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಆದ್ದರಿಂದ ಆರ್.ಎಸ್.ಎಸ್.ಗೆ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ಯಾವುದೇ ನೈತಿಕ ಹಕ್ಕು ಇಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ತಾನು ಭ್ರಷ್ಟಾಚಾರ ಹಾಗೂ ದೇಶ ದ್ರೋಹಿಗಳ ವಿರುದ್ಧ ಎಂದು ಆರ್.ಎಸ್.ಎಸ್. ಹೇಳುತ್ತಿದೆ. ಆದರೆ, ಯಡಿಯೂರಪ್ಪನವರು ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ, ಇನ್ನೊಬ್ಬ ಸ್ವಯಂ ಸೇವಕನಾದ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯವರ ಮಗನ ಮದುವೆ ಸಂದರ್ಭದಲ್ಲಿ 500 ಕೋಟಿ ರೂ. ನೀಡಿರುವುದಾಗಿ ಬಹಿರಂಗವಾಗಿ ಹೇಳಿಕೊಂಡಿದ್ದಾರೆ.

ಅಕ್ರಮ ಗಣಿಗಾರಿಕೆ ಆರೋಪ ಹೊತ್ತಿರುವ ಬಳ್ಳಾರಿ ಜನಾರ್ದನ ರೆಡ್ಡಿ ಸಹೋದರರು ನೀಡಿದ ಚಿನ್ನದ ಖಡ್ಗವನ್ನು ನಿತಿನ್ ಗಡ್ಕರಿಯವರು ಸ್ವೀಕಾರ ಮಾಡಿದುದನ್ನು ಆರ್.ಎಸ್.ಎಸ್ ಗಮನಿಸಿದೆ ಎಂದು ಸಿಪಿಐ(ಎಂ) ಭಾವಿಸುತ್ತದೆ ಮತ್ತು ವಿರೋಧ ಪಕ್ಷದ ನಾಯಕಿ ಸುಶ್ಮಾ ಸ್ವರಾಜ್ ಬಗ್ಗೆಯೂ ಇಂತಹುದೇ ಆರೋಪಗಳಿವೆ. ಆ ಸಂದರ್ಭದಲ್ಲಿ ಚಕಾರ ಎತ್ತದ ಆರ್.ಎಸ್.ಎಸ್‌ಗೆ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ನೈತಿಕ ಹಕ್ಕು ಇದೆಯೇ ಎಂದು ಸಿಪಿಐ(ಎಂ) ಪ್ರಶ್ನಿಸಿದೆ. ●

ಸಾಮ್ರಾಜ್ಯ ಶಾಹಿ ಆರ್ಥಿಕ ನೀತಿಗೆ ಬೆಂಬಲ

ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳವನ್ನು ಆಹ್ವಾನಿಸುವ ರಾಜ್ಯ ಬಿಜೆಪಿ ಸರಕಾರ ವಿದೇಶಿ ಕಂಪನಿಗಳಿಗೆ ಮಣೆ ಹಾಕಿದೆ. ಗುಜರಾತ್ ರಾಜ್ಯದಲ್ಲೂ ಅಂತಹುದೇ ನೀತಿಯನ್ನು ಮುಂದುವರೆಸುತ್ತಿದೆ. ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದಾಗಲೂ ಇಂದು ಕಾಂಗ್ರೆಸ್ ಸರಕಾರ ಅನುಸರಿಸುತ್ತಿರುವ ನೀತಿಗಳನ್ನೇ ಜ್ಯಾರಿ ಮಾಡಿತ್ತು. ಜನರ ಕಣ್ಣಿಗೆ ಮಣ್ಣೆರೆಚುವ ರೀತಿಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವನ್ನು ವಿರೋಧಿಸುವ ಬಿಜೆಪಿ, ಪೆನ್ಶನ್ ಫಂಡನ್ನು ಖಾಸಗಿಯವರಿಗೆ ನೀಡುವುದರಲ್ಲಿ, ಜೀವ ವಿಮೆ, ಬ್ಯಾಂಕುಗಳಲ್ಲಿ ವಿದೇಶಿ ಬಂಡವಾಳವನ್ನು ಹೆಚ್ಚಿಸುವುದರಲ್ಲಿ, ಆ ಪಕ್ಷಕ್ಕೆ ಬೆಂಬಲ ನೀಡುತ್ತಿದೆ. ಒಟ್ಟಾರೆಯಾಗಿ ಇಂದಿನ ಆರ್ಥಿಕತೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಧಾರೆ ಎರೆಯುವ ನೀತಿಗೆ ಬಿಜೆಪಿ ಮುಂದಾಗುತ್ತಿದೆ.

ದೇಶ ಭಕ್ತರೆಂದು ಹೇಳಿಕೊಳ್ಳುವ ಆರ್.ಎಸ್.ಎಸ್.ನ ಸ್ವಯಂಸೇವಕರು ಈ ನೀತಿಗಳನ್ನು ಜ್ಯಾರಿ ಮಾಡುತ್ತಿರುವಾಗ ಅವರನ್ನು ದೇಶ ಭಕ್ತರೆಂದು ಹೇಗೆ ಹೇಳಲು ಸಾಧ್ಯ?.

ಆಡಳಿತ ಯಂತ್ರ ಕುಸಿತ: ಆರ್.ಎಸ್.ಎಸ್.ನ ಪಾತ್ರ ಏನು ?

"ಸಂಘ"ದ ಸ್ವಯಂ ಸೇವಕರೇ ಮುಖ್ಯಮಂತ್ರಿಯಾಗಿರುವ ಬಿಜೆಪಿ ಸರಕಾರದ ಆಡಳಿತ ಯಂತ್ರ ಕುಸಿದು ಬಿದ್ದಿದೆ. ಹಾಲಿನ ದರ ಹೆಚ್ಚಳ, ವಿದ್ಯುತ್ ದರ ಹೆಚ್ಚಳದ ಮೂಲಕ ಜನ ಸಾಮಾನ್ಯರ ನಿತ್ಯ ಜೀವನಕ್ಕೆ ಈ ಸರಕಾರ ಗಂಡಾಂತರ ತರುತ್ತಿದೆ. ಹಾಲಿನ ದರ, ವಿದ್ಯುತ್ ದರವನ್ನು ಇನ್ನೂ ಹೆಚ್ಚಿಸಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸದಾನಂದ ಗೌಡರು ಇಂಗಿತ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ನಗರ ಮಾತ್ರವಲ್ಲದೆ, ರಾಜ್ಯದ ನಗರಗಳಲ್ಲಿ ದಿನ ನಿತ್ಯ ಕೊಲೆಗಳಾಗುತ್ತಿವೆ. ಹೆಚ್ಚಿನ ಪ್ರಕರಣಗಳಲ್ಲಿ ಆರೋಪಿಗಳ ಬಂಧನವಾಗಿಲ್ಲ. ರೈತರ ಆತ್ಮಹತ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸರ್ವ ಸಂಪನ್ನಳಾದ ಭಾರತ ಮಾತೆಯ ಕನಸು ಕಾಣುವ ಆರ್.ಎಸ್.ಎಸ್. ಸರಕಾರಕ್ಕೆ ಹೇಗೆ ಮಾರ್ಗದರ್ಶನ ಮಾಡುತ್ತಿದೆ ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಇನ್ನೊಂದೆಡೆ ಸರಕಾರದಲ್ಲಿನ ಸಾರ್ವಜನಿಕ ಹಣ ಆರ್.ಎಸ್.ಎಸ್. ಪ್ರಾಯೋಜಿತ ಸಂಸ್ಥೆಗಳ ಖಜಾನೆ ಸೇರುತ್ತಿದೆ. ಬಜೆಟ್‌ನಲ್ಲಿ ಸಾವಯವ ಕೃಷಿಗೆ ಮೀಸಲಾಗಿಟ್ಟ 300 ಕೋಟಿರೂ. ಹಣವು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸಾವಯವ ಕೃಷಿ ಮಿಷನ್ ಹೆಸರಿನಲ್ಲಿ ಬಹುತೇಕ ಆರ್.ಎಸ್.ಎಸ್.ನ ಸಂಸ್ಥೆಗಳಿಗೆ ಹಾಗೂ ಅವರ ಕಾರ್ಯಕರ್ತರ ಕೈ ಸೇರುತ್ತಿದೆ ಎಂಬ ವರದಿ ಇದೆ.

ಕೋಮುವಾದಕ್ಕೆ ಕುಮ್ಮಕ್ಕು

'ವಿರಾಟ್ ಹಿಂದೂ ಶಕ್ತಿ ಪ್ರದರ್ಶನ'ದ ಹೆಸರಿನಲ್ಲಿ ಕೋಮುವಾದವನ್ನು ಹರಿಯ ಬಿಟ್ಟು ದೇಶದ ಐಕ್ಯತೆಗೆ ಆರ್.ಎಸ್.ಎಸ್. ಧಕ್ಕೆ ಮಾಡುತ್ತಿದೆ. "ಭಾರತದಲ್ಲಿ ಹೆಜ್ಜೆ–ಹೆಜ್ಜೆಗೂ ವೈವಿಧ್ಯತೆ ತುಂಬಿದೆ. ಜಾತಿ, ಭಾಷೆ, ಜೀವನ ವಿಧಾನ ಎಲ್ಲದರಲ್ಲೂ ವ್ಯತ್ಯಾಸ ಕಾಣುತ್ತದೆ" ಎಂದು ಹೇಳುವ ಸರಸಂಘ ಚಾಲಕರು ಹಿಂದೂ ಸಂಸ್ಕೃತಿಯನ್ನು ಸ್ಥಾಪಿಸಬೇಕು ಎಂದು ಹೇಳುವ ಮೂಲಕ ಏಕ ಸಂಸ್ಕೃತಿಯನ್ನು ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಭಾರತ ಮಾತೆಗೆ ಮಾಡುತ್ತಿರುವ ದ್ರೋಹ ಅಲ್ಲವೆ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರ್.ಎಸ್.ಎಸ್. ಪ್ರಮುಖ ಮುಖಂಡರಾಗಿರುವ ಕಲ್ಲಡ್ಕ ಪ್ರಭಾಕರ್ ಭಟ್ ಉಪ್ಪಿನಂಗಡಿಯಲ್ಲಿ ನಡೆದ ಹಿಂದೂ ಸಮಾಜ್ಯೋತ್ಸವದಲ್ಲಿ ಭಾಷಣ ಮಾಡಿ ಕೋಮು ಭಾವನೆಯನ್ನು ಪ್ರಚೋದಿಸಿದ್ದಾರೆ. ಜಾಮೀನು ರಹಿತ ವಾರೆಂಟ್ ಇದ್ದಾಗಲೂ ಅವರನ್ನು ಇದುವರೆಗೂ ಬಂಧಿಸಿಲ್ಲ. ಚುನಾವಣೆ ಹತ್ತಿರ ಬರುತ್ತಿದೆಯೆನ್ನುವಾಗ ಕೋಮು ವಿಭಜನೆ ಮಾಡಿ "ಹಿಂದೂ"ಗಳ ಮತಗಳನ್ನು ಬಿಜೆಪಿಗೆ ವರ್ಗಾಯಿಸುವ ಕುತಂತ್ರವನ್ನು ಆರ್.ಎಸ್.ಎಸ್. ಮಾಡುತ್ತಿದೆ. ಪ್ರತಿ ಚುನಾವಣಾ ಸಂಧರ್ಭದಲ್ಲಿ ಹಿಂದೂ ಸಮಾಜ್ಯೋತ್ಸವ, ಇತ್ಯಾದಿ ಮೂಲಕ ಭಾವನೆ ಕೆರಳಿಸುವ ಕೆಲಸ ಮಾಡುತ್ತಾ ಬಂದಿರುವುದನ್ನು ಸಿಪಿಐ(ಎಂ) ಮನಗಂಡಿದೆ.

ಆದ್ದರಿಂದ ಆರ್.ಎಸ್.ಎಸ್. ನೀತಿಗಳಿಂದ "ಹಿಂದೂ ಸಂಸ್ಕೃತಿಯನ್ನು ಕಾಪಾಡುವುದೂ ಸಾಧ್ಯವಿಲ್ಲ ಅಥವಾ ಸಾಮರಸ್ಯಯುಕ್ತ, ದೋಷ ಮುಕ್ತ, ಸರ್ವ ಸಂಪನ್ನಳಾದ ಭಾರತಮಾತೆಯನ್ನು ರೂಪಿಸುವುದೂ ಸಾಧ್ಯವಿಲ್ಲ" ಎಂದು ಸಿಪಿಐ(ಎಂ)ನ ಖಚಿತ ಅಭಿಪ್ರಾಯಪಟ್ಟಿದೆ.

ಪಂಕ್ತಿಬೇಧ–ಜಾತಿ ಬೇಧ
ಪೇಜಾವರ ಸ್ವಾಮೀಜಿ ಎದುರು ಕಪ್ಪು ಬಾವುಟ ಪ್ರದರ್ಶನ


ಹರಪನಹಳ್ಳಿಯ ಶ್ರೀಸುಮಧ್ವ ನವಮಿ ಉತ್ಸವ ಹಾಗೂ ಉಡುಪಿಯ ಶ್ರೀಕೃಷ್ಣ ಮಠದ ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರ 80ನೇ ವರ್ಷದ ವರ್ಧಂತಿ ಉತ್ಸವದ ಸಂದರ್ಭಕ್ಕೆ ಆಗಮಿಸಿದ ಪೇಜಾವರ ಶ್ರೀಗಳಿಗೆ ಸಿಪಿಐ(ಎಂ) ಕಾರ್ಯಕರ್ತರು ಕಪ್ಪು ಬಾವುಟ–ಪಕ್ಷದ ಬಾವುಟ ಪ್ರದರ್ಶಿಸಿ, ಉಡುಪಿ ಶ್ರೀ ಕೃಷ್ಣ ದೇವಾಲಯ ಸೇರಿದಂತೆ ರಾಜ್ಯದ ನೂರಾರು ದೇವಾಲಯಗಳಲ್ಲಿ ಆಚರಿಸುತ್ತಿರುವ ಪಂಕ್ತಿಬೇಧ, ಜಾತಿಬೇಧದ ಆಚರಣೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಲಾಯಿತು.

ರಾಜ್ಯದ ಎಲ್ಲಾ ದೇವಾಲಯಗಳಲ್ಲಿ ಸಮಾನ ಪಂಕ್ತಿ ಭೋಜನವನ್ನು ಆಯೋಜಿಸಬೇಕು. ಎಲ್ಲಾರಿಗೂ ಭೋಜನದ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು, ಅನಿಷ್ಠ ಪದ್ಧತಿಯಾದ ಮಡ ಮಡೆ ಸ್ನಾನವನ್ನು ಕೈಬೀಡಬೇಕೆಂದು ಘೋಷಣೆಗಳನ್ನು ಕೂಗಲಾಯಿತು. ಹದಿನೈದು ಜನ ಸಿಪಿಐ(ಎಂ) ಕಾರ್ಯಕರ್ತರನ್ನು ಪೋಲಿಸರು ಮಧ್ಯೆ ಪ್ರವೇಶಿಸಿ ಬಂಧಿಸಿದರು.

ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ಹೆಚ್.ವೆಂಕಟೇಶ್, ರೇಣುಕಮ್ಮ, ಮಂಜುನಾಥ ಕಲ್ಲಹಳ್ಳಿ, ಡಿವೈಎಫ್ಐನ ಬಸವರಾಜು, ತಾಲಿಗೇಶ್, ಕರಿಬಸಪ್ಪ ಮತ್ತಿತರೆ ಕಾರ್ಯಕರ್ತರು ಭಾಗವಹಿಸಿದ್ದರು.

– ಕರಿಬಸಪ್ಪ. ಪಿ





ಕಲ್ಲಡ್ಕ ಪ್ರಭಾಕರ್ ಭಟ್ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಇತ್ತೀಚೆಗೆ ಉಪ್ಪಿನಂಗಡಿಯಲ್ಲಿ ನಡೆದ ಹಿಂದೂ ಸಮಾಜೋತ್ಸವದಲ್ಲಿ ಆರೆಸ್ಸೆಸ್ ಪ್ರಮುಖ ಕಲ್ಲಡ್ಕ ಪ್ರಭಾಕರ ಭಟ್ಟ ಅವರು ಕೋಮು ಪ್ರಚೋದಕ ಭಾಷಣ ಮಾಡಿದ ಪ್ರಕರಣದಲ್ಲಿ ಪೋಲೀಸು ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಯಾದರೂ, ಅವರನ್ನು ಈವರೆಗೂ ಬಂಧಿಸದಿರುವುದನ್ನು ಖಂಡಿಸಿ ಹಾಗೂ ಆತನನ್ನು ಶೀಘ್ರವೇ ಬಂಧಿಸಿ ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಆಗ್ರಹಿಸಿ ಸಿಪಿಎಂ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜನವರಿ 31 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.


ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು, ಪ್ರಭಾಕರ ಭಟ್ಟರ ಮೇಲೆ ದೂರು ದಾಖಲಿಸಿದ ಬಳಿಕ ಆತ ಸರಕಾರೀ ಕಾರ್ಯಕ್ರಮದಲ್ಲಿ ಗಣ್ಯರ ಸ್ಥಾನದಲ್ಲಿ ಭಾಗವಹಿಸಿದ್ದಾರೆ. ಮುಖ್ಯ ಮಂತ್ರಿಗಳ ಕಾರ್ಯಕ್ರಮದಲ್ಲಿ ಗೃಹ ಸಚಿವ ಆರ್.ಅಶೋಕ್ ಅವರೊಡನೆ ಮಾತನಾಡಿದ್ದಾರೆ. ಕಾನೂನಿಗಿಂತಲೂ ಮೀರಿದ ವ್ಯಕ್ತಿ ಅವರಾಗಿದ್ದಾರೆಯೇ? ಕಲ್ಲಡ್ಕ ಪ್ರಭಾಕರರಿಗೊಂದು ಕಾನೂನು ಇತರರಿಗೊಂದು ಕಾನೂನು ಇದೆಯೇ ಎಂದು ಅವರು ಜಿಲ್ಲಾಡಳಿತಕ್ಕೆ ಪ್ರಶ್ನೆ ಹಾಕಿದರು.

ಆರೆಸ್ಸೆಸ್ ಮತ್ತು ಬಿಜೆಪಿ ಅನುಸರಿಸುವುದು ಫ್ಯಾಸಿಸ್ಟ್ ಧೋರಣೆಯನ್ನು. ಈ ಧೋರಣೆಯ ಹಿಂಬಾಲಕರಿಗೆ ನಿರ್ಲಕ್ಷ್ಯ ತೋರಿದರೆ ಅದು ಪ್ರಜಾಪ್ರಭುತ್ವಕ್ಕೇ ಅಪಾಯಕಾರಿಯಾಗುತ್ತದೆ. ಈ ಹಿಂದೆ ಮುಂಬಯಿ ಕೋಮು ಗಲಭೆಗಳಿಗೆ ಪ್ರಚೋದನಕಾರಿಯಾಗಿ ಲೇಖನ ಬರೆದ ಬಾಳಠಾಕ್ರೆ ಅವರ ವಿರುದ್ಧ ಇಲ್ಲಿನವರೆಗೂ ಕಾನೂನು ಕ್ರಮ ಕೈಗೊಳ್ಳುವ ಧೈರ್ಯವನ್ನು ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರವಾಗಲೀ ಕಾಂಗ್ರೆಸ್ ಸರ್ಕಾರವಾಗಲೀ ತೆಗೆದುಕೊಂಡಿಲ್ಲ. ದಕ್ಷಿಣ ಕನ್ನಡದಲ್ಲಿ ಮತ್ತೊಬ್ಬ ಬಾಳಠಾಕ್ರೆಯನ್ನು



ಸೃಷ್ಟಿಸಲು ಪೋಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಅವಕಾಶ ಮಾಡಿಕೊಡುತ್ತಿದೆ ಎಂದು ಟೀಕಿಸಿದರು.

ಆಡಳಿತ ನಡೆಸುತ್ತಿರುವ ಬಿಜೆಪಿ ತನ್ನ ಭ್ರಷ್ಟಾಚಾರದಿಂದಾಗಿ ಜನತೆಯಿಂದ ತಿರಸ್ಕೃತವಾಗುವ ಸಂದರ್ಭ ಬಂದಿದ್ದು, ಇಂಥ ಸಂದರ್ಭಗಳಲ್ಲಿ ಕೋಮುದ್ವೇಷವನ್ನು ಹುಟ್ಟಿಸುವ ಮೂಲಕ ಕಳಕೊಂಡ ಮತಬ್ಯಾಂಕನ್ನು ಮತ್ತೆ ಪಡೆಯಲು ಬಿಜೆಪಿ ಮತ್ತು ಆರೆಸ್ಸೆಸ್ ಪ್ರಯತ್ನಿಸುತ್ತದೆ. ಕರ್ನಾಟಕದಲ್ಲಿ ಶೀಘ್ರವೇ ಚುನಾವಣೆ ನಡೆಯುವ ಸಂಭವವಿದ್ದು, ಅದಕ್ಕೆ ಪೂರ್ವಭಾವಿಯಾಗಿ ಹಿಂದೂ ಮುಸ್ಲಿಂ ಗಲಭೆ ಹುಟ್ಟಿಸಲು ವಿದ್ವೇಷಕಾರಿ ಭಾಷಣಗಳನ್ನು ಹಿಂದೂ ಸಮಾಜೋತ್ಸವದ ಹೆಸರಿನಲ್ಲಿ ನಡೆಸಲಾಗುತ್ತದೆ ಎಂದು ಬಿ.ಮಾಧವ ಟೀಕಿಸಿದರು.



ವರದಿ : ವಾ.ಉ.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಎಂ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ಯಾದವ ಶೆಟ್ಟಿ, ಜೆ.ಬಾಲಕೃಷ್ಣ ಶೆಟ್ಟಿ ಮತ್ತು ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಪ್ರತಿಭಟನಾ ಸಭೆಯಲ್ಲಿ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್, ಯು.ಬಿ.ಲೋಕಯ್ಯ, ಬಿ.ಎಂ.ಭಟ್ ಮುಂತಾದವರು ಉಪಸ್ಥಿತರಿದ್ದರು. ಸಿಪಿಎಂ ನಾಯಕರ ಭಾಷಣಗಳನ್ನು ಸಾರ್ವಜನಿಕರು ಬಹಳ ಮಂದಿ ನಿಂತು ಆಲಿಸಿದ್ದು ವಿಶೇಷವಾಗಿದ್ದು, ಸಿಪಿಎಂ ಜನಸಾಮಾನ್ಯರ ಶಾಂತಿ ನೆಮ್ಮದಿಯ ಬಗ್ಗೆ ಕಾಳಜಿ ಹೊಂದಿರುವ ಏಕೈಕ ಪಕ್ಷವೆಂದೂ ಅವರು ಗುರುತಿಸಿರುವುದರ ಸಂಕೇತವಾಗಿದೆ.

ಕಲ್ಲಡ್ಕ ಪ್ರಭಾಕರ ಭಟ್ ಬಂಧನಕ್ಕೆ ಆಗ್ರಹಿಸಿ ಫೆಬ್ರವರಿ 10ರಂದು ರಾಜ್ಯವ್ಯಾಪಿ ಪ್ರತಿಭಟನೆ

ಹಿಂದೂ ಸಮಾಜೋತ್ಸವದಲ್ಲಿ ಕೋಮುದ್ವೇಷ ಕಾರುವ ಪ್ರಚೋದನಾಕಾರಿ ಭಾಷಣ ಮಾಡಿ ಕೋಮು ಗಲಭೆಗೆ ಕುಮ್ಮಕ್ಕು ನೀಡಿದ ಕಲ್ಲಡ್ಕ ಪ್ರಭಾಕರ ಭಟ್ ಬಂಧಿಸಿ ಕಾನೂನು ಕ್ರಮವಹಿಸಬೇಕೆಂದು ಒತ್ತಾಯಿಸಿ ರಾಜ್ಯವ್ಯಾಪಿ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಪಂಜಿಮೊಗರು ಜೋಡಿ ಕೊಲೆ ತನಿಖೆಗೆ ಆಗ್ರಹಿಸಿ ಕಪ್ಪುಬಾವುಟ ಪ್ರದರ್ಶನ

ಮಂಗಳೂರು ನಗರ ವ್ಯಾಪ್ತಿಯ ಪಂಜಿಮೊಗರುವಿನಲ್ಲಿ ತಾಯಿ ಮಗುವಿನ ಜೋಡಿ ಕೊಲೆ ನಡೆದು ಮೂರು ತಿಂಗಳು ದಾಟಿದ್ದರೂ ಪೋಲೀಸರಿಗೆ ಅಪರಾಧಿಗಳನ್ನು ಪತ್ತೆ ಮಾಡಲು ಇನ್ನೂ ಸಾಧ್ಯವಾಗಿಲ್ಲ. ತನಿಖೆಯ ನೆಪದಲ್ಲಿ ಸುಮ್ಮಸುಮ್ಮನೇ ಅಮಾಯಕರನ್ನು ಕರೆದು ಠಾಣೆಯಲ್ಲಿ ಹಿಂಸಿಸಲಾಗುತ್ತಿದೆ. ಈ ಬಗ್ಗೆ ಪಂಜಿಮೊಗರು ನಿವಾಸಿಗಳು ಡಿವೈಎಫ್ಐ ನೇತೃತ್ವದಲ್ಲಿ ಪಂಜಿಮೊಗರಿನಲ್ಲೂ, ಜಿಲ್ಲಾಧಿಕಾರಿಗಳ ಕಚೇರಿ ಎದುರೂ ಈಗಾಗಲೇ ಮೂರು ಬಾರಿ ಪ್ರತಿಭಟನೆ ನಡೆಸಿ ತನಿಖೆಗೆ ಆಗ್ರಹಿಸಿದ್ದರೂ, ಪೋಲೀಸ್ ಇಲಾಖೆ ಪತ್ತೆ ಮಾಡುವಲ್ಲಿ ವಿಫಲವಾಗಿದೆ.

ಕಳೆದ ಕೆಲವು ತಿಂಗಳಲ್ಲಿ ಇಂಥ ಕೊಲೆ ಹಾಗೂ ನಾಪತ್ತೆ ಪ್ರಕರಣಗಳು ನಡೆದಿದ್ದು ಪೋಲೀಸ್ ಇಲಾಖೆಯು ಪತ್ತೆ ಹಚ್ಚಲು ವಿಫಲವಾದ ಕೆಲವು ಪ್ರಕರಣಗಳಿವೆ. ಕೃಷ್ಣ ಜೆ.ಪಾಲೆಮಾರ್ ಅವರು ದ.ಕ.ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಪಂಜಿಮೊಗರು ಅವರು ಪ್ರತಿನಿಧಿಸುವ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ. ಸದ್ರಿ ವೈಫಲ್ಯಕ್ಕೆ ಶಾಸಕ ಹಾಗೂ ಮಂತ್ರಿಯಾಗಿ ಕೃಷ್ಣ ಪಾಲೆಮಾರರ ಹೊಣೆಗೇಡಿತನವನ್ನು ಖಂಡಿಸಿ, ಅವರ ಕಚೇರಿ ಇರುವ ಮಂಗಳೂರು ಮಹಾನಗರ ಪಾಲಿಕೆ ಎದುರು ಡಿವೈಎಫ್ಐ ಮಂಗಳೂರು ನಗರ ಸಮಿತಿಯ ವತಿಯಿಂದ ಜನವರಿ 20 ರಂದು ಕಪ್ಪು ಬಾವುಟ ಹಿಡಿದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಕೊಲೆ ಅಪರಾಧಿಗಳನ್ನು ಶೀಘ್ರ ಪತ್ತೆ ಹಚ್ಚದಿದ್ದಲ್ಲಿ ಮುಂದಿನ ದಿನಗಳಲ್ಲಿ ಕೃಷ್ಣ ಪಾಲೆಮಾರ್ ಭಾಗವಹಿಸುವ ಪ್ರತಿಯೊಂದು ಕಾರ್ಯಕ್ರಮ ದಲ್ಲೂ ಕಪ್ಪು ಬಾವುಟ ಪ್ರದರ್ಶಿಸುವುದಾಗಿ ಎಚ್ಚರಿಕೆ ನೀಡಲಾಯಿತು.

ಈ ಪ್ರತಿಭಟನಾ ಪ್ರದರ್ಶನಕ್ಕೂ ಮೊದಲು ಪಂಜಿಮೊಗರು ನಾಗರಿಕರು ಡಿವೈಎಫ್ಐ ನೇತೃತ್ವದಲ್ಲಿ ನಗರದ ಲೇಡಿಹಿಲ್ ವೃತ್ತದಿಂದ ಮಹಾನಗರ ಪಾಲಿಕೆವರೆಗೆ ಮೆರವಣಿಗೆ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಡಿವೈಎಫ್ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಜನವಾದಿ ಮಹಿಳಾ ಸಂಘಟನೆ ದ.ಕ.ಜಿಲ್ಲಾ ಕಾರ್ಯದರ್ಶಿ ಸಾಜಿದಾ, ಡಿವೈಎಫ್ಐ ನಗರ ಸಮಿತಿ ಸದಸ್ಯರು ಮತ್ತು ಪಂಜಿಮೊಗರು ಡಿವೈಎಫ್ಐ ಘಟಕ ಸಮಿತಿ ಸದಸ್ಯರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಉಡುಪಿ : ರಿಕ್ಷಾ ಚಾಲಕರ ಪ್ರತಿಭಟನೆ

ಆಟೋರಿಕ್ಷಾ ಚಾಲಕರ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಣಿಪಾಲ್ದಲ್ಲಿರುವ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಜನವರಿ 17ರಂದು ಫೆಡರೇಶನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್(ಸಿಐಟಿಯು) ವತಿಯಿಂದ ಪ್ರತಿಭಟನೆ ನಡೆಯಿತು.

ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿಗಳಿಗೆ ಚಾಲಕರ ನೋಂದಣಿ ಸರಳೀಕರಣ, ಗುರುತಿನ ಪತ್ರ ನೀಡುವುದು, ಕಲ್ಯಾಣ ಕಾರ್ಯಕ್ರಮಗಳ ಜಾರಿ, ಷೇರು ಮಾರುಕಟ್ಟೆ ಆಧಾರಿತ ನೂತನ ಪಿಂಚಣಿ ಯೋಜನೆ ಬದಲು ಖಾತರಿ ಪಿಂಚಣಿ ಯೋಜನೆ ಜಾರಿ, ಆಟೋ ಚಾಲಕರಿಗೆ ಇಎಸ್ಐ ಯೋಜನೆ ಜಾರಿ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಿಐಟಿಯು ಮುಖಂಡರಾದ ಪಿ.ವಿಶ್ವನಾಥ ರೈ, ವಿಟಲ ಪೂಜಾರಿ, ರಿಕ್ಷಾ ಯೂನಿಯನ್ನಿನ ಕುಂದಾಪುರ ಘಟಕದ ಅಧ್ಯಕ್ಷ ಕರುಣಾಕರ, ಪ್ರಧಾನ ಕಾರ್ಯದರ್ಶಿ ಚಂದ್ರ, ರಮೇಶ, ಬ್ರಹ್ಮಾವರ ಘಟಕದ ಅಧ್ಯಕ್ಷ ರಾಜು ಪೂಜಾರಿ, ಕಾರ್ಯದರ್ಶಿ ಸದಾಶಿವ ಪೂಜಾರಿ, ಶಂಕರ ಮರಕಲ, ಶಬ್ಬೀರ್, ಸಲಾಹುದ್ದೀನ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

* * * *

ಪ್ರಜಾವಾಣಿ ಪತ್ರಿಕಾ ಕಚೇರಿಗಳ ಮೇಲೆ ದಾಳಿ ಖಂಡಿಸಿ ಮಂಗಳೂರಿನಲ್ಲಿ ಪ್ರತಿಭಟನೆ

ವಿವೇಕಾನಂದರ ಬಗ್ಗೆ ಅಪೂರ್ವವಾದ ಮಾಹಿತಿಗಳನ್ನೊಳಗೊಂಡ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸತ್ಯ ತಿಳಿಯಲು ನಿರಾಕರಿಸುವ ಎಬಿವಿಪಿ ಕಾರ್ಯಕರ್ತರು ಶಿವಮೊಗ್ಗ ಮತ್ತು ಹುಬ್ಬಳ್ಳಿಗಳಲ್ಲಿರುವ ಪ್ರಜಾವಾಣಿ ಪತ್ರಿಕೆಗಳ ಕಚೇರಿಯ ಮೇಲೆ ದಾಳಿಯಿಟ್ಟು ದಾಂಧಲೆ ನಡೆಸಿ ವರದಿಗಾರರನ್ನು ಬೆದರಿಸಿದ್ದಾರೆ. ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಈ ಕ್ರೂರ ಹಲ್ಲೆಯನ್ನು ಖಂಡಿಸಿ ಜನವರಿ 18, 2012ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಎಂ ಪಕ್ಷದ ವತಿಯಿಂದ, ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರದರ್ಶನಕಾರರನ್ನುದ್ದೇಶಿಸಿ ದ.ಕ.ಜಿಲ್ಲಾ ಸಿಪಿಎಂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ ಮತ್ತು ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸಿಪಿಎಂ ಜಿಲ್ಲಾ ಸಮಿತಿ ಸದಸ್ಯರಾದ ಸದಾಶಿವದಾಸ್, ರಾಮಣ್ಣ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು. ಘಟನೆ ನಡೆದ ದಿನದೊಳಗಾಗೇ ದಿಢೀರ್ ಪ್ರದರ್ಶನಕ್ಕೆ ಕರೆಕೊಟ್ಟಾಗಲೂ, ಸಿಪಿಎಂ ಪಕ್ಷದ ಕರೆಗೆ ಬೆಂಬಲಿಸುವವರಿರುವುದಕ್ಕೆ ಈ ಪ್ರತಿಭಟನಾ ಪ್ರದರ್ಶನ ಸಾಕ್ಷಿಯಾಗಿತ್ತು.

ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ವ್ಯವಸ್ಥೆಯ ಅಡಿಯಲ್ಲಿ ಸರಕಾರ ನಮ್ಮೆಲ್ಲ ಜನತೆಗೆ ಮೂಲ ಅಗತ್ಯಗಳನ್ನು ಒದಗಿಸುವ ತನ್ನ ಸಂವಿಧಾನಿಕ ಹೊಣೆಗಾರಿಕೆಯಿಂದ ಜಾರಿಕೊಂಡು, ಹೆಚ್ಚೆಚ್ಚಾಗಿ ವಿದೇಶಿ ಮತ್ತು ಭಾರತೀಯ ದೊಡ್ಡ ಬಂಡವಾಳಗಾರರ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅನುಕೂಲ ಕಲ್ಪಿಸಿಕೊಡುವ ಬಗ್ಗೆಯೇ ಕಾಳಜಿ ವಹಿಸುತ್ತಿದೆ. ಯುಪಿಎ ಸರಕಾರ ತನ್ನ ಈ ಕಾರ್ಯತಂತ್ರ ಮತ್ತು ಆರ್ಥಿಕ ಧೋರಣೆಗಳ ದಿಕ್ಕನ್ನು ಕೈಬಿಡುವಂತೆ ಮಾಡಬೇಕಾಗಿದೆ. ಭಾರತದ ಜನತೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಸಾಮರ್ಥ್ಯವನ್ನೂ ಹೊಂದಿದ್ದೇವೆ, ಸಂಪನ್ಮೂಲಗಳನ್ನೂ ಹೊಂದಿದ್ದೇವೆ. ನಾವು ಏನು ಸಾಧಿಸಬಲ್ಲೆವೋ, ಯಾವುದಕ್ಕೆ ನಾವು ಅರ್ಹರೋ ಅದನ್ನು ಪಡೆಯಲಿಕ್ಕಾಗಿ ಸರಕಾರದ ಮೇಲೆ ಶಕ್ತಿಶಾಲಿ ಸಾರ್ವಜನಿಕ ಒತ್ತಡವನ್ನು ಹಾಕಬೇಕಾಗಿದೆ

ಬಂಡವಾಳಗಾರರ ಲಾಭಗಳನ್ನಷ್ಟೇ ಗರಿಷ್ಟಗೊಳಿಸುವ ಈ ಗೀಳೇಕೆ?

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಫೆಬ್ರವರಿ 02, 2012 ರ ಸಂಚಿಕೆಯ ಸಂಪಾದಕೀಯದಿಂದ

ಆರ್ಥಿಕ ಚಟುವಟಿಕೆಗಳನ್ನು ಸೂಚಿಸುವ ಎಲ್ಲ ಸೂಚ್ಯಂಕಗಳೂ ಇಳಿಮುಖವಾಗಿವೆ. ಆದರೂ ಯುಪಿಎ-2 ಸರಕಾರ ತನ್ನ ನವ-ಉದಾರವಾದಿ ಆರ್ಥಿಕ ಸುಧಾರಣೆಗಳಿಗೇ ಅಂಟಿಕೊಂಡು ಅದೇ ದಾರಿಯಲ್ಲಿ ಮುಂದುವರೆಯುತ್ತಿದೆ. ಹೆಚ್ಚೆಚ್ಚು ವಿದೇಶಿ ಬಂಡವಾಳದ ಹರಿವನ್ನು ಆಕರ್ಷಿಸಬಹುದೆಂಬ ನಿರೀಕ್ಷೆಯಿಂದ ಅದು ಮುಂಬರುವ ವಾರ್ಷಿಕ ಬಜೆಟಿನ ಮೊದಲು ಉದಾರೀಕರಣದ ವೇಗವನ್ನು ಹೆಚ್ಚಿಸಲು ಮುಂದಾಗುತ್ತಿರುವಂತೆ ಕಾಣುತ್ತಿದೆ. ಜಾಗತಿಕವಾಗಿ ಆರ್ಥಿಕ ಬಿಕ್ಕಟ್ಟು ಮತ್ತಷ್ಟು ಹದಗೆಡುತ್ತಿರುವಾಗ ಈ ರೀತಿಯ ವಿದೇಶಿ ಬಂಡವಾಳದ ಹರಿವು ಸಾಧ್ಯವಿಲ್ಲ ಎಂಬ ಅಂಶವನ್ನು ಅದು ಪರಿಗಣನೆಗೆ ತಗೊಂಡಂತಿಲ್ಲ. ಭಾರತ ಒಂದು 'ಮೂಡಿ ಬರುತ್ತಿರುವ ಆರ್ಥಿಕ', ವಿದೇಶಿ ಬಂಡವಾಳ ತೀವ್ರ ಬಿಕ್ಕಟ್ಟಿನಲ್ಲಿರುವಾಗ, ಇಲ್ಲಿಗೆ ಬಂದು ಭಾರತದಿಂದ ಸೂಪರ್ ಲಾಭಗಳನ್ನು ದಕ್ಕಿಸಿಕೊಂಡು ಹೋಗಲು ಅದಕ್ಕೆ ಆತಿಥ್ಯ ನೀಡಲು ಸಿದ್ಧವಾಗಿರುವ ದೇಶ ಎಂದು ತೋರಿಸಬೇಕೆಂಬುದೇ ಅದರ ಕಾಳಜಿ, ಅದಕ್ಕಾಗಿ ಭಾರತೀಯ ಜನತೆಯ ಹಿತಗಳನ್ನು ಕೂಡ ಬಲಿಗೊಟ್ಟರೇನಂತೆ?

ಫೆಬ್ರುವರಿ ಮೊದಲ ವಾರದಲ್ಲಿ ಸರಕಾರ 'ಯುರೋಪಿಯನ್ ಸಂಘ'(ಇಯು)ದೊಂದಿಗೆ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ)ವನ್ನು ಮಾಡಿಕೊಳ್ಳಲು ಸಿದ್ಧವಾಗುತ್ತಿದೆ ಎಂಬ ವರದಿಗಳಿವೆ. ಯುರೋಪಿಯನ್ ಸಂಘ ಒಂದು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ, ಅದು ಅವರ ನಾಣ್ಯ ಯುರೋದ ಅಸ್ತಿತ್ವಕ್ಕೇ ಬೆದರಿಕೆಯೊಡ್ಡಿದೆ ಎಂಬುದು ಎಲ್ಲರ ಕಣ್ಣೆದುರೇ ಇದೆ. ಇಯುನೊಂದಿಗೆ ಈ ಒಪ್ಪಂದವನ್ನು ಲಾಭಕ್ಕಾಗಿ ಶಹತಹಿಸುತ್ತಿರುವ ಯುರೋಪಿನ ಬಂಡವಾಳಕ್ಕೆ ಭಾರತದ ಮಾರುಕಟ್ಟೆಗಳನ್ನು ತೆರೆದು ಕೊಡಲಿಕ್ಕಾಗಿ, ಅದರಲ್ಲೂ ಅಲ್ಲಿನ ಸರಕಾರಗಳಿಂದ ಭಾರೀ ಸಬ್ಸಿಡಿ ಪಡೆಯುತ್ತಿರುವ ಅಲ್ಲಿನ ಹೈನು ಉತ್ಪಾದನೆಗಳನ್ನು ಭಾರತದ ಮಾರುಕಟ್ಟೆಯಲ್ಲಿ ಸುರಿಯಲು ಅನುವು ಮಾಡಿ ಕೊಡಲಿಕ್ಕಾಗಿಯೇ ಮಾಡಿಕೊಳ್ಳಲಾಗುತ್ತಿದೆ. ಇದು ಈಗಾಗಲೇ ಒಂದು ಆಳವಾದ ಸಂಕಟದಲ್ಲಿ ಒದ್ದಾಡುತ್ತಿರುವ ಭಾರತೀಯ ರೈತಾಪಿ ಜನಗಳನ್ನು, ನಮ್ಮ ಕೃಷಿ ಆರ್ಥಿಕವನ್ನು ನರಕಕ್ಕೇ ತಳ್ಳಲಿದೆ. ಸರಕಾರೀ ಸಂಸ್ಥೆಗಳೇ ರೈತರಿಗೆ ಘೋಷಿತ ಕನಿಷ್ಟ ಬೆಂಬಲ ಬೆಲೆಗಳನ್ನು ತೆರದಿರುವಾಗ, ಅದರಿಂದಾಗಿ ಅವರು ತಮ್ಮ ಉತ್ಪನ್ನಗಳ ಹತಾಶ ಮಾರಾಟಕ್ಕೆ ಇಳಿಯುತ್ತಿರುವಾಗ, ಈ ರೀತಿ ನಮ್ಮ ಆರ್ಥಿಕವನ್ನು ತೆರೆದುಕೊಟ್ಟರೆ, ಅದರಿಂದ ನಮ್ಮ ರೈತರ ಮೇಲೆ ಇನ್ನಷ್ಟು ನೋವು-ಸಂಕಟಗಳನ್ನು ಹಾಕಿದಂತಾಗುತ್ತದೆ. ಹತಾಶ ಆತ್ಮಹತ್ಯೆಗಳ ಸಂಖ್ಯೆಯನ್ನು ಹೆಚ್ಚಿಸಹೊರಟಂತಾಗುತ್ತದೆ. ಆಸಿಯಾನ್ ದೇಶಗಳೊಂದಿಗೆ ಇಂತಹ ಒಂದು ಎಫ್‌ಟಿಎದಿಂದಾಗಿ ವಾಣಿಜ್ಯ ಬೆಳೆಗಳ ಉತ್ಪಾದಕರ ಮೇಲೆ, ವಿಶೇಷವಾಗಿ ಕೇರಳದಲ್ಲಿ, ಎಂತಹ ವಿನಾಶಕಾರಿ ಪರಿಣಾಮ ಉಂಟಾಯಿತು ಎಂದು ಈಗಾಗಲೇ ಅನುಭವಿಸಿದ್ದೇವೆ.

ಬಂಡವಾಳಿಗರಿಗೆ ಗರಿಷ್ಟ ಲಾಭಕ್ಕಾಗಿ

ಭಾರತದ ಚಿಲ್ಲರೆ ಮಾರಾಟ ವಲಯವನ್ನು ವಿಧಾನ ಸಭಾ ಚುನಾವಣೆಗಳ ಪ್ರಸಕ್ತ ಸುತ್ತು ಮುಗಿದ ಕೂಡಲೇ ವಿದೇಶಿ ಬಂಡವಾಳಕ್ಕೆ ತೆರೆಯಲಾಗುವುದು ಎಂದು ಪ್ರಧಾನ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಇದು ಕೂಡ, ಎಲ್ಲೆಡೆಗಳಿಂದ ಹೊಡೆತಗಳನ್ನು ತಿನ್ನುತ್ತಿರುವ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತನ್ನ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವ ದಾರಿಗಳನ್ನು ಹೆಚ್ಚಿಸುತ್ತದೆ. ಆದರೆ ಇದಕ್ಕೆ ಈ ವಲಯದಲ್ಲಿ ಈಗ ಕೆಲಸ ಮಾಡುತ್ತಿರುವ 4 ಕೋಟಿ (ಕುಟುಂಬದ ಸದಸ್ಯರನ್ನೂ ಸೇರಿಸಿದರೆ 20 ಕೋಟಿ) ಭಾರತೀಯರ ಜೀವನಾಧಾರವನ್ನು ಬಲಿಗೊಡಬೇಕು. ಇದೇ ರೀತಿ ನಮ್ಮ ವಿಮೆ ಮತ್ತು ಬ್ಯಾಂಕಿಂಗ್ ವಲಯದಲ್ಲೂ ವಿದೇಶಿ ಬಂಡವಾಳಕ್ಕೆ ಅವಕಾಶ ಇನ್ನೇನು ಕೊಡಲಾಗುತ್ತದೆ. ಬಿಜೆಪಿ ಕೂಡ ಸಂಸತ್ತಿನಲ್ಲಿ ಪಿಎಫ್‌ಆರ್‌ಡಿಎ ಮಸೂದೆಯನ್ನು ಪಾಸು ಮಾಡಿಸಿಕೊಳ್ಳುವಲ್ಲಿ ಈ ಯುಪಿಎ ಸರಕಾರದೊಂದಿಗೆ ಶಾಮೀಲಾಗಿ ಲಕ್ಷಾಂತರ ಕೋಟಿ ರೂ.ಗಳಷ್ಟಿರುವ ಪೆನ್ಶನ್ ನಿಧಿಗಳ ಖಾಸಗೀಕರಣಕ್ಕೆ ದಾರಿ ತೆರೆದು ಕೊಟ್ಟಿದೆ. ಇದು ಕೋಟ್ಯಂತರ ನೌಕರರ ಭವಿಷ್ಯವನ್ನು ಹಾಳುಗೆಡವುತ್ತಲೇ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತನ್ನ ಜೂಜುಕೋರ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅಗಾಧ ಪ್ರಮಾಣದ ನಿಧಿಗಳನ್ನು ಕೊಡಮಾಡಿದೆ.

ಈ ಯುಪಿಎ ಸರಕಾರ ವಿದೇಶಿ ಬಂಡವಾಳಕ್ಕೆ ಪ್ರಯತ್ನಿಸಲು ಕೊಟ್ಟಿರುವ ನೆಪವೆಂದರೆ, ವಿದೇಶಿ ಬಂಡವಾಳ ಹರಿದು ಬಂದರೆ ಅದು ನಮ್ಮ ಹೆಚ್ಚುತ್ತಿರುವ ಹಣಕಾಸು ಕೊರತೆಯನ್ನು ಕಡಿಮೆ ಮಾಡುತ್ತದೆ ಎಂದು. ನಾವು ಈ ಹಿಂದೆ ಈ ಅಂಕಣದಲ್ಲಿ ವಾದಿಸಿದಂತೆ, ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ಕೊಟ್ಟಿರುವ ತೆರಿಗೆ ರಿಯಾಯ್ತಿಗಳನ್ನು ಹಿಂತೆಗೆದುಕೊಂಡರಷ್ಟೇ ಸಾಕು, ಈ ಹಣಕಾಸು ಕೊರತೆಯೆಂಬುದೇ ಇರುವುದಿಲ್ಲ. ಇಂತಹ ತೆರಿಗೆಗಳು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸಿದೆಯಷ್ಟೇ. ಆ ಮೂಲಕ ನಮ್ಮ ಡಾಲರ್ ಬಿಲಿಯಾಧಿಪತಿಗಳ ಸಂಖ್ಯೆ ಬಲೂನಿನಂತೆ ಹಿಗ್ಗಿದೆ. ನಮ್ಮ ದೇಶದ ಜಿಡಿಪಿಯ ಮೂರನೇ ಒಂದು ಭಾಗ ಈ ಡಾಲರ್ ಬಿಲಿಯಾಧಿಪತಿಗಳ ಕೈಗಳಲ್ಲಿದೆ. ಅಂದರೆ ಈ ಸರಕಾರ ತನ್ನ ಧೋರಣೆಗಳ ದಿಕ್ಕನ್ನು ರೂಪಿಸಿರುವದೇ ವಿಶಾಲ ಭಾರತೀಯ ಜನಸ್ತೋಮದ ಜೀವನಾಧಾರಗಳನ್ನು ಕುಗ್ಗಿಸಿ ವಿದೇಶಿ ಬಂಡವಾಳ ಮತ್ತು ಭಾರತೀಯ ದೊಡ್ಡ ಉದ್ಯಮಿಗಳ ಲಾಭಗಳನ್ನು ಗರಿಷ್ಟಗೊಳಿಸಲಿಕ್ಕಾಗಿ ಎಂಬುದು ಸ್ಪಷ್ಟ.

ಖರ್ಚು ಕಡಿತದ ನೆಪ

ಅಲ್ಲದೆ, ಈ ಹೆಚ್ಚುತ್ತಿರುವ ಹಣಕಾಸು ಕೊರತೆಯನ್ನು ಕಡಿಮೆ ಮಾಡುವ ಹೆಸರಿನಲ್ಲಿ ಈ ಸರಕಾರ ಮುಂಬರುವ ಬಜೆಟಿನಲ್ಲಿ ಈಗಾಗಲೇ ಅಲ್ಪ ಪ್ರಮಾಣದಲ್ಲಿರುವ ಸಾಮಾಜಿಕ ವಲಯದ ಖರ್ಚುಗಳನ್ನು ಮತ್ತಷ್ಟು ಇಳಿಸುವ ಸಾಧ್ಯತೆ ಬಹಳ ಇದೆ. ಸರಕಾರೀ ಖರ್ಚುಗಳನ್ನು ಕಡಿತ ಮಾಡುವ ಈ ಪ್ರಯತ್ನದಲ್ಲಿ ಹಲವಾರು ಇಲಾಖೆಗಳಲ್ಲಿ, ವಿಶೇಷವಾಗಿ ರೈಲ್ವೇ ಇಲಾಖೆಯಲ್ಲಿ ಲಕ್ಷಾಂತರ ಖಾಲಿ ಹುದ್ದೆಗಳು ಹಾಗೆಯೇ ಉಳಿಯುತ್ತವೆ. ಭಾರತದ ನೌಕರಶಾಹಿ ಬಹಳ ದೊಡ್ಡದಾಗಿ ಬೆಳೆದು ಬಿಟ್ಟಿದೆ, ಸರಕಾರದ ಖರ್ಚುಗಳನ್ನು ಕಡಿತ ಮಾಡಲು, ಅದನ್ನು ಸರಿಯಾದ ಗಾತ್ರಕ್ಕೆ ಇಳಿಸಬೇಕಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಇತ್ತೀಚಿನ ಒಂದು ಅಧ್ಯಯನದ ಪ್ರಕಾರ, ಭಾರತದಲ್ಲಿ ತಲಾ ಸಾರ್ವಜನಿಕ ಸೇವಕರ ಸಂಖ್ಯೆ ಜಗತ್ತಿನಲ್ಲಿಯೇ ಅತಿ ಕಡಿಮೆ ಎಂದು ಕಂಡು ಬಂದಿದೆ. ಭಾರತದಲ್ಲಿ ಪ್ರತಿ ಲಕ್ಷ ನಾಗರಿಕರಿಗೆ 1600ಕ್ಕಿಂತ ತುಸು ಹೆಚ್ಚು (ಕೇಂದ್ರ ಮತ್ತು ರಾಜ್ಯ) ಸರಕಾರೀ ನೌಕರರು ಇದ್ದರೆ, ಅಮೆರಿಕಾದಲ್ಲಿ ಈ ಸಂಖ್ಯೆ 7681, ಅಂದರೆ ಸುಮಾರು ಐದು ಪಟ್ಟು ಹೆಚ್ಚು. ರೈಲ್ವೆ ಇಲಾಖೆಯನ್ನು ಬಿಟ್ಟರೆ, ಭಾರತದಲ್ಲಿ ಪ್ರತಿ ಒಂದು ಲಕ್ಷ ನಾಗರಿಕರಿಗೆ ಇರುವ ಕೇಂದ್ರ ಸರಕಾರೀ ನೌಕರರ ಸಂಖ್ಯೆ 125ಕ್ಕೆ ಇಳಿಯುತ್ತದೆ. ಅಮೆರಿಕಾದಲ್ಲಿ ಫೆಡರಲ್ ನೌಕರರ ಸಂಖ್ಯೆ ಪ್ರತಿ ಲಕ್ಷ ನಾಗರಿಕರಿಗೆ 800 ಆಗುತ್ತದೆ, ಸುಮಾರು ಆರೂವರೆ ಪಟ್ಟು.

ಭಾರತದಲ್ಲಿ ಸಾಮಾಜಿಕ ವಲಯದಲ್ಲಿ ಜನತೆಯ ಅಗತ್ಯಗಳನ್ನು ಪೂರೈಸಲು, ಅಷ್ಟೇ ಏಕೆ, ನಮ್ಮ ಆಂತರಿಕ ಭದ್ರತೆಯನ್ನು ನೋಡಿಕೊಳ್ಳಲು ಅಗತ್ಯವಾದ ಮಾನವ ಶಕ್ತಿಯನ್ನು ನಾವು ಹೊಂದಿಲ್ಲ ಎಂಬುದು ಸ್ಪಷ್ಟ. ವಿಶ್ವಸಂಸ್ಥೆ ಶಿಫಾರಸು ಮಾಡಿರುವ ಅನುಪಾತದ ಪ್ರಕಾರ ಭಾರತದಲ್ಲಿ ಪೋಲೀಸರ ಸಂಖ್ಯೆ ಈಗಿರುವುದರ ಮೂರು ಪಟ್ಟು ಇರಬೇಕು. ಶಿಕ್ಷಣ, ಆರೋಗ್ಯ ರಕ್ಷಣೆ, ಆಹಾರ ಭದ್ರತೆಯನ್ನು ಸಾರ್ವತ್ರಿಕವಾಗಿ ಒದಗಿಸಬೇಕಾದರೆ ಅದಕ್ಕೆ ಅನುಗುಣವಾದ ತಲುಪಿಸುವ ವ್ಯವಸ್ಥೆ ಇರಬೇಕಾದ್ದು ಅಗತ್ಯ. ಎಲ್ಲ ಅಭಿವೃದ್ಧಿ ಪ್ರಾಜೆಕ್ಟುಗಳಲ್ಲಿ ಮತ್ತು ಸಾಮಾಜಿಕ ಸೇವೆಗಳಲ್ಲಿ ಹಣವನ್ನು ನುಂಗಿ ಹಾಕುವ ಬಗ್ಗೆ ಕಾಳಜಿ ಸಹಜವಾದದ್ದೇ(ಸರಕಾರ ಖರ್ಚು ಮಾಡುವ ಪ್ರತಿ ಒಂದು ರೂಪಾಯಿಯಲ್ಲಿ 15 ಪೈಸೆ ಮಾತ್ರ ಜನಗಳನ್ನು ತಲಪುತ್ತದೆ ಎಂಬ ರಾಜೀವ ಗಾಂಧಿಯವರ ಪ್ರಖ್ಯಾತ ಉದ್ಗಾರ ನೆನಪಿಸಿಕೊಳ್ಳಿ). ಆದರೆ, ನಿಜಸಂಗತಿಯೆಂದರೆ, ಈಗಿರುವ ಅಲ್ಪ ಸೇವೆಗಳನ್ನು ಜನಗಳಿಗೆ ತಲುಪಿಸಲು ಕೂಡ ಸಾಕಷ್ಟು ಸಿಬ್ಬಂದಿಯಿಲ್ಲ. ಈಗ ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ ಇತ್ಯಾದಿ ಮೂಲ ವಲಯಗಳಲ್ಲಿ ಜನಗಳ ಸಾಮಾಜಿಕ-ಆರ್ಥಿಕ ಅಗತ್ಯಗಳನ್ನು ಪೂರೈಸಲು ಬೇಕಾಗಿರುವ ಮಾನವ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಬೇಕಾಗಿದೆ. ಇದಕ್ಕೆ ಬದಲಾಗಿ, ಸರಕಾರ ಹಣಕಾಸು ಕೊರತೆಯನ್ನು ಇಳಿಸುವ ಹೆಸರಿನಲ್ಲಿ ಈ ಸಂಖ್ಯೆಯನ್ನು ಮತ್ತಷ್ಟು ಕಡಿತ ಮಾಡುವ ಬಗ್ಗೆ ಯೋಚಿಸುತ್ತಿದೆ.

ಇಕ್ಕುಳದಲ್ಲಿ ಸಿಲುಕಿರುವ ಜನತೆ

ಆದ್ದರಿಂದ ಬಹುಪಾಲು ಭಾರತೀಯ ಜನತೆ ಈ ಇಕ್ಕುಳದಲ್ಲಿ ಸಿಲುಕಿ ನರಕ ಯಾತನೆ ಅನುಭವಿಸುತ್ತಿದ್ದಾರೆ. ಒಂದೆಡೆ, ಉದಾರೀಕರಣದ ಆರ್ಥಿಕ ಧೋರಣೆಗಳು ವಿದೇಶಿ ಮತ್ತು ಭಾರತೀಯ ದೊಡ್ಡ ಉದ್ದಿಮೆದಾರರ ಸೂಪರ್ ಲಾಭಗಳನ್ನು ವಿಸ್ತರಿಸುತ್ತಲೇ ನಮ್ಮ ಬಹುಪಾಲು ಜನಗಳನ್ನು ದಾರಿದ್ರ್ಯಕ್ಕೆ ನೂಕುತ್ತಿದ್ದರೆ, ಇನ್ನೊಂದೆಡೆ, ಜನಗಳಿಗೆಂದು ಇರುವ ಅಲ್ಪ-ಸ್ವಲ್ಪ ಪ್ರಮಾಣದ ಸೇವೆಗಳು ಮತ್ತು ಸಾರ್ವಜನಿಕ ಪ್ರಯೋಜನಗಳನ್ನು ಅವರಿಗೆ ತಲುಪಿಸಲು ಇರುವ ಸ್ವಲ್ಪವೇ ಮಾನವಶಕ್ತಿಯನ್ನು ಕೂಡ ಮತ್ತಷ್ಟು ಕಡಿತ ಮಾಡಲಾಗುತ್ತಿದೆ.

ಈ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ವ್ಯವಸ್ಥೆಯ ಅಡಿಯಲ್ಲಿ ಸರಕಾರ ನಮ್ಮೆಲ್ಲ ಜನತೆಗೆ ಮೂಲ ಅಗತ್ಯಗಳನ್ನು ಒದಗಿಸುವ ತನ್ನ ಸಂವಿಧಾನಿಕ ಹೊಣೆಗಾರಿಕೆಯಿಂದ ಜಾರಿಕೊಂಡು, ಹೆಚ್ಚೆಚ್ಚಾಗಿ ವಿದೇಶಿ ಮತ್ತು ಭಾರತೀಯ ದೊಡ್ಡ ಬಂಡವಾಳಗಾರರ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅನುಕೂಲ ಕಲ್ಪಿಸಿಕೊಡುವ ಬಗ್ಗೆಯೇ ಕಾಳಜಿ ವಹಿಸುತ್ತಿದೆ.

ಈ ಹಿಂದೆ ಈ ಅಂಕಣದಲ್ಲಿ ಗಮನಿಸಿದಂತೆ, ನಮ್ಮ ದೇಶದಲ್ಲಿ ಬಂಡವಾಳದ್ದಾಗಲೀ, ಮಾನವ ಶಕ್ತಿಯದ್ದಾಗಲೀ ಕೊರತೆಯೇನೂ ಇಲ್ಲ. ಮಹಾಹಗರಣಗಳ ಮೂಲಕ ನಡೆಯುತ್ತಿರುವ ನಮ್ಮ ಸಂಪನ್ಮೂಲಗಳ ಬೃಹತ್ ಲೂಟಿಯನ್ನು ನಿಲ್ಲಿಸಿದರೆ ಮತ್ತು ಶ್ರೀಮಂತರಿಗೆ ಕೊಡುವ ರಿಯಾಯ್ತಿಗಳನ್ನು ಅವರಿಗೆ ಕೊಡುವ ಬದಲು ನಮ್ಮ ಬಹು ಅಗತ್ಯವಾದ ಸಾಮಾಜಿಕ-ಆರ್ಥಿಕ ಮೂಲರಚನೆಯನ್ನು ಕಟ್ಟಲಿಕ್ಕಾಗಿ ಸಾರ್ವಜನಿಕ ಹೂಡಿಕೆಗಳ ಮಟ್ಟವನ್ನು ಹೆಚ್ಚಿಸಲು ಬಳಸಿದರಷ್ಟೇ ಸಾಕು, ನಮ್ಮ ಎಲ್ಲ ಜನಗಳ ಮೂಲ ಅಗತ್ಯಗಳನ್ನು ಪೂರೈಸಿ, ಹೆಚ್ಚಿನ ಉದ್ಯೋಗಾವಕಾಶ ನಿರ್ಮಾಣದ ಮೂಲಕ ಅವರ ಬದುಕಿನ ಘನತೆಯನ್ನು ಹೆಚ್ಚಿಸಬಹುದು.

ಭಾರತದ, 'ನಾವು, ಜನತೆ' ಒಂದು ಉತ್ತಮ ಭಾರತವನ್ನು ನಿರ್ಮಿಸುವ ಸಾಮರ್ಥ್ಯವನ್ನೂ ಹೊಂದಿದ್ದೇವೆ, ಸಂಪನ್ಮೂಲಗಳನ್ನೂ ಹೊಂದಿದ್ದೇವೆ. ನಾವು ಏನು ಸಾಧಿಸಬಲ್ಲೆವೋ, ಯಾವುದಕ್ಕೆ ನಾವು ಅರ್ಹರೋ ಅದನ್ನು ಪಡೆಯಲಿಕ್ಕಾಗಿ ಯುಪಿಎ ಸರಕಾರದ ಮೇಲೆ ಶಕ್ತಿಶಾಲಿ ಸಾರ್ವಜನಿಕ ಒತ್ತಡವನ್ನು ಹಾಕಬೇಕಾಗಿದೆ, ಅದು ತನ್ನ ಕಾರ್ಯತಂತ್ರ ಮತ್ತು ಆರ್ಥಿಕ ಧೋರಣೆಗಳ ದಿಕ್ಕನ್ನು ಕೈಬಿಡುವಂತೆ ಮಾಡಬೇಕಾಗಿದೆ. ●

ದೇವರ ಅಸ್ತಿತ್ವವನ್ನು ವೇದಗಳ ಶ್ರೇಷ್ಠತೆಯನ್ನು ನಿರಾಕರಿಸಿದ ಬುದ್ಧನನ್ನೇ 'ಅವತಾರ ಪುರುಷ' ಎಂದು ಬಿಂಬಿಸಲಾಯಿತು. ಪುರೋಹಿತಶಾಹಿಯನ್ನು, ಜಾತಿ ಪದ್ಧತಿಯನ್ನು ವಿರೋಧಿಸಿದ ಬಸವಣ್ಣನನ್ನು'ನಂದಿ' ಅವತಾರ ಎಂದು ಬಿಂಬಿಸಿ ಪೂಜಿಸುವಂತೆ ಮಾಡಲಾಗಿದೆ. ತಾನೊಬ್ಬ ನಾಸ್ತಿಕ ಎಂದು ಘೋಷಿಸಿಕೊಡ ಭಗತ್‌ಸಿಂಗ್ ಅವರ ಹಾಗೂ "ಹಿಂದೂ ಆಗಿ ಹುಟ್ಟಿದ್ದರೂ ಹಿಂದೂ ಆಗಿ ಸಾಯಲಾರೆ" ಎಂದು ಘೋಷಿಸಿದ್ದ ಡಾ॥ ಅಂಬೇಡ್ಕರ್ ಅವರ ಭಾವ ಚಿತ್ರಗಳನ್ನು ಹಾಕಿಕೊಂಡು ಸಂಘಪರಿವಾರದ ಸಂಘಟನೆಗಳು ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ವಿಚಾರಗಳ ಕುರಿತು ನಮ್ಮ ವಸ್ತುನಿಷ್ಠವಾದ ಅಧ್ಯಯನ ಹೆಚ್ಚಾಗಬೇಕಾಗಿದೆ.

ಸಂಘ ಪರಿವಾರದ ಹಿಂದುತ್ವಕ್ಕಿಂತ ಬೇರೆಯಾದ ಶೂದ್ರ ಸನ್ಯಾಸಿ ವಿವೇಕಾನಂದರ ಹಿಂದೂ ಧರ್ಮ

ನಿತ್ಯಾನಂದಸ್ವಾಮಿ



"ಮಾನವ ಸಮಾಜವು ಸರದಿಯ ಪ್ರಕಾರ ನಾಲ್ಕು ವರ್ಣಗಳಿಂದ ಆಳಲ್ಪಡುತ್ತಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ..... ಮೊದಲನೆಯ ಮೂರಕ್ಕೂ ತಮ್ಮ ತಮ್ಮ ಯುಗಗಳಿದ್ದವು. ಈಗ ಕಡೆಯದರ ಕಾಲ. ಅದು ಬರಲೇಬೇಕು. ಅದನ್ನೂ ಯಾರೂ ತಡೆಯಲಾರರು!" ಹೀಗೊಂದು ಭವಿಷ್ಯವಾಣಿ ನುಡಿದಿದ್ದವರು ಬೇರೆ ಯಾರು ಅಲ್ಲ. ಅವರೇ ಸ್ವಾಮಿ ವಿವೇಕಾನಂದರು.

ಇದೇ ಜನವರಿ 12 ರಂದು ದೇಶದಲ್ಲಿ ಸ್ವಾಮಿ ವಿವೇಕಾನಂದರ 150ನೇ ಜಯಂತಿ ಆಚರಣೆ ಆರಂಭವಾಗಿದೆ. 2013 ರ ಜನವರಿ 12ರವರೆಗೂ ಅದು ನಡೆಯಲಿದೆ. ಸ್ವಾಮಿ ವಿವೇಕಾನಂದ ಎಂದೇ ವಿಶ್ವಕ್ಕೆ ಚಿರಪರಿಚಿತರಾದ ಕಲ್ಕತ್ತಾದ ನರೇಂದ್ರನಾಥ ದತ್ತ ಭಾರತದ ಓರ್ವ ಹೆಮ್ಮೆಯ ಪುತ್ರ. ಅವರ ಎಲ್ಲ ವಿಚಾರಗಳ ಬಗ್ಗೆ ಸಹಮತ ಸಾಧ್ಯವಾಗಲಿಕ್ಕಿಲ್ಲ. ಆದರೆ ಅವರು ಬಲವಾಗಿ ಪ್ರತಿಪಾದಿಸುತ್ತಿದ್ದ ಪರಮತ ಸಹಿಷ್ಣುತೆ ನಮಗೆ ಇಂದು ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಸ್ವಾಮಿ ವಿವೇಕಾನಂದರು ವಿಶ್ವಕ್ಕೇ ಪರಿಚಯಿಸಿದ ಹಿಂದೂ ಧರ್ಮವೇ ಬೇರೆ, ಇಂದು ಆರೆಸ್ಸೆಸ್ ಪ್ರತಿಪಾದಿಸುತ್ತಿರುವ ಹಿಂದುತ್ವವೇ ಬೇರೆ ಎಂಬುದನ್ನು ಕಾಣಲು ಸಾಧ್ಯವಾದಾಗ ನಮಗೆ ಸ್ವಾಮಿ ವಿವೇಕಾನಂದರೇ ಬೇರೆ, ಉಡುಪಿಯ ಇಂದಿನ ಪೇಜಾವರ ಸ್ವಾಮಿಗಳಂತಹವರೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ.

ವಿವೇಕಾನಂದರು ಹುಟ್ಟಿದ್ದು ಒಂದು ಸಂಪ್ರದಾಯ ಬದ್ಧವಲ್ಲದ ಕ್ಷತ್ರಿಯ ಕುಟುಂಬದಲ್ಲಿ. ಅವರು ಅಬ್ರಾಹ್ಮಣರು ಎನ್ನುವ ಕಾರಣಕ್ಕೆ ಪುರೋಹಿತ ವರ್ಗದವರು ಅವರಿಗೆ ಸನ್ಯಾಸ ದೀಕ್ಷೆ ನೀಡುವುದನ್ನು ವಿರೋಧಿಸಿದ್ದರು. ಆದರೆ ಸ್ವತಃ ಬ್ರಾಹ್ಮಣರೇ ಆಗಿದ್ದ, ಆದರೆ ಮೊದಲು ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿ ಅನಂತರ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದ ಶ್ರೀ ರಾಮಕೃಷ್ಣ ಪರಮಹಂಸರನ್ನು ಇವರು ತನ್ನ ಗುರುವಾಗಿ ಸ್ವೀಕರಿಸಿ ಅವರಿಂದ ಸನ್ಯಾಸ ದೀಕ್ಷೆಯನ್ನು ಪಡೆದರು. ಮನುಷ್ಯನ ಅಂತಸ್ತಿನಲ್ಲಿ ಮೇಲು ಅಥವ ಕೀಳು ಎಂಬ ಸ್ಥಾನಮಾನವನ್ನು ಅವನ ಹುಟ್ಟಿನಿಂದ ನಿರ್ಧರಿಸುವುದು ಸರಿಯಲ್ಲ ಎಂದು ವಿವೇಕಾನಂದರು ಕೊನೆಯವರೆಗೂ ಪ್ರತಿಪಾದಿಸಿದರು ಮಾತ್ರವಲ್ಲ ಅಪಾರ ಪರಿಶ್ರಮ ಮತ್ತು ಆಳವಾದ ಅಧ್ಯಯನದ ಮೂಲಕ ಮೇಲ್ಜಾತಿ–ಮೇಲ್ವರ್ಗಗಳಲ್ಲಿ ಹುಟ್ಟಿದವರನ್ನೂ ಬೆರಗುಗೊಳಿಸುವ ಸಾಧನೆಯನ್ನು ಮಾಡಿ ತೋರಿಸಿದರು.

ಭಾರತದ ಸಾಮಾಜಿಕ ಪ್ರಗತಿಗೆ ಕಂಟಕಪ್ರಾಯವಾಗಿರುವ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಕಿತ್ತೊಗೆಯದೇ ನಿಜವಾದ ಪ್ರಗತಿಸಾಧ್ಯವಿಲ್ಲವೆಂದು ವಿವೇಕಾನಂದರು ದೃಢವಾಗಿ ನಂಬಿದ್ದರು. "ನಮ್ಮ ಕುಲೀನ ಮನೆತನದ ಪೂರ್ವಜರು ನಮ್ಮ ದೇಶದ ಜನಸಾಮಾನ್ಯರನುಕಾಲಿನಿಂದ ತುಳಿದರು. ಎಲ್ಲಿಯವರೆಗೆ ಅಂದರೆ ಅವರು ಅಸಹಾಯಕರಾಗುವ ತನಕ. ಈ ಬಡಜನತೆ ಚಿತ್ರಹಿಂಸೆಯಲ್ಲಿ ನಲುಗುವ ತನಕ ಮುಂದುವರಿಸಿದರು. ಈ ಬಡಜನತೆ ಕ್ರಮೇಣ ತಾವು ಮನುಷ್ಯ ಜಾತಿಗೆ ಸೇರಿದವರು ಎಂಬುದನ್ನೇ ಮರೆತು ಬಿಟ್ಟರು." ಎಂದು ಹೇಳುವ ಮೂಲಕ ವಿವೇಕಾನಂದರು ಅಮಾನವೀಯ ಜಾತಿಪದ್ಧತಿಯನ್ನು ವಿಶ್ಲೇಷಿಸುತ್ತಾರೆ.

"ಸಮಾಜ ಸುಧಾರಕರ ಒಂದು ಮುಖವಾಣಿ ಪತ್ರಿಕೆಯಲ್ಲಿ ನನ್ನನ್ನು ಶೂದ್ರ ಎಂದು ಕರೆದಿರುವುದಾಗಿ ಓದಿದೆ. ಶೂದ್ರನಿಗೆ ಸನ್ಯಾಸದ ಅಧಿಕಾರ ಎಲ್ಲಿದೆ ಎಂದು ನನಗೆ ಸವಾಲು ಹಾಕಿದ್ದಾರೆ. ನನ್ನನ್ನೂ ಶೂದ್ರನೆಂದು ಕರೆದರೆ ನನಗೇನೂ ಬೇಸರವಿಲ್ಲ, ನೋವಿಲ್ಲ. ನನ್ನ ಪೂರ್ವಜರು ಮಾಡಿದ ಪಾಪಕ್ಕೆ, ದೌರ್ಜನ್ಯಕ್ಕೆ ಇದು ಅಲ್ಪ ಪ್ರಾಯಶ್ಚಿತ್ತವೆಂದು ಭಾವಿಸುತ್ತೇನೆ" ಹೀಗೆಂದು ಬರೆದಿದ್ದಾರೆ ಸ್ವಾಮಿ ವಿವೇಕಾನಂದರು.

"ಬರಲಿದೆ ಶೂದ್ರರ ಆಳ್ವಿಕೆ."

ಭಾರತದ ಶ್ರೇಣೀಕೃತ ಜಾತಿ ಪದ್ಧತಿಯಲ್ಲಿ ಬೆವರು ಸುರಿಸಿ ದುಡಿಯುವವರೆಲ್ಲರೂ ಶೂದ್ರರು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಏಣಿಯ ಮೇಲ್ತುದಿಯಲ್ಲಿರುವವರು. ಅವರು ಆಸ್ತಿವಂತರು, ಅವರು ಆಳುವವರು. ಅವರ ಸೇವೆ ಮಾಡಲು ಅವರಿಗೆ ಬೇಕಾದುದೆಲ್ಲವನ್ನು ಉತ್ಪತ್ತಿ ಮಾಡಿಕೊಡ ಬೇಕಾದವರು ಶೂದ್ರರು. ಕೃಷಿಯೂ ಸೇರಿದಂತೆ ಎಲ್ಲಾ ಕಸುಬುಗಳನ್ನು ಮಾಡುವವರು ಶೂದ್ರರು. ಆದ್ದರಿಂದ ಶೂದ್ರರೆಂದರೆ ಶ್ರಮಜೀವಿಗಳು.

ಮುಂಬರುವ ಯುಗದಲ್ಲಿ ಭಾರತದಲ್ಲಿ ಶೂದ್ರರೇ ಆಳ್ವಿಕೆ ನಡೆಸುತ್ತಾರೆ ಎಂಬುದು ಸ್ವಾಮಿ ವಿವೇಕಾನಂದರು ಭವಿಷ್ಯವಾಣಿ. ಭವಿಷ್ಯವು ಶೂದ್ರರಿಗೆ ಸೇರಿದ್ದಾಗಿದೆ ಎಂಬುದು ಅವರು ಕಂಡ ಕನಸಿಗೆ ತಾರ್ಕಿಕ ಕೊನೆಯಾಗಿತ್ತು. "ನಿರಂತರ ತುಳಿತಕ್ಕೊಳಗಾಗಿರುವ ಭಾರತದ ಶ್ರಮ ಜೀವಿ ವರ್ಗಗಳೇ, ನಾನು ನಿಮಗೆ ಶಿರ ಬಾಗುತ್ತೇನೆ.... ಆ ಹೊಸ ಶಕ್ತಿ ಉದಿಸುವ ಮೊದಲು ಕಿರಣಗಳು ಸಾವಕಾಶವಾಗಿ ಪಾಶಿಮಾತ್ಯ ಜಗತ್ತಿನಲ್ಲಿ ಮೂಡಿ ಬರಲು ಈಗಾಗಲೇ ಪ್ರಾರಂಭಿಸಿವೆ. " ವಿವೇಕಾನಂದರು ಮೇಲ್ಕಂಡ ಮಾತುಗಳನ್ನು ಹೇಳಿದ ಕೆಲವೇ ವರ್ಷಗಳಲ್ಲಿ ವಿಶ್ವದಲ್ಲಿ ಪ್ರಪ್ರಥಮ ಬಾರಿಗೆ ಶ್ರಮಿಕ ವರ್ಗದ ಪ್ರಭುತ್ವವೊಂದು ರಶಿಯಾ ದೇಶದಲ್ಲಿ ಅಸ್ತಿತ್ವಕ್ಕೆ ಬಂತು.

ಸ್ವಾಮಿ ವಿವೇಕಾನಂದರಿಗೆ ಕಾರ್ಮಿಕ ವರ್ಗದ ಚಳುವಳಿಯ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇದ್ದಿರಲಿಕ್ಕಿಲ್ಲ. ಅವರು ತಾನೋರ್ವ ಸಮಾಜವಾದಿ ಎಂದು ಬಹಿರಂಗವಾಗಿ ಘೋಷಿಸಿಕೊಂಡ ಮೊದಲ ಭಾರತೀಯರಾಗಿದ್ದರು. ಸಮಾಜವಾದದ ವಿಜ್ಞಾನವನ್ನು ಅಭಿವೃದ್ಧಿ ಪಡಿಸಿದ ಕಾರ್ಲ್‌ಮಾರ್ಕ್ಸ್ ಹಾಗೂ ಲೆನಿನ್‌ರವರ ಕೃತಿಗಳ ಪರಿಚಯವೂ ವಿವೇಕಾನಂದರಿಗೆ ಇದ್ದಿರಲಿಕ್ಕಿಲ್ಲ. ಆದರೂ ವಿವೇಕಾನಂದರ ಶೂದ್ರ ಪ್ರಭುತ್ವ ಮತ್ತು ಮಾರ್ಕ್ಸ್ ಹಾಗೂ ಲೆನಿನ್‌ರವರು ಪ್ರತಿಪಾದಿಸಿದ ಕಾರ್ಮಿಕವರ್ಗದ ಪ್ರಭುತ್ವಗಳ ನಡುವೆ ಸಹಜವಾದ ಸಾಮ್ಯತೆ ಕಂಡುಬರುತ್ತದೆ. ಅವೆರಡರ ನಡುವೆ ಮೂಲಭೂತ ವ್ಯತ್ಯಾಸಗಳೂ ಇವೆ. ಮಾರ್ಕ್ಸ್ ಮತ್ತು ಲೆನಿನ್‌ರವರ ಪ್ರಕಾರ ಕಾರ್ಮಿಕವರ್ಗದ ನೇತೃತ್ವದಲ್ಲಿನ ಸಮಾಜವಾದಿ ಪ್ರಭುತ್ವವೂ ಸಮಾಜವಾದಿ ಕ್ರಾಂತಿಯೊಂದರ ವಿಜಯದ ಪರಿಣಾಮವಾಗಿ ಸ್ಥಾಪಿಸಲ್ಪಡುತ್ತದೆ. ಬಂಡವಾಳಶಾಹಿ ಆಳ್ವಿಕೆಯನ್ನು ಅದು ಕಿತ್ತೆಸೆಯುತ್ತದೆ. ವಿವೇಕಾನಂದರ ಶೂದ್ರರ ಪ್ರಭುತ್ವವು ಸಹ ಬಂಡವಾಳ ಶಾಹಿಗಳ ಪ್ರಭುತ್ವವನ್ನು ಶೂದ್ರರು ಕಿತ್ತೊಗೆಯುವ ಮೂಲಕವೇ ಸ್ಥಾಪನೆಯಾಗುತ್ತದೆ. ಆದರೆ ಅದನ್ನು ಹೇಗೆ ಸಾಧಿಸಲಾಗುತ್ತದೆ ಎಂಬುದರ ಬಗ್ಗೆ ವಿವೇಕಾನಂದರಿಗೆ ಸ್ಪಷ್ಟತೆ ಇರಲಿಲ್ಲ. ಅದು ಮಾನವ ನಾಗರೀಕತೆಯ ಬೆಳವಣಿಗೆಯ ಮುಂದಿನ ಹಂತ ಎಂದು ತೀರಾ ಸರಳವಾಗಿ ಅವರು ವಿವರಿಸುತ್ತಾರೆ.

ವಿವೇಕಾನಂದರು ಅಮೇರಿಕ ಮತ್ತು ಇಂಗ್ಲೆಂಡಿನ ಯಶಸ್ವಿ ಪ್ರವಾಸದ ನಂತರ ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿದರು. ಶೋಷಿತ ಶೂದ್ರರ ಬಗ್ಗೆ ಅವರು ರೂಪಿಸಿಕೊಂಡ ದೃಷ್ಟಿಕೋನವು ಅವರು ದೇಶ ವಿದೇಶಗಳಲ್ಲಿ ಪಡೆದುಕೊಂಡ ಜೀವನ ಪರಿಸ್ಥಿತಿಯ ಅನುಭವಗಳ ಅನುಸಂಧಾನದ ಫಲವಾಗಿದೆ ಎಂದು ಹೇಳಬಹುದು. ಕೆಳವರ್ಗದವರೇ ಆಗಿರುವ ಶ್ರಮಜೀವಿಗಳ ಬಗ್ಗೆ ಅವರು ಹೀಗೆ ಹೇಳುತ್ತಾರೆ. " ಯಂತ್ರದ ರೀತಿಯಲ್ಲಿ ಅವರುಗಳು ನಿರಂತರವಾಗಿ, ಏಕಪ್ರಕಾರವಾಗಿ ಕೆಲಸ ಮಾಡುತ್ತಲೇ ಇದ್ದಾರೆ. ಬುದ್ಧಿವಂತ ಜನ ಅವರ ಶ್ರಮದ ಬಹುಪಾಲು ಫಲವನ್ನು ಕೊಂಡೊಯ್ಯುತ್ತಾರೆ. ಇದು ಪ್ರತಿಯೊಂದು ದೇಶದ ಕಥೆಯೂ ಆಗಿದೆ. ಆದರೆ ಈಗ ಕಾಲ ಬದಲಾಗುತ್ತಾ ಬರುತ್ತಿದೆ. ಕೆಳವರ್ಗದ ಈ ಜನ ಸತ್ಯವನ್ನು ನಿಧಾನವಾಗಿ ತಿಳಿದುಕೊಂಡು ಜಾಗೃತರಾಗುತ್ತಿದ್ದಾರೆ. ಅನ್ಯಾಯದ ವಿರುದ್ಧ ಒಂದುಗೂಡುತ್ತಿದ್ದಾರೆ ಮತ್ತು ತಮ್ಮ ನ್ಯಾಯ ಸಮ್ಮತ ಪಾಲನ್ನು ಪಡೆಯಲು ಕಟಿಬದ್ಧರಾಗುತ್ತಿದ್ದಾರೆ.

ಪುಟ 15ಕ್ಕೆ....

ಇತ್ತೀಚೆಗೆ ಹುಬ್ಬಳ್ಳಿ ನಗರದಲ್ಲಿ ನಡೆದ ಕರ್ನಾಟಕದ ಉತ್ತರ ಪ್ರಾಂತ ಆರೆಸ್ಸೆಸ್ ಸಮಾವೇಶದಲ್ಲಿ ಸಂಘದ ವರಿಷ್ಠ ಮೋಹನ ಭಾಗವತ್ ಅದೇ ಮತಾಂಧ-ಹಿಂದುತ್ವದ ಕರ್ಕಶ ಕೂಗು ಮೊಳಗಿಸಿದ್ದಾರೆ. ಅದಕ್ಕೆ ದೇಶಪ್ರೇಮದ ಲೇಪ. ಈ ಹಿನ್ನೆಲೆಯಲ್ಲಿ ಸಂಘ ಪರಿವಾರದ ಹುಸಿ ದೇಶಪ್ರೇಮದ ಕುರಿತು ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು

ಸಂಘ ಪರಿವಾರದ ಹುಸಿ ದೇಶಪ್ರೇಮದ ಬೊಬ್ಬೆಯ ಕುರಿತು ಪ್ರಶ್ನೆಗಳು


ಜಿ.ವಿ.ಶ್ರೀರಾಮರೆಡ್ಡಿ

"ಭ್ರಷ್ಟಾಚಾರಿಗಳನ್ನು ಮತ್ತು ದೇಶದ್ರೋಹಿಗಳನ್ನು ಸಹಿಸುವುದಿಲ್ಲ." ಇದು ಕಳೆದ 3 ದಿವಸಗಳ ಕಾಲ ಹುಬ್ಬಳಿಯಲ್ಲಿ ನಡೆದ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಸಮಾರೋಪ ಸಮಾರಂಭದ ಮುಕ್ತಾಯದ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಧಾನ ಸಂಚಾಲಕ ಮೋಹನ್ ಭಾಗವತ್ ಅವರ ನುಡಿ ಮುತ್ತುಗಳು. ಈ ನುಡಿಮುತ್ತುಗಳ ಹಿಂದೆ ಎಷ್ಟು ಸೊಗಲಾಡಿತನದ ಅಪ್ರಮಾಣಿಕತೆ ಇದೆ ಎಂದರೆ ಲೂಟಿಕೋರನೊಬ್ಬ ಕಳ್ಳತನ ಮಾಡಬಾರದೆಂದು ಉಪದೇಶ ಮಾಡಿದ ಹಾಗಿದೆ. ಕಳೆದ 4 ವರ್ಷಗಳಿಂದ ತನ್ನ ರಾಜಕೀಯ ಮುಖವಾಡವಾಗಿರುವ ಭಾರತೀಯ ಜನತಾ ಪಕ್ಷವು ಕರ್ನಾಟಕ ರಾಜ್ಯವನ್ನು ಸರ್ವಾಂಗೀಣ ಲೂಟಿಗೆ ಒಳಪಡಿಸಿ ಪ್ರಕೃತಿ ಸಂಪತ್ತನ್ನು ಲೂಟಿ ಹೊಡೆದಿದ್ದಲ್ಲದೇ, ಗಣಿ, ಭೂಮಿ, ಶಿಕ್ಷಣ ಮತ್ತು ಕರ್ನಾಟಕದ ಮಾನ ಮರ್ಯಾದೆಯನ್ನು ಲೂಟಿ ಮಾಡಿದ ಕೀರ್ತಿ ಯಾರಿಗಾದರೂ ಇದ್ದರೆ ಅದು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಭಾರತೀಯ ಜನತಾ ಪಕ್ಷದ ಸರ್ಕಾರದ ಮುಖ್ಯ ಮಂತ್ರಿಗಳು ಮತ್ತು ಶಾಸಕರುಗಳಿಗೆ. ಇದರ ಜೊತೆಗೆ ಈ ಸರ್ಕಾರದ ಅಧಿಕಾರಿಗಳು. 4 ವರ್ಷಗಳಲ್ಲಿ ಒಂದು ಸಲವಾದರೂ ಇವರ ಶಿಷ್ಯಂದಿರಾದ ಬಿ.ಜೆ.ಪಿ. ನಾಯಕರನ್ನು ಕರೆದು ಹದ್ದುಬಸ್ತಿನಲ್ಲಿಡುವ ಪ್ರಯತ್ನ ಮಾಡದ ಆರ್.ಎಸ್.ಎಸ್. ನಾಯಕರು ಕಳೆದ ಶುಕ್ರವಾರ ಮತ್ತು ಶನಿವಾರ ಎಲ್ಲರನ್ನು ಕರೆದು ಬುದ್ದಿವಾದ ಹೇಳಿರುವುದರ ರಾಜಕೀಯ ವಾಸನೆ ಎಲ್ಲರಿಗೂ ಅರ್ಥವಾಗುತ್ತದೆ.

ಎಲ್ಲಿದೆ ಶಿಸ್ತು ?

ಹಾಲಿ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಗಳು, ಇತರೆ ಮಂತ್ರಿಗಳು ಗಣವೇಶಧಾರಿಗಳಾಗಿ ಖಾಕಿ ಚಡ್ಡಿಗಳನ್ನು ಹಾಕಿಕೊಂಡು ಕೋಡಂಗಿ ರೀತಿಯಲ್ಲಿ ತಾವು ಆರ್.ಎಸ್.ಎಸ್. ನ ವಿಧೇಯ ಶಿಷ್ಯರು ಮತ್ತು ಕಾರ್ಯಕರ್ತರೆಂದು. ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ನಿಮಗೆ ಸಂಘ ಇದನ್ನೇನಾ ಕಲಿಸಿದ್ದು ? ಎಂದು ಪ್ರಶ್ನೆ ಹಾಕುವ ಮುಖಾಂತರ ತಾನು ನಿಮ್ಮನ್ನು ಬೆಳೆಸಿದ್ದು ಹೀಗೆ ಎಂಬ ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಪ್ರಾಮಾಣಿಕರಿಗೆ ಮಾತ್ರ ಸಂಘದಲ್ಲಿ ಸ್ಥಾನ ಎಂದು ಹೇಳುವ ಮತ್ತು ಸನ್ನಡತೆ, ಶೀಲ ಮತ್ತು ವೈಯಕ್ತಿಕ ಪ್ರಮಾಣಿಕತೆಯೇ ಸಂಘದ ಜೀವಾಳ ಎಂದು ಹೇಳಿದ ಮೋಹನ್ ಭಾಗವತ್ ಅವರನ್ನು ಒಂದು ವಿನಯ ಪೂರ್ವಕ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ನಿಮ್ಮ ಸಂಘದಲ್ಲಿ ವೈಯಕ್ತಿಕ ಪ್ರಮಾಣಿಕತೆ ಎಂಬುದು ಇದ್ದರೆ ಮತ್ತು ನೀವು ಹೇಳಿದ ಹಾಗೆ ವೈಯಕ್ತಿಕ ಹಿತಾಸಕ್ತಿಗಿಂತ ದೇಶದ ಹಿತವೇ ಮುಖ್ಯವೆಂದಾಗಿದ್ದರೆ ಕಳೆದ 4 ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ದೇಶದಲ್ಲಿ ಭ್ರಷ್ಟಾಚಾರದಲ್ಲಿ 1ನೇ ಸ್ಥಾನಕ್ಕೆ ತಂದು ನಿಲ್ಲಿಸಿದ್ದಷ್ಟೆ ಅಲ್ಲವೇ ? ಬಿ.ಜೆ.ಪಿ.ಸರ್ಕಾರದ ಮುಖ್ಯಮಂತ್ರಿಯು ಸೇರಿ ಮಂತ್ರಿಗಳು, ಶಾಸಕರು, ಜೈಲುಪಾಲಾದರೂ 'ಶಿಸ್ತಿಗೆ ಹೆಸರಾದ' ನಿಮ್ಮ ಸಂಘ ಮತ್ತು ನಿಮ್ಮ ಸಂಘದ ಸದಸ್ಯರ ಮೇಲೆ ಯಾಕೆ ಒಂದು ಸಣ್ಣ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಿಲ್ಲ?.

ಬಿ.ಜೆ.ಪಿ. ಒಂದು ರಾಜಕೀಯ ಪಕ್ಷವಾಗಿ ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾರದ ಅಧೋಗತಿ ಪಾಲಾಗಿದೆ ಬಿಡಿ. ನೈತಿಕತೆಯ ವಾರಸುದಾರರು ಎಂದು ಹೇಳಿಕೊಳ್ಳುವ ನಿಮ್ಮ ಸಂಘವಾದರು ಕ್ರಮ ತೆಗೆದುಕೊಳ್ಳಬೇಕಾಗಿತ್ತಲ್ಲವೇ? ಇದಕ್ಕೆ ನಿಮ್ಮ ಉತ್ತರ ವೇನು? ದೇಶದ ಹಿತ ಬಿಟ್ಟರೆ ನಮಗೆ ಯಾವ ಹಿತವು ಇಲ್ಲವೆಂದು ಹೇಳಿದ್ದಿರಲ್ಲ. !!



ನಿಮ್ಮ ಸಂಘದ ಸದಸ್ಯರ ಈ ಭ್ರಷ್ಟತನದ ಬಗ್ಗೆ, ಜೈಲಿಗೆ ಹೋಗಿ ಬಂದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳದಿರುವುದು ಯಾವ ಹಿತದ ಕಾರಣಕ್ಕೆ ? ಪಕ್ಷದ ಹಿತವೊಂದೇ ಮುಖ್ಯವಾದರೆ ದೇಶದ ಹಿತಕ್ಕೆ ಭಂಗ ಬರುತ್ತದೆ ಎಂದು ಹೇಳಿದ ನೀವು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಪಕ್ಷದ ಸರ್ಕಾರಕ್ಕೆ ದಕ್ಕೆಯಾಗದಂತೆ ನೋಡಿಕೊಳ್ಳಿ ಎಂದು ನಿಮ್ಮ ಪಕ್ಷದ ರಾಜ್ಯ ಮುಖಂಡರಿಗೆ ತಾಕೀತು ಮಾಡಿದ್ದು ಯಾವ ಹಿತ ದೃಷ್ಟಿಯಿಂದ? ರಾಜ್ಯದ ಹಿತದೃಷ್ಟಿಯಿಂದಲೇ? ಅಥವಾ ನಿಮ್ಮ ಪಕ್ಷದ ರಾಜಕೀಯ ಹಿತದೃಷ್ಟಿಯಿಂದಲೋ? ಉತ್ತರ ಹೇಳಬೇಕಲ್ಲ ಭಾಗವತ್‌ರವರೇ? ಇಂತಹ ವಿರೋದಾಭಾಸ ಮತ್ತು ರಾಜಕೀಯ ಸ್ವಾರ್ಥದಿಂದ ಕೂಡಿದ ನಿಮ್ಮ ಜನ ವಿರೋಧಿ ಹೇಳಿಕೆಗಳಿಂದ ನೀವು ಎಲ್ಲರನ್ನೂ ದಿಕ್ಕು ತಪ್ಪಿಸಲಾಗದು ಎಂಬುವುದು ನಿಮಗೆ ನೆನಪಿರಲಿ.

ನಯ ವಂಚಕತೆ

ಇನ್ನೊಂದು ಕಡೆ "ಇಂಗ್ಲಿಷರಿಗೆ ಒಂದೇ ಧರ್ಮ, ಒಂದೇ ಭಾಷೆ. ಅವರಿಗೆ ಯಾವ ಅಡ್ಡಿ ಅತಂಕಗಳಿಲ್ಲ. ಆದರೆ ಭಾರತದಲ್ಲಿ ವಿಭಿನ್ನ ಸಂಸ್ಕೃತಿ, ಬಾಷೆ, ಧರ್ಮಗಳು. ನಮಗೆ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳನ್ನು ತಂದೊಡ್ಡಿವೆ." ಎಂದೂ ಮತ್ತು ಇನ್ನೊಂದು ಕಡೆ "ಸಾಮರಸ್ಯಯುಕ್ತ ದೋಷ ಮುಕ್ತ, ಸರ್ವ ಸಂಪನ್ನಳಾದ ಭಾರತ ಮಾತೆಯನ್ನು ರೂಪಿಸುವುದೇ ಸಂಘದ ಗುರಿ, ಯಾವುದೇ ಖ್ಯಾತಿ ಅಧಿಕಾರದ ಆಸೆ ಇಲ್ಲದೆ ಸರ್ಕಾರದ ಬಿಡಿಗಾಸು ಪಡೆಯದೆ ಮಾತೃಭೂಮಿ ಸೇವೆ ಮಾಡುತ್ತಿದ್ದಾರೆ" ಎಂದು "ಅದು ಶ್ರೇಷ್ಠ ಮತ್ತು ಹೆಮ್ಮೆಯ ವಿಷಯ" . ಎಂದು ಹೇಳಿದ್ದೀರಲ್ಲಾ ? ಇದರ ಹಿಂದೆ ಇರುವ ನಿಮ್ಮ ನಯವಂಚಕತೆ, ಪೊಳ್ಳುತನ ಮತ್ತು ಕ್ರೂರ ಸ್ವಾರ್ಥ ಜಗತ್ತಿಗೆ ಗೊತ್ತಿದೆ. ಇಷ್ಟು ಭಂಡತನದಿಂದ ಈ ರೀತಿ ಹೇಳುವುದಕ್ಕಿಂತ, "ನಾನು ರಾಜಕೀಯ ಸನ್ಯಾಸಿ ಅಲ್ಲ" ಎಂದು ಹೇಳಿರುವ ನಿಮ್ಮ ಶಿಷ್ಯ ಯಡಿಯೂರಪ್ಪನ ಭಂಡತನ ವಾಸಿಯಲ್ಲವೇ?

....ಸಾಮರಸ್ಯಯುಕ್ತ, ದೋಷಮುಕ್ತ, ಸರ್ವ ಸಂಪನ್ನಳಾದ ಭಾರತ ಮಾತೆ...ಎಂದು ಹೇಳಿದ್ದೀರಲ್ಲ ಅಂತಹ ಮಹಾನ್ ಮಾತೆಗೆ ಈ ದೇಶದಲ್ಲಿ ಯಾರಾದರೂ ದ್ರೋಹ ಮತ್ತು ಅಪಚಾರವೆಸಗಿದ್ದರೆ ನಿಮ್ಮ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಅದರ ಶಿಶುಗಳಾದ ವಿಶ್ವ ಹಿಂದೂ ಪರಿಷತ್, ಶ್ರೀರಾಮಸೇನೆ, ನಿಮ್ಮ ರಾಜಕೀಯ ಮುಖವಾಡವಾಗಿರುವ ಭಾರತೀಯ ಜನತಾ ಪಕ್ಷ ಮತ್ತು ನಿಮ್ಮ ಇಡೀ ಸಂಘ ಪರಿವಾರ.

ಎಲ್ಲಿದೆ ಅರ್ಹತೆ ?

ಮೋಹನ್ ಭಾಗವತ್ ಅವರೇ ಈ ಸಾಮರಸ್ಯಯುಕ್ತ ಸರ್ವ ಸಂಪನ್ನಳಾದ ಭಾರತ ಮಾತೆ ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಹುಟ್ಟು ಬೆಳೆದ ಎಲ್ಲಾ ದರ್ಮಗಳನ್ನು, ಸಂಸ್ಕೃತಿಗಳನ್ನು ಭಾಷೆಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಅಕ್ಕರೆಯಿಂದ, ಅಭಿಮಾನದಿಂದ ಪ್ರೀತಿಯಿಂದ ಸಾಕಿ ಸತ್ಕರಿಸಿಕೊಂಡು ಬಂದ ಮಾಹನ್ ಮಾತೃ ಮೂರ್ತಿ, ಈ ಭಾರತಾಂಬೆ. ಸಹನೆ, ತಾಳ್ಮೆ ಮತ್ತು ಮಾನವೀಯತೆಗೆ ಇನ್ನೊಂದು ರೂಪವೆ ಭಾರತ ಮಾತೆ. ಸಮಾನತೆ ಮತ್ತು ಸಾಮರಸ್ಯಕ್ಕೆ ಇಡೀ ಜಗತ್ತಿಗೆ ಮಾದರಿಯಾಗಿ ಇಂದಿಗೂ ರಾರಾಜಿಸುತ್ತಿರುವ ಭಾರತಾಂಬೆ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾಳೆ. ಅಂತಹ ಮಹಾನ್ ತಾಯಿಯ ಒಡಲಿಗೆ ಕೊಳ್ಳಿ ಇಟ್ಟು ಕೊಡಲಿ ಪೆಟ್ಟು ಹಾಕಿದ್ದು, ಹಾಕುತ್ತಿರುವುದು ನಿಮ್ಮ ಸಂಘ ಪರಿವಾರವಲ್ಲವೇ? ಸಾವಿರಾರು ವರ್ಷಗಳಿಂದ ಮಾನವ ಕುಲಕ್ಕೆ ಮಾಧರಿಯಾಗಿರುವ ಈ ಮಾತೆಯ ಮುಖಕ್ಕೆ ಕೇವಲ 80 ವರ್ಷಗಳ ಹಿಂದೆ ಭಾರತಮಾತೆಯ ದಾರಿ ತಪ್ಪಿದ ಮಕ್ಕಳಾಗಿ ಹುಟ್ಟಿದ ನೀವು ಬಹುಮುಖಿ ಸಂಸ್ಕೃತಿಯ ಈ ದೇಶದಲ್ಲಿ ಏಕಮುಖಿ ಸಂಸ್ಕೃತಿಯನ್ನು ಹೇರುವ ಪ್ರಯತ್ನದಲ್ಲಿ ಈ ಸಾಮರಸ್ಯಯುಕ್ತ ಭಾರತ ಮಾತೆ ಒಡಲಿಗೆ ಬೆಂಕಿ ಹಾಕಿ ಇಲ್ಲಿ ಹಿಂದೂ ಧರ್ಮವೊಂದೆ ಶ್ರೇಷ್ಠವೆಂದು ಹಿಂದುಗಳಲ್ಲದವರಿಗೆ ಈ ದೇಶದಲ್ಲಿ ಬದುಕುವ ಹಕ್ಕು, ಇರುವ ಹಕ್ಕು ಇಲ್ಲವೆಂದು, ಅದಕೋಸ್ಕರ ರಕ್ತದ ಓಕಳಿಯನ್ನೇ ಆಡಿ ಸಾವಿರಾರು ಮುಗ್ದ ಜೀವಿಗಳ ಬಲಿಗೆ ಕಾರಣವಾಗಿದ್ದು ನೀವು. ಪರ ಧರ್ಮಗಳನ್ನು ದ್ವೇಷಿಸಿ ಹಿಂಸೆಗೆ ಪ್ರಚೋದನೆ ನೀಡುತ್ತಾ ಆ ಸಹನಾ ಮೂರ್ತಿ ಭಾರತ ಮಾತೆಯನ್ನು ಅವಮಾನಗೊಳಿಸಿ ಆ ತಾಯಿಯನ್ನು ಬೀದಿಗೆಳದಿದ್ದು ನೀವು. ಹಾಗಾಗಿ ನಿಮಗೆ ಭಾರತ ಮಾತೆ ಹೆಸರು ಹೇಳುವ ಯಾವ ಅರ್ಹತೆಯು ಇಲ್ಲ.

ಎಲ್ಲಿದೆ ಸಂಸ್ಕೃತಿ ? ದೇಶಭಕ್ತಿ ?

ಇನ್ನು ಹುಬ್ಬಳಿಯಲ್ಲಿ ನಿಮ್ಮ ಇನ್ನೊಂದು ನುಡಿಮುತ್ತು ....."ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ರಕ್ಷಣೆಮಾಡಲು ನಮ್ಮ ಸಂಘ ಮತ್ತು ಅದರ ಸದಸ್ಯರು ನಿಸ್ವಾರ್ಥದಿಂದ ದೇಶಸೇವೆ ಮಾಡುವುದಕ್ಕೆ ಕಂಕಣಬದ್ಧರಾಗಿದ್ದೇವೆ", ಎಂದು ಹೇಳಿದ್ದೀರಿ. ಈ ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯಕ್ಕೆ ಅಪಾಯ ಒಡ್ಡಿದವರು ಯಾರು? 1992ರ ಅಂದಿನ ಪ್ರಧಾನಿ ದಿವಂಗತ ಪಿ.ವಿ. ನರಸಿಂಹರಾವ್‌ರವರು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ್ದರು. ಗ್ಯಾಟ್ ಒಪ್ಪಂದ ಆಧಾರದ ಮೇಲೆ ರಚನೆಯಾದ ವಿಶ್ವವ್ಯಾಪಾರ ಸಂಘಟನೆಯ ಎಲ್ಲಾ ಷರತ್ತುಗಳನ್ನು ಯಾವುದೇ ಪ್ರತಿರೋಧವಿಲ್ಲದೆ ಒಪ್ಪಿ ಇನ್ನೂ ಕಾಲಾವಕಾಶ ಇದ್ದರೂ ಅತಿವೇಗವಾಗಿ ಅವುಗಳನ್ನು ಜಾರಿ

ಪುಟ 10 ಕ್ಕೆ...

ಪರಿವಾರದ ಹುಸಿ ಬೊಬ್ಬೆ

ಪುಟ 9 ರಿಂದ.....

ಮಾಡಿ ಸಾಮ್ರಾಜ್ಯಶಾಹಿ ದೇಶಗಳ, ವಿದೇಶಿಯ ಬಹುರಾಷ್ಟ್ರಿಯ ಕಂಪನಿಗಳಿಗೆ ರತ್ನಗಂಬಳಿ ಹಾಕಿ ಸ್ವಾಗತಿಸಿ ಈ ದೇಶದ ಎಲ್ಲಾ ರೀತಿಯ ಸಂಪತ್ತನ್ನು ಕೊಳ್ಳೆ ಹೊಡೆಯಲು ದೇಶದ ಬಾಗಿಲನ್ನು ಮುಕ್ತವಾಗಿ ತೆರೆದಿದ್ದು ನಿಮ್ಮ ರಾಜಕೀಯ ಮುಖವಾಡವಾದ ಭಾರತೀಯ ಜನತಾ ಪಕ್ಷದ ನೇತೃತ್ವದ ವಾಜಪೇಯಿ ಸರ್ಕಾರವಲ್ಲವೇ? ಇದರ ಪರಿಣಾಮ ಇಂದು ಇಡೀ ದೇಶದ ಆರ್ಥಿಕ ನರನಾಡಿಗಳು ವಿದೇಶಿ ಬಹುರಾಷ್ಟ್ರಿಯ ಕಂಪನಿಗಳ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿವೆ. ವಿದೇಶಿ ಕಂಪನಿಗಳ ಕಪಿ ಮುಷ್ಟಿಯಲ್ಲಿ ಇಂದಿನ ಎಲ್ಲಾ ಪಕ್ಷಗಳ ಕೇಂದ್ರ ಸರ್ಕಾರಗಳು ಕೈಗೊಂಬೆಗಳಾಗಿವೆ. ಅದರ ಜೊತೆಗೆ ನಮ್ಮ ದೇಶದ ಸ್ವತಂತ್ರ ವಿದೇಶಾಂಗ ನೀತಿಗಳು ಸಾಮ್ರಾಜ್ಯ ಶಾಹಿ ಅಮೇರಿಕಾ ದೇಶದ ಹಿತದೃಷ್ಟಿಯನ್ನು ಕಾಯುವ ಪರವಾಲಂಬಿ ನೀತಿಯಾಗಿ ಮಾರ್ಪಟ್ಟಿದೆ. ಇದಕ್ಕೆ ನೀವೆ ಅಲ್ಲವೆ ಮುನ್ನುಡಿ ಬರೆದವರು? ಇದೇ ಅಲ್ಲವೆ ನಿಮ್ಮ ದೇಶಭಕ್ತಿ ? ಇದೇ ಅಲ್ಲವೇ ಈ ದೇಶದ ಸಾರ್ವಭೌಮತ್ವವನ್ನು ರಕ್ಷಣೆ ಮಾಡುವ ನಿಮ್ಮ ಆದರ್ಶ ? ಇದೇ ಅಲ್ಲವೇ ಜನಾಂಗೀಯ ದ್ವೇಷವನ್ನು ತನ್ನ ಉಸಿರಾಗಿಸಿಕೊಂಡು ಲಕ್ಷಾಂತರ ಜನರನ್ನು ಜನಾಂಗೀಯ ಶ್ರೇಷ್ಠತೆಯನ್ನು ರಕ್ಷಿಸುವ ಹೆಸರಿನಲ್ಲಿ ಕ್ರೂರವಾಗಿ ಕೊಲೆಗೈದು ಕ್ರೂರ ಹಿಂಸೆಗೆ ಇನ್ನೊಂದು ಹೆಸರಾದ ಹಿಟ್ಲರಿನ ಸಂತತಿಯಲ್ಲವೇ ನೀವು? ಆರ್ಯ ಜನಾಂಗ ಜಗತ್ತಿನಲ್ಲಿ ಶ್ರೇಷ್ಠ, ಅವರ ಸಂಸ್ಕೃತಿಯು ಸರ್ವ ಶ್ರೇಷ್ಠ. ಅವರೊಬ್ಬರೇ ಜಗತ್ತನ್ನು ಆಳಲು ಅರ್ಹರು ಎಂದು ಸಾರಿದ ಹಿಟ್ಲರಿನಿಗೂ, 'ಹಿಂದು ಧರ್ಮವೇ ಶ್ರೇಷ್ಠ . ಆ ಧರ್ಮವೊಂದೆ ಈ ದೇಶದಲ್ಲಿ ಇರಬೇಕು. ಅದಕ್ಕೆ ಅಡಿಯಾಳಾಗಿ ಇಲ್ಲದವರು, ಅದನ್ನು ಒಪ್ಪದವರು ಈ ದೇಶದಲ್ಲಿ ಇರಲು ಅರ್ಹರಲ್ಲ" ಎಂದು ಹೇಳುವ ನಿಮಗೂ ವ್ಯತ್ಯಾಸವೇನು? ಆರ್ಯರ ಶ್ರೇಷ್ಠತೆಯ ಹೆಸರಿನಲ್ಲಿ ಲಕ್ಷಾಂತರ ಜನ ಯಹೂಧಿಗಳನ್ನು ಮತ್ತು ಕಮ್ಯೂನಿಸ್ಟರನ್ನು ಅತಿ ಕ್ರೂರವಾಗಿ ಸಾಯಿಸಿದ ಹಿಟ್ಲರಿನಿಗೂ ಮತ್ತು ರಾಮ ಮಂದಿರ ನಿರ್ಮಾಣದ ಹೆಸರಿನಲ್ಲಿ ಹಿಂದೂ ದರ್ಮದ ಶ್ರೇಷ್ಠತೆಯನ್ನು ರಕ್ಷಿಸುವ ಹೆಸರಿನಲ್ಲಿ ಈ ದೇಶದಲ್ಲಿ ಸಾವಿರಾರು ಜನ ಮುಗ್ಧ ಜನರನ್ನು, ಪ್ರತ್ಯೇಕವಾಗಿ ಅಲ್ಪಸಂಖ್ಯಾತರರನ್ನು ಕೊಲೆ ಮಾಡಿದ ನಿಮಗೂ ವ್ಯತ್ಯಾಸವೇನು ? 2002ರಲ್ಲಿ ಗುಜರಾತಿನಲ್ಲಿ ಅಲ್ಪಸಂಖ್ಯಾತರ ನರಮೇಧವನ್ನು ನಡೆಸಿದ ನರೇಂದ್ರಮೋದಿ ನಿಮ್ಮ ರಾಜಕೀಯ ಮುಖವಾಡದ ನಾಯಕನಲ್ಲವೇ ? ರಥಯಾತ್ರೆಯ ಹೆಸರಿನಲ್ಲಿ ಈ ದೇಶದಲ್ಲಿ ರಕ್ತಪಾತಕ್ಕೆ ನಾಂದಿಹಾಡಿದ ಶ್ರೀಮಾನ್ ಲಾಲ್ ಕೃಷ್ಣ ಅಡ್ವಾನಿ ನಿಮಗೆ ಆದರ್ಶ ನಾಯಕನಲ್ಲವೇ ? ಮುಸ್ಲಿಂ ಹೆಣ್ಣು ಮಕ್ಕಳ ಮಾನಭಂಗ ಮಾಡಿ, ಅಲ್ಪಸಂಖ್ಯಾತರ ಕೈಕಾಲು ಕಡಿಯಿರಿ ಎಂದು ಅಪ್ಪಣೆ ಕೊಡಿಸಿದ ಕಲ್ಲಡ್ಕ ಪ್ರಭಾಕರ ಭಟ್‌ನನ್ನು ನೀವು ಮತ್ತು ನಿಮ್ಮ ಸಂಘ ಪರಿವಾರ ಹಾಡಿ ಹೊಗಳಲಿಲ್ಲವೇ? ಇದುವೇ ನಿಮ್ಮ ಸಂಸ್ಕೃತಿ, ಇದುವೇ ನಿಮ್ಮ ಶೀಲ ? ಇದುವೇ ನಿಮ್ಮ ದೇಶ ಭಕ್ತಿ ? ಇದೇ ನೀವು ಆ ಮಹಾನ್ ಭಾರತ ಮಾತೆಗೆ ಮಾಡುತ್ತಿರುವ ಸೇವೆ.

ಇರಲಿ ನಿಮ್ಮ ನೀತಿಗೆ ದಿಕ್ಕಾರ. ●

ಫೆಬ್ರವರಿ 28 ರ ಮುಷ್ಕರ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಅಭೂತ ಪೂರ್ವ ಐಕ್ಯತೆ ತೋರಿದ ಜೆಸಿಟಿಯು ಸಮಾವೇಶ

ಅದು ಬೆಂಗಳೂರಿನ ಒಂದು ಹಳೆಯ ರಂಗ ಮಂದಿರ. ವರದಾಚಾರ್ ಸ್ಮಾರಕ ರಂಗ ಮಂದಿರದಲ್ಲಿ ಆ ಕಾರ್ಮಿಕರ ಸಮಾವೇಶ. 80 ರ ದಶಕದ ಕಾರ್ಮಿಕರ ಐಕ್ಯ ಹೋರಾಟಗಳನ್ನು ನೆನಪಿಸುವಂತೆ ಎಲ್ಲಾ ಪ್ರಮುಖ ಕಾರ್ಮಿಕ ಸಂಘಟನೆಗಳ ಮುಖಂಡರು, ಕಾರ್ಮಿಕರು ಅಲ್ಲಿ ಅಣಿ ನೆರೆದಿದ್ದರು. ಬಿಎಂಎಸ್, ಐಎ_24ಕೆಟಿಯುಸಿ, ಎಐಟಿಯುಸಿ, ಸಿಐಟಿಯು, ಎಚ್‌ಎಂಎಸ್, ಎಐಯುಟಿಯುಸಿ, ಎಐಟಿಯುಸಿ, ಟಿಯುಸಿಸಿ,...

ಹೀಗೆ ಕಾರ್ಮಿಕ ವರ್ಗದ ಮೇಲೆ ನಡೆದಿರುವ ದಾಳಿಗಳನ್ನೆದುರಿಸುವ ನಿಟ್ಟಿನಲ್ಲಿ ಕಾರ್ಮಿಕ ಸಂಘಟನೆಗಳು ತಮ್ಮ ಹಲವು ಸೈದ್ಧಾಂತಿಕ ಒಲವು ನಿಲುವುಗಳನ್ನು ಪಕ್ಕಕ್ಕಿಟ್ಟು ಒಟ್ಟಿಗೆ ಜೋಡಿಸಿರುವುದಕ್ಕೆ ಈ ಸಮಾವೇಶ ಸಾಕ್ಷಿಯಾಯಿತು. ಒಗ್ಗಟ್ಟು ಕೇವಲ ಅಖಿಲ ಭಾರತ ಮಟ್ಟದಲ್ಲಿ ಮಾತ್ರವಲ್ಲ ರಾಜ್ಯ ಮಟ್ಟದಲ್ಲೂ ಮತ್ತೆ ಕೆಳ ಹಂತದಲ್ಲೂ ಮೂಡಿ ಬರುತ್ತಿದೆ ಎಂಬುದಕ್ಕೆ ಸಮಾವೇಶ ಸಾಕ್ಷಿಯಾಯಿತು.

ಆಫ್ರಿಕಾದ ಜನ ಜೀವನ ಪರಿಸ್ಥಿತಿಗಿಂತಲೂ ಅಧೋಗತಿಗೆ ಇಳಿದಿರುವ ಭಾರತದ ಜನ ಜೀವನದ ಕುರಿತು ಆತಂಕ ವ್ಯಕಪಡಿಸಿದ ಬಿಎಂಎಸ್‌ನ ರಾಷ್ಟ್ರೀಯ ಕಾರ್ಯದರ್ಶಿ ದೊರೈರಾಜು, ಪ್ರತ್ಯೇಕ ಪ್ರತ್ಯೇಕ ಹೋರಾಟಕ್ಕಿಂತ ಕಾರ್ಮಿಕರ ಐಕ್ಯ ಹೋರಾಟದಿಂದ ಕಾರ್ಮಿಕ ವಿರೋಧಿ ಸರ್ಕಾರಗಳಿಗೆ ಹೊಡೆತ ನೀಡಬಹುದು ಎಂದ ಎಐಟಿಯುಸಿ ಯ ರಾಷ್ಟ್ರೀಯ ಕಾರ್ಯದರ್ಶಿ ಸಚಿದೇವ ಎಲ್ಲರೂ ಫೆ. 28ರ ಮುಷ್ಕರ ಯಾವ ಬಿರುಸನ್ನು ಪಡೆದುಕೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಯಾದರು. ಕಾರ್ಮಿಕರ ಬೇಡಿಕೆಗಳು ಮಾತ್ರವಲ್ಲ, ಈ ಹೋರಾಟದಲ್ಲಿ ಕೃಷಿ ಕೂಲಿಕಾರರು, ರೈತರ ಬದುಕಿಗೆ ಸಂಬಂಧಿಸಿದ ಬೇಡಿಕೆಗಳಿವೆ, ಗೌರವಧನದ ಹೆಸರಿನಲ್ಲಿ ನಿಕೃಷ್ಟ ವೇತನಕ್ಕೆ ಕೆಲಸ ಮಾಡಿಸಿಕೊಳ್ಳಲಾಗುತ್ತಿರುವ, ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ವಿಭಾಗಗಳ ಕಾರ್ಮಿಕರ ಜೀವನದ ಪ್ರಶ್ನೆಗಳು, ಬೇಡಿಕೆಗಳು ಈ ಹೋರಾಟ ಆದ್ಯತೆ ಎಂದ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷ ಎ.ಕೆ ಪದ್ಮನಾಭನ್ ಹೋರಾಟ ಬೇಡಿಕೆಗಳ ವಿಶಾಲ ವ್ಯಾಪ್ತಿ ಮತ್ತು ಮಹತ್ವನ್ನು ಮನಗಾಣಿಸಿದರು. 1982 ರ ಜನವರಿಯಲ್ಲಿ ನಡೆದ ಐತಿಹಾಸಿಕ ಐಕ್ಯ ಮುಷ್ಕರ ವನ್ನು ನೆನಪಿಸಿದ ಅವರು ಬಿಲಿಯನ್‌ಗಟ್ಟಲೆ ಆದಾಯವಿರುವವರಿಗೆ ತೆರಿಗೆ ಹಾಕಲು ಸಿದ್ಧವಿಲ್ಲದೆ ಬಡ ಕಾರ್ಮಿಕರು, ನೌಕರರನ್ನು ಹಿಂಡುವ ಸರ್ಕಾರಗಳ ನೀತಿಗಳನ್ನು ಖಂಡಿಸಿದರು. ಎಚ್‌ಎಂಎಸ್‌ನ ಶ್ರೀನಿವಾಸ ಮೂರ್ತಿ, ಎಐಯುಟಿಯುಸಿಯ ರಾಧಾಕೃಷ್ಣ, ಟಿಯುಸಿಸಿ ಜಿ.ಆರ್.ಶಿವಶಂಕರ್ ಎಲ್ಲರೂ ಇದೇ ವಿಚಾರ ಗಳನ್ನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ವಿವಿಧ ಸಂಘಟನೆಗಳ ರಾಜ್ಯ ಮುಖಂಡರು ಮಾತನಾಡಿ ರಾಜ್ಯದಲ್ಲಿ ಹೋರಾಟ ಯಶಸ್ವಿ ಮಾಡುವ ತಮ್ಮ ಪ್ರಯತ್ನಗಳ ಕುರಿತು ಸಮಾವೇಶಕ್ಕೆ ವಿವರಿಸಿದರು.

ಈ ಹಿನ್ನಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಈಗಾಗಲೇ 8ನೇ ನವೆಂಬರ್ 2011 ರಂದು ದೇಶ ವ್ಯಾಪಿಯಾಗಿ

ಪುಟ 15ಕ್ಕೆ



ಸಮಾವೇಶದಲ್ಲಿ ಸಿಐಟಿಯು ಅ.ಭಾ. ಅಧ್ಯಕ್ಷ ಎ.ಕೆ.ಪದ್ಮನಾಭನ್

ಸುದ್ದಿ ಬಿಂಬ

ಇದು ಜನಶಕ್ತಿಯ ವರದಿಯಲ್ಲ. ಅಥವಾ 'ಪೀಪಲ್ಸ್ ಡೆಮಾಕ್ರಸಿ'ಯ ವರದಿಯೂ ಅಲ್ಲ. ಕನ್ನಡ ನಾಡಿನ ಉದಯವಾಣಿ ಪತ್ರಿಕೆಯಲ್ಲಿ 2012ರ ಜನವರಿ 28ರಂದು ಪ್ರಕಟವಾದ ವರದಿ ಇದು. ಇತರ ಮಾಧ್ಯಮಗಳಲ್ಲೂ ವ್ಯಾಪಕವಾಗಿ ಇಂತಹ ವರದಿಗಳು ಬರುತ್ತಿವೆ. ಓದಿ.

ರೈತ ಆತ್ಮಹತ್ಯೆ ಅನ್ನದಾತನ ಸಾವಿಗೆ ಕೃಷಿಯಲ್ಲ, ಕೌಟುಂಬಿಕ ಕಲಹ ಕಾರಣ!

ಬೇಕಾದಂತೆ ಡೆತ್‌ನೋಟ್ ಬರೆಸಿಕೊಂಡ ಮಮತಾ

ಸಿಂಗೂರ್‌ನಲ್ಲಿ ಟಾಟಾದ ನ್ಯಾನೋ ಘಟಕದ ವಿರುದ್ಧ ರಣಕಹಳೆ ಊದಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ತೃಣಮೂಲ ಕಾಂಗ್ರೆಸ್ ನಾಯಕಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ 'ನಿಜ ಬಣ್ಣ' ಬಯಲಿಗೆ ಬಂದಿದೆ.

ರಾಜ್ಯದ ಕೆಲ ಜಿಲ್ಲೆಗಳಲ್ಲಿ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ, ಮಮತಾ ಅವರ ಸರ್ಕಾರ, 'ಆತ್ಮಹತ್ಯೆಗೆ ಕೃಷಿ ಕಾರಣವಲ್ಲ, ಕೌಟುಂಬಿಕ ಕಲಹವೇ ಕಾರಣ' ಎಂಬ ಪತ್ರಗಳನ್ನು ಕೃಷಿಕರ ಕೈಯಲ್ಲಿ ಬರೆಸಿಕೊಂಡು ಅಮಾನವೀಯವಾಗಿ ವರ್ತಿಸುತ್ತಿರುವ ಘಟನೆ ಬೆಳಕಿಗೆ ಬಂದಿದೆ.

ಬಂಗಾಳದ ಭತ್ತದ ಕಣಜವೆಂದೇ ಖ್ಯಾತಿಯಾದ ಬರ್ದ್ವಾನ್ ಜಿಲ್ಲೆಯಲ್ಲಿ ಈ ಬಾರಿ ಬಂಪರ್ ಭತ್ತದ ಫಸಲು ಬಂದಿದೆ. ರಾಜ್ಯದ ಬೇಡಿಕೆ 5ರಿಂದ6 ಲಕ್ಷ ಮೆಟ್ರಿಕ್ ಟನ್. ಆದರೆ ಬರ್ದ್ವಾನ್ ಒಂದರಲ್ಲೇ 20 ಲಕ್ಷ ಮೆಟ್ರಿಕ್ ಟನ್ ಭತ್ತ ಬೆಳೆಯಲಾಗಿದೆ. ಅಂದರೆ ಸುಮಾರು 12 ಲಕ್ಷ ಮೆಟ್ರಿಕ್ ಟನ್ ಹೆಚ್ಚು. ಹೀಗಾಗಿ ಭತ್ತದ ಬೆಲೆ, ಕ್ವಿಂಟಾಲ್‌ಗೆ 1000ರೂ ಗಿಂತ ಕೆಳಗಿಳಿದಿದೆ. ಸಹಕಾರ ಸಂಘಗಳೂ ಈ ಭತ್ತ ಖರೀದಿಗೆ ನಿರಾಕರಿಸುತ್ತಿವೆ. ಮತ್ತೊಂದೆಡೆ ವ್ಯಾಪಾರಸ್ಥರು ಪಕ್ಕದ ಬಿಹಾರ್ ಮತ್ತು ಜಾರ್ಖಂಡ್‌ನಿಂದ ಕಡಿಮೆ ಬೆಲೆಗೆ ಭತ್ತ ಆಮದು ಮಾಡಿಕೊಳ್ಳುತ್ತಿದ್ದಾರೆ.

ಹೀಗಾಗಿ ಬರ್ದ್ವಾನ್ ರೈತರು ಬೆಳೆದ ಭತ್ತ ಮನೆಯಲ್ಲಿ ಉಳಿದುಕೊಂಡಿದೆ. ಸಾಲಗಾರರು ಬೆನ್ನಿಗೆ ಬಿದ್ದಿದ್ದಾರೆ. ಪರಿಣಾಮ ಜಿಲ್ಲೆಯೊಂದರಲ್ಲೇ ಕಳೆದ 4 ತಿಂಗಳಲ್ಲಿ 27 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಆದರೆ ಇಂತಹ ರೈತರ ನೆರವಿಗೆ ಬರುವ ಬದಲು ಸರ್ಕಾರ ಅಮಾನವೀಯ ವರ್ತನೆ ಮೂಲಕ ಆತ್ಮಹತ್ಯೆಗೂ, ಭತ್ತದ ಬೆಲೆಗೂ ಯಾವುದೇ ಸಂಬಂಧ ಇಲ್ಲ ಎಂದು ಬಿಂಬಿಸಲು ಹೊರಟಿದೆ.

ಕಾಲುತುಕ್ರಿ ಗ್ರಾಮದ 18 ವರ್ಷದ ಯುವಕ ಸಫರ್ ಮೂಲ್ಲಾನಿ ಭತ್ತ ಬೆಳೆಯಲು 2 ವರ್ಷದಲ್ಲಿ 90 ಸಾವಿರ ರೂ. ಸಾಲ ಮಾಡಿದ್ದ. ಆತನ ಬಳಿ ಹಾಲಿ 200 ಕ್ವಿಂಟಾಲ್ ಭತ್ತ ಇದೆ. ಆದರೆ ಕೊಳ್ಳುವವರಿಲ್ಲ. ಸಾಲಗಾರರ ಕಾಟ ತಾಳಲಾರದೆ ಆತ ಆತ್ಮಹತ್ಯೆಗೆ ಶರಣಾದ.

ವಿಷಯ ಬೆಳಕಿಗೆ ಬರುತ್ತದೆ ಜಿಲ್ಲಾಡಳಿತ ಆತನ ಮನೆಗೆ ಧಾವಿಸಿ ನೆರವು ನೀಡುವ ಬದಲು, 'ಸಫರ್ ಆತ್ಮಹತ್ಯೆ ಮಾಡಿಕೊಂಡಿದ್ದು ಕೃಷಿ ಕಾರಣಕ್ಕಾಗಿ ಅಲ್ಲ, ಆತ ಹಿಂದಿನ ದಿನ ತಾಯಿಯ ಜೊತೆ ಜಗಳವಾಡಿದ್ದ, ಇದೇ ಕಾರಣಕ್ಕಾಗಿ ಸಾವಿಗೆ ಶರಣಾದ' ಎಂದು ಆತನ ತಾಯಿಯ ಕೈಯಿಂದಲೇ ಪತ್ರ ಬರೆಸಿಕೊಂಡು ಹೋಗಿದ್ದಾರೆ.

ಇದು ಸಫರ್ ಒಬ್ಬನ ಕಥೆಯಲ್ಲ. ಜಿಲ್ಲೆಯಲ್ಲಿ ಹಲವು ಸಾವಿನ ಮನೆ ಕದ ಬಡಿದಿರುವ ಅಧಿಕಾರಿಗಳು ಇದೇ ರೀತಿಯ ಪತ್ರ ಬರೆಸಿಕೊಂಡು ಹೋಗಿದ್ದಾರೆ. ಅಚ್ಚರಿಯೆಂದರೆ ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜ್ಯೋತಿಪ್ರಿಯೋ ಮಲಿಕ್, ಸರ್ಕಾರ ಜಿಲ್ಲಾಡಳಿತಕ್ಕೆ ಹೀಗೊಂದು ಸೂಚನೆ ನೀಡಿದೆ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತಾರೆ. ಜೊತೆಜೊತೆಗೆ ಬರ್ದ್ವಾನ್ ನನ್ನ ಜಿಲ್ಲೆ, ಅಲ್ಲಿ ಕೃಷಿ ಸಮಸ್ಯೆಯಿಂದ ಯಾರೂ ಸಾಯಲಾರರು ಎಂಬುದು ನನಗೆ ಗೊತ್ತು ಎಂದು ಸಮಜಾಯಿಷಿ ನೀಡಿದ್ದಾರೆ.

ರೈತನ ಎದೆ ಮೇಲೆ ಹೊರಟಿದೆ 'ಸಾವಯವ ಕೃಷಿ ಮಿಷನ್' ಹೆಸರಿನ ಆರ್.ಎಸ್.ಎಸ್. 'ಜಂಬೂ ಸವಾರಿ'

ಕರ್ನಾಟಕ ರಾಜ್ಯಕ್ಕೆ ಭಾರತೀಯ ಜನತಾ ಪಕ್ಷ-ಬಿಜೆಪಿ ಸರ್ಕಾರವೆಂಬುದು ಬಂದು ವಕ್ಕರಿಸಿದ ಮೇಲೆ ಈ ಹಿಂದೆ ಇಲ್ಲದಿದ್ದ 'ಸಾವಯವ ಕೃಷಿ ಮಿಷನ್' ಎಂಬ ಒಂದು ಸಂಸ್ಥೆ ಅಸ್ತಿತ್ವಕ್ಕೆ ಬಂತು. ಕೃಷಿ ಬಿಕ್ಕಟ್ಟಿನ ಮೂಲವೇನು ? ರಾಜ್ಯ- ಕೇಂದ್ರ ಸರ್ಕಾರಗಳ 'ಸಹಾಯ ಧನ' ಕಡಿತ ಧೋರಣೆಗಳು, ಜಾಗತೀಕರಣ, ಉದಾರೀಕರಣ ನೀತಿಗಳನ್ನು ಜಾರಿಗೆ ತರುವುದರಲ್ಲಿನ ಕಾಂಗ್ರೆಸ್ ಬಿಜೆಪಿ ಪಕ್ಷಗಳ ಪೈಪೋಟಿಯ ಪರಿಣಾಮಗಳು... ಈ ಯಾವುದನ್ನು ಲೆಕ್ಕಕ್ಕೆ ತೋರಿಸದೇ ಮರೆಮಾಚಿ ರೈತರ ಆತ್ಮಹತ್ಯೆಗಳಿಗೆ ಕಾರಣ- ಆಳುವ ವರ್ಗಗಳಲ್ಲ, ಆಳುವ ಸರ್ಕಾರಗಳಲ್ಲ... ತಪ್ಪು ವಿಧಾನದಲ್ಲಿ ಕೃಷಿ ಮಾಡುತ್ತಿರುವ ರೈತನೇ ಆದಕ್ಕೆ ಕಾರಣ ಎಂದು ರೈತರನ್ನೇ ನಿಂದಿಸಿ, ಸಾವಿರಾರು ಜನ ರೈತರನ್ನು ಕರೆ ತಂದು ವಿಧಾನ ಸೌಧದ ಮುಂದೆ ನಿಲ್ಲಿಸಿ ಅವರ ಬಾಯಲ್ಲಿ 'ಇನ್ನು ಮುಂದೆ ಸಾವಯವ ಕೃಷಿಯನ್ನೆ ಮಾಡುತ್ತೇವೆ', ರಸಗೊಬ್ಬರ, ಕೀಟನಾಶಕ ಇತ್ಯಾದಿ ಬಳಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿಸಲಾಯಿತು.

ಇದೆಲ್ಲಾ ಆದ ಮೇಲೆ ಸಾವಯವ ಕೃಷಿಗೆಂದು ರಾಜ್ಯ ಬಜೆಟ್‌ನಿಂದ ಕೋಟಿ ಕೋಟಿ ರೂಪಾಯಿಗಳು ಹರಿದಿವೆ. ಅದೆಲ್ಲಾ ಯಾವು ಯಾವುದಕ್ಕೆ ಖರ್ಚಾಗಿದೆ. ಹೇಗೆ ಹೇಗೆ ಖರ್ಚಾಗಿದೆ ಎಂಬ ಬಗ್ಗೆ ನಿಮಗೆ ತುಂಬಾ ಕುತೂಹಲವಿರಲೇಬೇಕಲ್ಲವೇ. ಅಗೋ ಇಲ್ಲೊಂದು ಸ್ಯಾಂಪಲ್ ಮಾಹಿತಿ. ಕಳೆದ ನಾಲ್ಕು ವರ್ಷಗಳಿಂದ ಈ ಸಾವಯವ ಕೃಷಿ ಮಿಷನ್‌ಗೆ ಒಬ್ಬರು ಅಧ್ಯಕ್ಷರಿದ್ದಾರೆ. ಎ.ಎಸ್. ಆನಂದ್ ಅಂತ ಮನುಷ್ಯ. ದೇಶಭಕ್ತನೇ. ಸಂಘ ಪರಿವಾರದ ಕಟ್ಟಾಳು ಆದ ಮೇಲೆ ದೇಶಭಕ್ತನಾಗಿಲ್ಲದೇ ಇರಲು ಹೇಗೆ ತಾನೆ ಸಾಧ್ಯ !!. ಅಧ್ಯಕ್ಷರಾಗಿ ಈ ಪುಣ್ಯಾತ್ಮರ ಓಡಾಟ, ಜಂಬೂ ಸವಾರಿಗೆ ಆಗಿರುವ ಖರ್ಚು-ವೆಚ್ಚಗಳ ವಿವರಗಳನ್ನು ನೋಡಿ.

2011 ರ ನವೆಂಬರ್ ತಿಂಗಳವರೆಗಿನ ವಿವರ ಇದು. ಅಧ್ಯಕ್ಷರ ನಾಲ್ಕು ವರ್ಷದ ವೇತನಕ್ಕೆ 13.02 ಲಕ್ಷ, ಪ್ರವಾಸ ಭತ್ಯೆ 34.09 ಲಕ್ಷ, ಮೂರು ವರ್ಷಗಳ ಅವಧಿಯ ವಾಹನ ರಿಪೇರಿ ಖರ್ಚಿನ ವೆಚ್ಚ 2.83 ಲಕ್ಷ. (ಈ ಮೊತ್ತಕ್ಕೆ ಹೊಸತೊಂದು ವಾಹನವೇ ಬರುತ್ತಿರಲಿಲ್ಲವೇ ?) ಮೊಬೈಲ್‌ಗೆ ಮಾತುಕತೆಗಾಗಿ ಹಾಕಿಸಲಾಗಿರುವ ಕರೆನ್ಸಿ ವೆಚ್ಚ 1.60 ಲಕ್ಷ. ...ಇತ್ಯಾದಿ ....ಇತ್ಯಾದಿ....ಒಟ್ಟು ವೆಚ್ಚ



59.78 ಲಕ್ಷ. ಇನ್ನು ಬಜೆಟ್‌ಗಳಲ್ಲಿ ಸಾವಯವ ಕೃಷಿ ಹೆಸರಿನಲ್ಲಿ ಕೋಟಿ ಕೋಟಿ ಹಣ ಹರಿದಿರುವುದು ನಮಗೆ ನಿಮಗೆ ಗೊತ್ತಿರುವುದೇ. ಪ್ರತಿ ತಾಲ್ಲೂಕಿಗೆ ಈ ಯೋಜನೆಯ ಭಾಗವಾಗಿ ತಲಾ ಅರ್ಧ ಕೋಟಿ ಹಣ(49.19) ನೀಡಲಾಗಿದೆಯಂತೆ. ಇಷ್ಟೆಲ್ಲಾ ಆಗಿ ರಾಜ್ಯದ ರೈತರಿಗೆ ಇದರಿಂದ ಏನು ಪ್ರಯೋಜನವಾಗಿದೆ. ರಾಜ್ಯದಲ್ಲಿ ಕೃಷಿ ಬಿಕ್ಕಟ್ಟಿನಿಂದ ರೈತ ಸಮುದಾಯವನ್ನು ಕಿಂಚಿತ್ತಾದರೂ ಹೊರತರುವ ನಿಟ್ಟಿನಲ್ಲಿ ಕಮೀಷನ್‌ನಿಂದ ಏನು ಸಾಧನೆ ಆಗಿದೆ ಎಂದು ನಿಮಗೆ ಪ್ರಶ್ನೆ ಕೇಳ ಬೇಕು ಅನಿಸುತ್ತಿರಬಹುದು. ಆದರೆ ಹಾಗೆಲ್ಲಾದರೂ ಕೇಳಿ ಬಿಟ್ಟೀರಿ. ಪ್ರಶ್ನೆ ಕೇಳಿದಿರೋ ನೀವು ದೇಶ ದ್ರೋಹಿಗಳೇ ಸೈ.

ನಿಮ್ಮ ಹಾಗೇ ಕಮೀಷನ್ನಿನ ಕೆಲವು ಸದಸ್ಯರಿಗೆ ಅನ್ನಿಸಿ ಈಗಾಗಲೇ ಅವರು ಕೆಲವು ಅನಗತ್ಯ ದೇಶದ್ರೋಹಿ ತಕರಾರುಗಳನ್ನು ಎತ್ತಿದ್ದಾರಂತೆ. ಅದರಿಂದಾಗಿ ಇತ್ತೀಚೆಗೆ ಈ ಸಾವಯವ ಕಮೀಷನ್ನಿನ ಸಭೆ ಕರೆಯುವುದನ್ನೆ ನಿಲ್ಲಿಸಲಾಗಿದೆಯಂತೆ.

ಈ ಸಾವಯವ ಕೃಷಿ ಯೋಜನೆಯ ಸ್ಕೀಮಿನಲ್ಲಿ ಪ್ರತಿ ತಾಲ್ಲೂಕಿಗೂ 15 ಜನ ಪ್ರೇರಕರನ್ನು ಮಾಸಿಕ 1500 ರೂ ಪ್ರತಿಫಲ ನೀಡಿ ನೇಮಿಸಿಕೊಳ್ಳುವ ದೇಶ ಪ್ರೇಮಿ ಅವಕಾಶವನ್ನು ಸೃಷ್ಟಿಸಲಾಗಿದೆ. ಅಲ್ಲದೇ ಮಾಸಿಕ 1000 ರೂಪಾಯಿ ಪ್ರತಿಫಲದ ಆಧಾರದಲ್ಲಿ ಪ್ರತಿ ತಾಲ್ಲೂಕಿನಲ್ಲೂ ತಲಾ 7 ಜನ ಸ್ವಯಂ ಸೇವಕರನ್ನು.... ಕ್ಷಮಿಸಿ ಸಂಚಾಲಕರನ್ನು ನೇಮಿಸಿಕೊಳ್ಳುವ ಅವಕಾಶವನ್ನು ಸೃಷ್ಟಿಸಲಾಗಿದೆ.

ಪ್ರೇರಕರೂ ಹಾಗೂ ಸಂಚಾಲಕರುಗಳಾಗಿ ಬಹುತೇಕ 'ಕಟ್ಟಾ ದೇಶ ಪ್ರೇಮಿ'ಗಳನ್ನೇ ನೇಮಿಸಿಕೊಳ್ಳಲಾಗುತ್ತಿದೆ. ಕಟ್ಟಾ ದೇಶ ಪ್ರೇಮಿಗಳೆಂದರೆ ಯಾರು? ಸಂಘ ಪರಿವಾರ ಕೇಸರೀ ವೀರರಲ್ಲದೇ ಈ ದೇಶದಲ್ಲಿ ಕಟ್ಟಾ ದೇಶಪ್ರೇಮಿಗಳು ಬೇರೆ ಯಾರೂ ಇಲ್ಲ ಎಂಬುದು ಇಡೀ ಲೋಕಕ್ಕೆ ಗೊತ್ತಿರುವ ವಿಷಯವಲ್ಲವೇ? ಅಂತೂ ಇಂತೂ ಸಾವಯವ ಕೃಷಿ, ರೈತರ ರಕ್ಷಣೆ ಹೆಸರಿನಲ್ಲಿ ದೇಶ ಭಕ್ತರ ಬಳಗದ ಉದರ ಪೋಷಣೆಗೆ ಹೇಗೋ ಒಂದು ಸುಮಾರಾದ ವ್ಯವಸ್ಥೆಯಾಗಿರುವಾಗ ಕಮೀಷನ್ ಸದಸ್ಯರೇ ಹಲವರು ಈ ಎಲ್ಲ ಖರ್ಚು, ವೆಚ್ಚ 'ಜಂಬೂ ಸವಾರಿ'ಯಿಂದ ರಾಜ್ಯದ ರೈತರಿಗೆ ಮೂರು ಕಾಸಿನ ಪ್ರಯೋಜನವೂ ಇಲ್ಲ ಅಂತ ಚಿಲ್ಲರೆ ತಕರಾರು ಎತ್ತುವುದು ನ್ಯಾಯವೇ ?. ಆ ಗುರು ಗೋಲ್ವಾಲ್ಕರ್, ಅವರ ಗುರು ಹಿಟ್ಲರ್, ಸಂಘದ ಸಂಸ್ಥಾಪಕರಾದ

ಕೇಶವ ಬಲರಾಮ ಹಡ್ಗೇವಾರರು ಇವರಿಗೆಲ್ಲಾ ಒಳ್ಳೆ ಬುದ್ಧಿ ಕೊಡಲಿ ನಾವು ಪ್ರಾರ್ಥಿಸಬಹುದಷ್ಟೆ. ದೇಶಭಕ್ತರ ಪರವಾಗಿ ಅಲ್ಲವೇ?


ಕೃಷ್ಣ ರಾಜೇಂದ್ರ ಮಾರುಕಟ್ಟೆಯೇ ಒತ್ತೆ ಇದು ಸಾಲಕ್ಕಾಗಿ ನಿಮಗೆ ಗೊತ್ತೆ ?

ಇದೊಂದು ರೋಚಕ ಮಾಹಿತಿ. ಇಂತಹ ಅದ್ಭುತ ಬಿಜೆಪಿ ಆಡಳಿತ-ಬಿಜೆಪಿ ಅಧಿಕಾರದಲ್ಲಿ ಮಾತ್ರವೇ ಸಾಧ್ಯವೇನೋ ! ಬೆಂಗಳೂರು ನಗರದ ಹೃದಯ ಭಾಗದ 'ಸುಪ್ರಸಿದ್ಧ' (ಯಾವುದಕ್ಕೆ ಅಂತ ಕೇಳಬೇಡಿ) ಕೃಷ್ಣ ರಾಜೇಂದ್ರ ಮಾರುಕಟ್ಟೆಯನ್ನು ಅಡವಿಡಲಾಗಿದೆ !! ಬಿಜೆಪಿ-ಆಳ್ವಿಕೆಯ ಬಿಬಿಎಂಪಿಯೇ ಈ ಘನ ಸಾಧನೆಯ ಹಿಂದಿನ ಶಕ್ತಿ. ತನ್ನ ಹೆಸರಿಗೆ ತಕ್ಕಂತೆ ಸಾವಿರ ಸಾವಿರ ಕೋಟಿಗಳ ಬೃಹತ್ ಭ್ರಷ್ಟಾಚಾರವನ್ನೇ ನಡೆಸುತ್ತಿರುವ ಬೃಹತ್ ಮಹಾನರಕ... ಕ್ಷಮಿಸಿ ನಗರ ಪಾಲಿಕೆಯು ಬೆಂಗಳೂರು ಅಭಿವೃದ್ಧಿಗಾಗಿ ಈಗಾಗಲೇ ಮಾಡಿಕೊಂಡಿರುವ ಸಾಲದ ಬಡ್ಡಿಯನ್ನು ತೀರಿಸಲು ಸಾಧ್ಯವಾಗದೇ ಸಾಲದ ಬಡ್ಡಿ ತೀರಿಸುವುದಕ್ಕಾಗಿ ಹೊಸ ಸಾಲಕ್ಕಾಗಿ ಕೈ ಚಾಚುತ್ತಾ...ಸಾಲದ ಷರತ್ತು ಪೂರೈಕೆಗಾಗಿ ಕೆ.ಆರ್. ಮಾರುಕಟ್ಟೆ ಎಂಬ ಮಾರುಕಟ್ಟೆಯನ್ನೇ ಅಡವಿಟ್ಟಿದೆ.

ಹುಡ್ಕೋದಿಂದ 500 ಕೋಟಿ ರೂಪಾಯಿಗಳ ಸಾಲ ಪಡೆಯ ಹೊರಟಿರುವ ಬಿಬಿಎಂಪಿ 2,80,620 ಚದರ ಅಡಿಯ ವಿಸ್ತೀರ್ಣದ ಈ ಮಾರುಕಟ್ಟೆಯ ಮೇಲೆ ಬೇರೆ ಯಾವುದೇ ಸಾಲ ಇಲ್ಲ ಎಂದು ಘೋಷಿಸಿ ಇದೇ ಜನವರಿ 28, 2012 ರಂದು ಒತ್ತೆ ಸಂಬಂಧ ಪತ್ರಕ್ಕೆ ಸಹಿ ಹಾಕಿದೆ.

ಬೆಂಗಳೂರಿನ ಅಭಿವೃದ್ಧಿಗಾಗಿ ಬಿಬಿಎಂಪಿ ಈಗಾಗಲೇ ಮಾಡಿರುವ ಸಾಲ 2,500 ಕೋಟಿ ರೂಪಾಯಿಗಳಷ್ಟಿದೆ. ಅಲ್ಪಾವಧಿಯ ಈ ಸಾಲದ ಬಡ್ಡಿಯನ್ನು ತೆರಲು ದೀರ್ಘಾವಧಿಯ 1500 ಕೋಟಿ ರೂಪಾಯಿಗಳ ಸಾಲ ಪಡೆಯಲು ಬಿಬಿಎಂಪಿಗೆ ರಾಜ್ಯ ಬಿಜೆಪಿ ಸರ್ಕಾರ ಅನುಮತಿ ನೀಡಿದೆ. ನೀಡದೇ ಇರುತ್ತದೆಯೇ. ರಾಜ್ಯ ಸರ್ಕಾರವು ತಾನೂ 'ಅಭಿವೃದ್ಧಿ ಪರ' ಸರ್ಕಾರವೇ ತಾನೇ ? ಬಿಜೆಪಿ ಸಚಿವರು ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯನ್ನು ಅಭಿವೃದ್ಧಿ ಪಡಿಸಿದಂತೆಯೇ ರಾಜ್ಯದ ರಾಜಧಾನಿ ಬೆಂಗಳೂರನ್ನು ಬಿಜೆಪಿಯ 'ಮೇಯರು', ಕಾರ್ಪೋರೇಟರುಗಳು ಎಲ್ಲ ಸೇರಿ 'ಅಭಿವೃದ್ಧಿ' ಪಡಿಸುತ್ತಿರುವಾಗ ಬಿಜೆಪಿ ಸರ್ಕಾರವೂ ತುಂಬು ಹೃದಯದ ಸಹಕಾರ ನೀಡುತ್ತಿದೆ.

ಈ ಬಡ್ಡಿ, ಚಕ್ರ ಬಡ್ಡಿ ಸಾಲದ ಮೊರೆ ಹೋಗುವ ಬದಲು ಮತ್ತೊಂದು ದಾರಿ ಇದೆ. ಆದರೆ ಆ ದಾರಿಯಲ್ಲಿ ಬಿಜೆಪಿ ಪಕ್ಷದ ಬೆನ್ನೆಲುಬಾಗಿರುವ ದೊಡ್ಡ ದೊಡ್ಡ ವ್ಯಾಪಾರಿಗಳು, ಭಾರಿ ಶ್ರೀಮಂತರಿಗೆ, ಆಸ್ತಿವಂತರಿಗೆ, ಕಾಂಟ್ರಾಕ್ಟುದಾರರಿಗೆ ಸ್ವಲ್ಪ ನೋವಾಗುತ್ತದೆ. ಬೆಂಗಳೂರಿನ ಅಭಿವೃದ್ಧಿಯ ಫಲವನ್ನು ಉಣ್ಣುವ ಈ ವರ್ಗಗಳಿಗೆ ಸುಮ್ಮನೆ ಯಾಕಾದರೂ ನೋವು ಮಾಡುವುದು. ಸುಲಭ ಸಾಲದ ದಾರಿ ಇದ್ದೇ ಇರುವಾಗ. ಒಟ್ಟಾರೆ ಅಭಿವೃದ್ಧಿ ಕಾರ್ಯ ಸಾಂಗವಾಗಿ ನಡೆದರೆ ಸರಿ ಅಷ್ಟೆ. ಅಲ್ಲವೇ ?



ಆರ್.ರಾಮಕೃಷ್ಣ

ಭ್ರಷ್ಟಾಚಾರವೆಂಬ ಕಸದ ತೊಟ್ಟಿಯಲ್ಲಿ ಮುಳುಗಿರುವ ಬಿಬಿಎಂಪಿ

ಭ್ರಷ್ಟಾಚಾರ ನಿರ್ಮೂಲನೆಗಾಗಿ ಬಿಜೆಪಿಗೆ ಮತ ಹಾಕಿ ಅಂತ ಕೇಳಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೇಗೋ ಅಧಿಕಾರಕ್ಕೆ ಬಂದ ಬಿಜೆಪಿ ಅಲ್ಲಿ ಏನೇನು ನಡೆಸುತ್ತಿದೆ ಎಂಬುದು ಪೂರ್ಣವಾಗಿ ತಿಳಿದರೆ ಸಹೃದಯ ಮತದಾರರ ಎದೆಯೇ ಒಡೆದು ಹೋಗಬಹುದು. ಆ ಪರಿ ಭ್ರಷ್ಟಾಚಾರ, ಹಗರಣಗಳು ಬೆಂಗಳೂರಿನ ಕಲಾಸಿ ಪಾಳ್ಯ ಮಾರುಕಟ್ಟೆ ಪ್ರದೇಶದ ಮತ್ತು ಬೇರೆ ಬೇರೆ ಬಡಾವಣೆಗಳ ಬೀದಿ-ಬೀದಿಗಳಲ್ಲಿನ ಕಸದ ತೊಟ್ಟಿ ತುಂಬಿ ಕಸ ರಸ್ತೆಯಲ್ಲಿ, ಬೀದಿಯಲ್ಲೆಲ್ಲಾ ಚೆಲ್ಲಾಡಿದಂತೆ ಚೆಲ್ಲಾಡುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ 16 ತಿಂಗಳಲ್ಲಿ ಕಸ ವಿಲೇವಾರಿ ಮತ್ತು ಜನರ ಆರೋಗ್ಯ ರಕ್ಷಣೆಯ ಯೋಜನೆಯಲ್ಲಿ 80 ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆದಿರುವ ಹಗರಣವೊಂದು ಇದೀಗ ಬಯಲಿಗೆ ಬಂದಿದೆ.

ಬೆಂಗಳೂರಿನ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳಲ್ಲಿ ನಡೆದಿರುವ ಈ ಬಾನಾಗಡಿಗಳನ್ನು ನೋಡಿ. ರಸ್ತೆಗಳ ಪಕ್ಕದ ಚರಂಡಿಯ ಹೂಳು ತೆಗೆಯದೇ ತೆಗೆಯಲಾಗಿದೆ ಎಂದು ಕಾಗದದ ಮೇಲೆ ಲೆಕ್ಕ ತೋರಿಸಿ ದುಡ್ಡು ಎತ್ತಲಾಗಿದೆ. ಚರಂಡಿಗಳಲ್ಲಿ, ನೀರು ನಿಂತ ಗುಂಡಿಗಳಲ್ಲಿ ಕ್ರಿಮಿನಾಶಕ ಔಷಧ ಸಿಂಪಡಣೆ ಮಾಡದೇ ಮಾಡಲಾಗಿದೆ ಎಂದು ಕಾಗದದ ಲೆಕ್ಕ ತೋರಿಸಲಾಗಿದೆ. ಗುತ್ತಿಗೆದಾರರು ಪಾಲಿಕೆ ಸೂಚಿಸಿದ ದೂರದ ಸ್ಥಳದಲ್ಲಿ ಕಸ ವಿಲೇವಾರಿ ಮಾಡದೇ ಹತ್ತಿರ ಸ್ಥಳಗಳಲ್ಲಿ ಎಲ್ಲೆಲ್ಲೋ ಸುರಿಯಾಲಾಗಿದೆ. ಕಸದ ವಾಹನಗಳು ಎಲ್ಲೆಲ್ಲಿ ಓಡಾಡಿವೆ ಎಂಬ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುವಂತೆ ಜಿಪಿಎಸ್ ಸಾಧನವನ್ನು ವಾಹನಗಳಿಗೆ ಅಳವಡಿಸಿದ್ದರೆ 196 ವಾಹನಗಳ ಪೈಕಿ 88 ವಾಹನ ಬಿಟ್ಟಿ ಇನ್ನುಳಿದ 108 ವಾಹನಗಳ ಜಿಪಿಎಸ್ ವ್ಯವಸ್ಥೆಯನ್ನೆ ಬಂದ್ ಮಾಡಲಾಗಿದೆ. ಆದರೂ ಗುತ್ತಿಗೆದಾರರ ಸಲ್ಲ ಬೇಕಾದುದೆಲ್ಲ ಸಂದಿದೆ. ಇವೆಲ್ಲವುಗಳ ಜೊತೆಗೆ ಕಾರ್ಮಿಕ ಕಾನೂನುಗಳನ್ನು, ಈ ಕೆಲಸ ಕಾರ್ಯಗಳಲ್ಲಿ ದುಡಿಯುವ ಕಾರ್ಮಿಕರ ಹಿತಾಸಕ್ತಿಯನ್ನು ಕಸದಂತೆ ಗಾಳಿಗೆ ತೂರಲಾಗಿದೆ. ಕಸ ವಿಲೇವಾರಿ ಕಾರ್ಯದಲ್ಲಿ ದುಡಿಯುವ ಕಾರ್ಮಿಕರ ಲಾಗ್ ಬುಕ್ ತಯಾರಿಸಬೇಕು, ಅವರಿಗೆ ವಿಮೆ ಸೌಲಭ್ಯ ಒದಗಿಸಬೇಕು, ಇಎಸ್ಐ ಮೂಲಕ ಆರೋಗ್ಯ ಸೌಕರ್ಯ ಒದಗಿಸ ಬೇಕು ಇತ್ಯಾದಿ ಯಾವ ನಿಯಮವನ್ನು ಕಸ ವಿಲೆವಾರಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಪೂರೈಸದಿದ್ದರೂ ಗುತ್ತಿಗೆದಾರರ ಗುತ್ತಿಗೆಗೆ ಯಾವ ಕುತ್ತು ಬಂದಿಲ್ಲ ಅವರಿಗೆ ಪಾವತಿಯಾಗುವುದು 'ಚೊಕ್ಕ'ವಾಗಿ ಪಾವತಿಯಾಗಿದೆ. ಎಲೆಲಾ ಪವಾಡವೇ!! ಬಿಜೆಪಿ ದರ್ಬಾರಿನ ಮಾಂತ್ರಿಕ ಶಕ್ತಿಯೇ !!!

ಜನಶಕ್ತಿ

ಕೈಗಾ ಅಣುಸ್ಥಾವರದಿಂದ ಬಾಧಿತ ಜನತೆಯ ಹೋರಾಟ 60ನೇ ದಿನಕ್ಕೆ

ಉತ್ತರ ಕನ್ನಡ ಜಿಲ್ಲೆಯ ಕೈಗಾ ಅಣು ಸ್ಥಾವರ ಬಾಧಿತ ಜನತೆಯ ಹೋರಾಟ ಕಳೆದ 60 ದಿನಗಳಿಂದ ನಿರಂತರವಾಗಿ ನಡೆಯುತ್ತಿದೆ. ಬಹುಶಃ ಕಾರವಾರದಲ್ಲಿ ಹಗಲು ರಾತ್ರಿ ಇಷ್ಟು ದೀರ್ಘವಾಗಿ ನಡೆದ ಪ್ರತಿಭಟನಾ ಧರಣ ಇದೊಂದೇ ಇರಬಹುದು. ಇದು ಸಮಸ್ಯೆಯ ತೀವ್ರತೆಯನ್ನು ತೋರುತ್ತಿದೆ. ಬಾಧಿತರಿಗೆ ಸಮರ್ಪಕ ಪುನರ್ವಸತಿಸೌಕರ್ಯ ರೂಪಿಸುವ ಹೋರಾಟದಲ್ಲಿ ಸಿಪಿಐ(ಎಂ) ಪಕ್ಷದ ಸಂಸದರೂ,ರಾಜ್ಯ ಹಾಗೂ ಅಖಿಲ ಭಾರತ ಮುಖಂಡರು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ, ರಾಷ್ಟ್ರೀಯ ಮುಖಂಡರು ಕೈ ಜೋಡಿಸಿದ್ದಾರೆ. ಕ್ಷೇತ್ರದ ಶಾಸಕರೂ ನಿಯೋಗವೊಂದನ್ನು ಕೇಂದ್ರಕ್ಕೆ ಕೊಂಡೊಯ್ದಿದ್ದಾರೆ. ಬಾಧಿತರ ನೋವು, ಹೋರಾಟದ ವರದಿ ಇಲ್ಲಿದೆ.

ಯಮುನಾ ಗಾಂವ್ಕರ್

ಕೈಗಾ ಅಣುಸ್ಥಾವರದ ಸ್ವೆರಲೈಸ್ಡ್ ಝೋನ್ ವ್ಯಾಪ್ತಿಯ ಅಂದರೆ ಮಾನವ ವಾಸರಹಿತ ಪ್ರದೇಶದ 5 ಕಿ.ಮೀ. ವ್ಯಾಪ್ತಿಯ 2 ಕಂದಾಯ ಗ್ರಾಮಗಳಾದ ಬಾಳೆಮನೆ, ಹರ್ಟುಗಾ ಹಾಗೂ ಕೈಗಾ ಗ್ರಾಮದ ಭಾಗವಾದ ಹರೂರು ಜೇನ್ನುಳಿ, ದೇವಕಾರ ಗ್ರಾಮದ ಭಾಗವಾದ ಬಳಸೆ ಹಾಗೂ ಕುಚೇಗಾರ (ಹ್ಯಾಮ್ಲೆಟ್) ಮತ್ತು ಅನ್ಯಮಾರ್ಗವೇ ಇಲ್ಲದ ಸುಳಗೇರಿ ಪ್ರದೇಶದ ಸುಮಾರು 500 ಕುಟುಂಗಳು ಸುಮಾರು 2500 ಜನಸಂಖ್ಯೆಯ ಸುಮಾರು 1000ದಷ್ಟು ಎಕರೆ ಕೃಷಿ ಭೂಮಿಯನ್ನು ಸರ್ಕಾರ ವಶಕ್ಕೆ ಪಡೆದು, ಪರ್ಯಾಯ ಭೂಮಿ, ಪುನರ್ವಸತಿ, ಉದ್ಯೋಗ, ಪರಿಹಾರ ನೀಡಬೇಕೆಂದು, ಸರ್ಕಾರ ಈ ಹಿಂದೆ 1996ರಲ್ಲಿ ತನ್ನ ಪುನರ್ವಸತಿ ಸಮಿತಿಯಲ್ಲಿ ಠರಾವು ಪಾಸು ಮಾಡಿದಂತೆ ತಕ್ಷಣ ಆ ಹಳ್ಳಿಗಳನ್ನು ಸ್ವಾಧೀನಕ್ಕೆ ಪಡೆಯಬೇಕೆಂಬ ಬೇಡಿಕೆಗಳಿಗೆ ಒತ್ತಾಯಿಸಿ ಕಳೆದ 5ನೇ ಡಿಸೆಂಬರ್ 2011 ರಿಂದ ಸದ್ರಿ ಗ್ರಾಮಸ್ಥರು ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಎದುರು ನಿರಂತರ ಶಾಂತಿಯುತ ಧರಣಿ ಸತ್ಯಾಗ್ರಹ ಕೈಗೊಂಡಿದ್ದಾರೆ. ಇಂದಿಗೆ 60ನೇ ದಿನಕ್ಕೆ ಕಾಲಿಟ್ಟಿದೆ.

ಒಂದು ದಿಕ್ಕಿನಲ್ಲಿ ಕೈಗಾ ಅಣುಸ್ಥಾವರ, ಇನ್ನೊಂದು ದಿಕ್ಕಿನಲ್ಲಿ ಕಾಳಿ ಜಲವಿದ್ಯುತ್ ಯೋಜನೆ ಹಾಗೂ ಅದರ ಹಿನ್ನೀರಿನಿಂದ ಜಲಾವೃತ ಪ್ರದೇಶ, ಮತ್ತೊಂದು ದಿಕ್ಕಿನಲ್ಲಿ ಮುಗಿಲೆತ್ತರಕ್ಕೆ ನಿಂತ ಸಹ್ಯಾದ್ರಿಯ ಬೆಟ್ಟಗುಡ್ಡ ಕಾಡು ಪ್ರದೇಶವಿದೆ. ಹೀಗಾಗಿ ಯಾವುದೇ ರೀತಿಯ ದುರಂತ ಸಂಭವಿಸಿದರೂ ನಿರ್ವಹಿಸಲಸಾಧ್ಯವಾದ ಭೌಗೋಳಿಕ ಪರಿಸ್ಥಿತಿ ವಾಸ್ತವಿಕವಾಗಿ ಅಲ್ಲಿದೆ. ಇದೊಂದು ಅತ್ಯಂತ ಸೂಕ್ಷ್ಮ ಪ್ರದೇಶವಿದ್ದು ವಿಪತ್ತು ಕಾಲದಲ್ಲಿ ಮನುಷ್ಯರನ್ನು ಸಾಗಿಸಲು ಕಷ್ಟಸಾಧ್ಯ. ಅವಘಡ ನಿರ್ವಹಣೆ ಮಾಡುವವರೂ ಕೂಡ ಸಕಾಲದಲ್ಲಿ ತಕ್ಷಣ ತಲುಪುವುದು ಕೂಢ ಅಸಾಧ್ಯ.

ದೇಶದ ಯಾವುದೇ ಭಾಗದಲ್ಲಿ ಭಯೋತ್ಪಾದನೆ ಚಟುವಟಿಕೆ ಸಂಭವಿಸಿದರೂ ಅಥವಾ ಸಂಭವಿಸುವ ಮಾಹಿತಿ ಇದ್ದರೂ ಕೂಡ ಸದರಿ ಪ್ರದೇಶಗಳ ನಿವಾಸಿಗರ ಮನೆ-ಭೂಮಿ ಸುತ್ತುವರಿಯಲಾಗುತ್ತಿದೆ. ವಾರಗಟ್ಟಲೆ ಎಲ್ಲ ವಿಧದ ಸಂಪರ್ಕಗಳಿಂದ ವಂಚಿತರಾಗುತ್ತಿದ್ದೇವೆ. ಭದ್ರತಾ ಪಡೆಯು ಮನೆ ತಪಾಸಿಸುವುದು, ನಮ್ಮನ್ನೇ ಭಯೋತ್ಪಾದಕರಂತೆ ಕಾಣುವುದು ವರ್ಷದಲ್ಲಿ ಹತ್ತಾರು ಸಾರಿ ನಡೆಯುತ್ತಿರುತ್ತದೆ. ಭದ್ರತಾ ಕ್ರಮಗಳ ವರ್ತನೆಯಿಂದಾಗಿ ಬದುಕಿನ ಭವಿಷ್ಯದ ಕುರಿತು ಭಯಭೀತಿಯುಂಟಾಗಿದೆ.

ಈಗಾಗಲೇ ತಲಾ 220 ಮೆಗಾ ವ್ಯಾಟ್‌ನಂತೆ 4 ಘಟಕಗಳ ವಿದ್ಯುತ್ ಉತ್ಪಾದನೆಯು ಪ್ರಾರಂಭವಾಗಿದೆ. ಈಗ 5 ಮತ್ತು 6ನೇ ಘಟಕಗಳು ತಲಾ 750 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯದ ಘಟಕಗಳನ್ನು ಆರಂಭಿಸಲಾಗುತ್ತಿದೆ. ಈ ಸ್ಥಾವರಗಳ ಧ್ವನಿ ಹಾಗೂ ಕಂಪನ ಇಡೀ ಪ್ರದೇಶದಲ್ಲಿ ಜನಜಾನುವಾರುಗಳನ್ನು ವಿಶಿಷ್ಟ ತೊಂದರೆಗೀಡು ಮಾಡಿದೆ, ಭಯವನ್ನು ಹೆಚ್ಚಿಸಿದೆ ಹಾಗೂ ಆರೋಗ್ಯವನ್ನು ಕಾಡಿದೆ. ಇತ್ತೀಚಿನ ಅರಣ್ಯ ಇಲಾಖೆಯ ಸುತ್ತೋಲೆಯ ಪ್ರಕಾರ ಇಲ್ಲಿಯ ಕೆಲವು ಪ್ರದೇಶಗಳನ್ನು ಹುಲಿ ಯೋಜನೆಗೆ ವಹಿಸಲಾಗಿದೆ.

ಕೈಗಾ ಸುತ್ತಲಿನ 5 ಕಿ.ಮೀ. ವ್ಯಾಪ್ತಿಯು ಸುರಕ್ಷಿತ ಪ್ರದೇಶವೆಂದು ಎಷ್ಟೇ ಹೇಳಿಕೊಂಡರೂ ವಾಸ್ತವಿಕವಾಗಿ ನಂಬಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ತಮ್ಮ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ಮಾತ್ರ ಸುರಕ್ಷಿತ ಹಾಗೂ ಸಂರಕ್ಷಿತ ಪ್ರದೇಶವಾದ 20 ಕಿ.ಮೀ. ದೂರದಲ್ಲಿರುವ ಮಲ್ಲಾಪುರ ಎಂಬ ಊರಿನಲ್ಲಿ ವಸತಿ ಹಾಗೂ ಇನ್ನಿತರೆ ಮೂಲಸೌಕರ್ಯ ವ್ಯವಸ್ಥೆ ಮಾಡಿಕೊಡಲಾಗಿದೆ. ಪ್ರತಿನಿತ್ಯವೂ ತಮ್ಮ ನೌಕರರಿಗೆ ಲಕ್ಷಾಂತರ ರೂಪಾಯಿಯನ್ನು ಸಾರಿಗೆ ಸಂಪರ್ಕಕ್ಕೆ ಹಾಗೂ ಮೂಲಸೌಕರ್ಯಕ್ಕೆ ಖರ್ಚು ಮಾಡಿ ನಮ್ಮನ್ನು ಮಾತ್ರ ನಿರಂತರ ಪ್ರಯೋಗ ಬಲಿಪಶು ಮಾಡಿದ್ದಾರೆ. ಹಾಗಾಗಿ ದೇಶದ ಬೇರೆಲ್ಲ ಅಣುಸ್ಥಾವರಗಳ ಭೌಗೋಳಿಕ ಪ್ರದೇಶ ಹಾಗೂ ಜನತೆಯ ಭದ್ರತೆ, ಸುರಕ್ಷತೆಗೆ ಹೋಲಿಸಿದರೆ ಇಲ್ಲಿಯ ಭೌಗೋಳಿಕ ಸ್ಥಿತಿ ಸಂಕೀರ್ಣವೂ, ವಿಶಿಷ್ಟವೂ, ಭಿನ್ನವೂ ಆಗಿರುವುದನ್ನು ಗಮನಿಸಬೇಕು.

ಮೇಲ್ಕಾಣಿಸಿದ ವಿಶೇಷ ಹಾಗೂ ವಿಶಿಷ್ಟ ಸಂಕಷ್ಟಪೂರ್ಣ ಸಂದರ್ಭಗಳಿಂದ ಸಂವಿಧಾನ ಬದ್ಧ ಬದುಕುವ ಹಕ್ಕಿನಿಂದ, ನೆಮ್ಮದಿಯ ಜೀವನದಿಂದ ವಂಚಿತರಾಗಿದ್ದೇವೆ. ಆದ್ದರಿಂದ ನಮಗೆ ಪುನರ್ವಸತಿಯೇ ಏಕೈಕ ಮಾರ್ಗವಾಗಿದೆ. ಹೀಗಾಗಿ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಲು ವಿನಂತಿ.

1. ಎನ್‌ಪಿಸಿ ಯೋಜನಾ ಬಾಧಿತ ಪ್ರದೇಶಗಳಾದ ಹರ್ಟುಗಾದಲ್ಲಿ 140 ಕುಟುಂಬಗಳು, ಬಾಳೆಮನೆಯಲ್ಲಿ 100, ಹರೂರ‍ದಲ್ಲಿ 80, ಕುಚೇಗಾರದಲ್ಲಿ 70, ಸುಳಗೇರಿಯಲ್ಲಿ 115 ಬಳಸೆಯಲ್ಲಿ 80 ಕುಟುಂಬಗಳು ಹೀಗೆ 500ಕ್ಕೂ ಹೆಚ್ಚು ಕುಟುಂಬಗಳನ್ನು ಸ್ಥಳಾಂತರಿಸಿ, ಆ ಭೂಮಿಯನ್ನು ಸರ್ಕಾರವೇ ಸ್ವಾಧೀನ ಪಡೆದು ಪರ್ಯಾಯ ಕೃಷಿ ಭೂಮಿ, ಪರಿಹಾರ, ಉದ್ಯೋಗ, ಪುನರ್ವಸತಿ ನೀಡಬೇಕು.

2. ಯೋಜನಾ ಬಾಧಿತ ಕುಟುಂಬಕ್ಕೊಂದು ಖಾಯಂ ಸರ್ಕಾರಿ ಉದ್ಯೋಗ ನೀಡಬೇಕು.

3. ತಕ್ಷಣ ಈ ಕುರಿತು ಈ ಭಾಗದ ಜನರ ಜೊತೆಗೆ ಜಂಟಿ ಸಭೆ ಕರೆಯಬೇಕು. ಈ


ಪುಟ 14 ಕ್ಕೆ

ಕಾ. ಬಸುದೇವ್ ಆಚಾರ್ಯ ಭೇಟಿ

ಲೋಕ ಸಭೆಯ ಹಿರಿಯ ಸದಸ್ಯರು ಸಿಪಿಐ(ಎಂ) ಅಖಿಲಭಾರತ ಮುಖಂಡರೂ ಆದ ಕಾ. ಬಸುದೇವ್ ಆಚಾರ್ಯ ಗಣರಾಜ್ಯೋತ್ಸವದಂದು ಕಾರವಾರದಲ್ಲಿ ಧರಣಿ ನಿರತರನ್ನು ಭೇಟಿಮಾಡಿ ಹೋರಾಟ ನಿರತರಿಗೆ ಸೌಹಾರ್ದ ಬೆಂಬಲ ನೀಡಿದರು. ಅಹವಾಲು ಆಲಿಸಿದರು. ಅಣುಸ್ಥಾವರ ಬಾಧಿತರ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಚರ್ಚಿಸುವುದಾಗಿಯೂ, ಪ್ರಧಾನ ಮಂತ್ರಿಗಳ ಗಮನಕ್ಕೆ ತರುವುದಾಗಿಯೂ ತಿಳಿಸಿದರು. ಸ್ವತಃ ಕೈಗಾ ಪ್ರದೇಶಕ್ಕೆ ಭೇಟಿ ನೀಡಿ ಗ್ರಾಮಸ್ಥರು, ಅಧಿಕಾರಿಗಳ ಜೊತೆ ಚರ್ಚಿಸಿದರು.



ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದೊಂದಿಗೆ ಕಾಂ. ಸೀತಾರಾಮ ಯೆಚೂರಿ ನೇತೃತ್ವದಲ್ಲಿ ಚರ್ಚೆ



ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರಾದ ಶಶಿಧರ ರೆಡ್ಡಿಯವರನ್ನು 25-1-2012 ರಂದು ಸಿಪಿಎಂ ಪೊಲಿಟ್ ಬ್ಯೂರೋ ಸದಸ್ಯರೂ ರಾಜ್ಯಸಭಾ ಸದಸ್ಯರೂ ಆದ ಕಾಂ. ಸೀತಾರಾಮ ಯೆಚೂರಿಯವರ ನೇತೃತ್ವದಲ್ಲಿ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರತಿನಿಧಿಗಳು ಭೇಟಿಯಾಗಿದ್ದರು. ಪರಿಸ್ಥಿತಿಯ ಗಂಭೀರತೆ, ವಾಸಿಗಳನ್ನು ಪುನರ್ವಸತಿಗೊಳಿಸಬೇಕೆಂಬ ಸರ್ಕಾರದ ಹಿಂದಿನ ನಿರ್ಧಾರ ಇವನ್ನೆಲ್ಲ ಯೆಚೂರಿ ವಿವರಿಸಿದರು. ವಿಪತ್ತು ನಿರ್ವಹಣಾ ಪ್ರಾಧಿಕಾರದ ಇನ್ನಿತರೇ ಸದಸ್ಯರು, ತಜ್ಞರು, ವಿಜ್ಞಾನಿಗಳು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ರಾಜ್ಯ ವಿಜ್ಞಾನ-ತಂತ್ರಜ್ಞಾನ ಹಾಗೂ ಮೀನುಗಾರಿಕಾ ಸಚಿವರಿಂದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರ ಭೇಟಿ

27-1-2012ರಂದು ವಿಜ್ಞಾನ-ತಂತ್ರಜ್ಞಾನ ಹಾಗೂ ಮೀನುಗಾರಿಕಾ ಸಚಿವರು, ಸ್ಥಳೀಯ ಶಾಸಕರೂ ಆದ ಆನಂದ ಅಸ್ನೋಟಿಕರ್ ತಮ್ಮ ಸಚಿವಾಲಯದ ಪರವಾಗಿ ಹೋರಾಟಗಾರರ ನಿಯೋಗವನ್ನು ದೆಹಲಿಗೆ ಕರೆದೊಯ್ದು ಶಶಿಧರ ರೆಡ್ಡಿಯವರನ್ನು ಭೇಟಿಯಾಗಿ ಮನವಿಸಲ್ಲಿಸಿ ಹಲವಾರು ಅಂಶಗಳನ್ನು ಚರ್ಚಿಸಿದರು.

ಈ ಎರಡೂ ಸಂದರ್ಭಗಳಲ್ಲಿ ಹೋರಾಟ ನಿರತರ ಮೂಲ ಸಮಸ್ಯೆಯಾದ ಭೂಸ್ವಾಧೀನ, ಪರಿಹಾರ, ಪರ್ಯಾಯ ಭೂಮಿ, ಉದ್ಯೋಗದ ಕುರಿತು ಗ್ರಾಮಸ್ಥರು ಕೂಡ ಅಧಿಕಾರಿಗಳೊಂದಿಗೆ ಚರ್ಚಿಸಿದರು. ನಿಯೋಗದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಜಿ.ಸಿ. ಬ್ಯಯಾರೆಡ್ಡಿ, ಉಕ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ, ಹೋರಾಟ ಸಮಿತಿಯ ಅಧ್ಯಕ್ಷ ಶಾಮನಾಥ ನಾಯ್ಕ, ಕಾರ್ಯದರ್ಶಿ ಸಂತೋಷ ಗೌಡ, ಸದಸ್ಯರಾದ ಸಂಜೀವ ದೇಸಾಯಿ, ಮಹಾಬ್ಲೇಶ್ವರ ಕುಣಬಿ, ಸಂತೋಷ ಮರಾಠೆ, ಶ್ರೀಕಾಂತ ಸೇರಿಯಾ, ನಜೀರ, ಶೇಖರ ಗೌಡ, ನಾಗೇಶ ಗೌಡ ತೆರಳಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ


ಈಗ ವಿಶ್ವಬ್ಯಾಂಕ್ ಆದೇಶಿತ ನೀರಿನ ಖಾಸಗೀಕರಣದ ಸರದಿ

ಯುಪಿಎ-2 ಸರಕಾರ 'ರಾಷ್ಟ್ರೀಯ ಜಲ ನೀತಿ'ಯ ಕರಡನ್ನು ಈಗ ಸಿದ್ಧಪಡಿಸಿದೆ. ಇದು ನೀರಿನ ಖಾಸಗೀಕರಣದ ವಿಶ್ವಬ್ಯಾಂಕ್ ಪರಿಕಲ್ಪನೆಗಳನ್ನು ಪರಿಪಾಲಿಸುವ ಕರಡು ಎಂದು ಅಖಿಲ ಭಾರತ ಕಿಸಾನ್ ಸಭಾ ಬಲವಾಗಿ ಖಂಡಿಸಿದೆ. ಮಾಜಿ ಜಲಸಂಪನ್ಮೂಲ ಮಂತ್ರಿಗಳಾದ ಎನ್.ಕೆ.ಪ್ರೇಮಚಂದ್ರನ್ ಕೂಡ ಇದು ವಿಶ್ವಬ್ಯಾಂಕ್ ಆದೇಶಗಳಂತೆ ರೂಪಿಸಿದ ಜನ-ವಿರೋಧಿ ಹಾಗೂ ಬಲಪಂಥೀಯ ಉಗ್ರಗಾಮಿ ಧೋರಣೆ, ಇದನ್ನು ಸಾರಾಸಗಟು ತಿರಸ್ಕರಿಸಬೇಕು ಎಂದಿದ್ದಾರೆ.

ಕೋಟ್ಯಂತರ ಭಾರತೀಯರನ್ನು ಸುಲಿದು ಲಾಭಕೋರ ಕಾರ್ಪೊರೇಟುಗಳಿಗೆ ಕೋಟ್ಯಂತರ ರೂಪಾಯಿಗಳ ಲಾಭಗಳನ್ನು ಒದಗಿಸುವ ಯುಪಿಎ-2 ಸರಕಾರದ ನವ-ಉದಾರವಾದಿ ಚೌಕಟ್ಟಿನಲ್ಲಿರುವ ಇನ್ನೊಂದು ಪ್ರತಿಗಾಮಿ ಕ್ರಮವಿದು ಎಂಬುದು ಸ್ಪಷ್ಟ ನೀರು ಪೂರೈಕೆ ಸೇವೆಗಳನ್ನು ಖಾಸಗೀಕರಿಸಬೇಕು ಮತ್ತು ಕೃಷಿ ಹಾಗೂ ಮನೆಬಳಕೆಯ ನೀರಿಗೆ ಕೊಡುತ್ತಿರುವ ಸಬ್ಸಿಡಿಗಳನ್ನು ರದ್ದು ಮಾಡಬೇಕು, ಬದಲಿಗೆ ಖಾಸಗಿ ನೀರು ಕಂಪನಿಗಳಿಗೆ ಉತ್ತೇಜಕ ಮತ್ತು ಸಬ್ಸಿಡಿಗಳನ್ನು ಕೊಡಬೇಕು ಎನ್ನುವ ಈ ಜಲ ನೀತಿ ಯಾವ 'ಆಮ್ ಆದ್ಮಿ' ಗಾಗಿ ಎಂಬುದನ್ನು ಮಾನ್ಯ ಪ್ರಧಾನ ಮಂತ್ರಿಗಳೇ ಹೇಳಬೇಕು.

2005ರಲ್ಲಿ ವಿಶ್ವಬ್ಯಾಂಕ್ ನೀರು ಪೂರೈಕೆಯ ಖಾಸಗೀಕರಣ ಮಾಡಬೇಕು, ನೀರಾವರಿ, ನೀರು ಪೂರೈಕೆ ಮತ್ತು ನೈರ್ಮಲ್ಯ ಸೇವೆಗಳನ್ನು ಒದಗಿಸುವಲ್ಲಿ ಸರಕಾರದ ಪಾತ್ರವನ್ನು ಕನಿಷ್ಟಗೊಳಿಸಬೇಕು, ನೀರಿನ ಸಂಪನ್ಮೂಲಗಳ ಪ್ರಾಜೆಕ್ಟುಗಳ ನಿರ್ವಹಣೆ ಮತ್ತು ಆಡಳಿತದ ವೆಚ್ಚಗಳನ್ನು ಪೂರ್ಣವಾಗಿ ಬಳಕೆದಾರರಿಂದ ವಸೂಲಿ ಮಾಡಬೇಕು, ನೀರಿನ ಮಾರುಕಟ್ಟೆಯಲ್ಲಿ 'ಸ್ಪರ್ಧೆಯನ್ನು ಉತ್ತೇಜಿಸಲು' ಇವೆಲ್ಲ ಅಗತ್ಯ ಎಂದು ಹೇಳಿತ್ತು. ಆ ಪರಿಕಲ್ಪನೆಗಳನ್ನೆಲ್ಲ ಈ ರಾಷ್ಟ್ರೀಯ ಜಲನೀತಿ ಎಂಬ ಕರಡಿನಲ್ಲಿ ಯುಪಿಎ-2 ಸರಕಾರ ವಿಧೇಯತೆಯಿಂದ ಅಳವಡಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ.

ಈ ಜಲ ನೀತಿಯ ಮೂಲಕ ಸರಕಾರ ಜನತೆಗೆ, ಅದರಲ್ಲೂ ರೈತರಿಗೆ ನೀರು ಪೂರೈಸುವ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದೆ ಎಂಬುದು ಸ್ಪಷ್ಟ. ಈ ಕರಡಿನಲ್ಲಿರುವ ಪ್ರಸ್ತಾವಗಳು ನಗರಗಳು ಮತ್ತು



ಗ್ರಾಮೀಣ ಪ್ರದೇಶಗಳ ಜನರು ಬಳಸುವ ನೀರಿಗೆ ಭಾರೀ ಶುಲ್ಕಗಳನ್ನು ತೆರುವಂತೆ ಮಾಡುತ್ತವೆ ಎಂದು ಕಿಸಾನ್ ಸಭಾ ಹೇಳಿದೆ. ತನ್ನ ಎಲ್ಲ ನಾಗರಿಕರಿಗೆ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಅಗತ್ಯವಾದ ಕನಿಷ್ಟ ಪ್ರಮಾಣದ ಕುಡಿಯುವ ನೀರು ದೊರೆಯುವಂತೆ ಮಾಡುವಲ್ಲಿ ವಿಫಲವಾಗಿರುವ ಸರಕಾರ ಈಗ ಅದನ್ನು ಖಾಸಗಿಯವರು ಮಾಡುತ್ತಾರೆ ಎಂದು ಹೇಳಿ ಜಾರಿಕೊಳ್ಳುವ ಪ್ರಯತ್ನ ನಡೆಸಿದೆ ಎಂದು ಅದು ಟೀಕಿಸಿದೆ.

ಇದು ಜಗತ್ತಿನಾದ್ಯಂತ ವಿಫಲವಾಗಿರುವ, ಆಮೂಲಕ ಜನಸಾಮಾನ್ಯರಿಗೆ ಇನ್ನಷ್ಟು ಸಂಕಟಗಳನ್ನು ತಂದಿರುವ ಧೋರಣೆ. ಮನಮೋಹನ ಸಿಂಗ್ ನೇತೃತ್ವದ ಸರಕಾರ ಬೇರೆಡೆ ವಿಫಲವಾಗಿರುವ ನೀತಿಗಳನ್ನೇ ಅನುಸರಿಸುವ ಪ್ರತಿಜ್ಞೆ ಮಾಡಿರುವಂತಿದೆ!

ಈ ಜಲನೀತಿ ವಾತಾವರಣ ಬದಲಾವಣೆಯ ಸಮಸ್ಯೆಯನ್ನು ಎದುರಿಸುವಲ್ಲಿ ತಾಳಿಕೆಯ ಜಲ ನಿರ್ವಹಣೆಯತ್ತ ಸಾಗಲು ನೆರವಾಗುತ್ತದೆ, ಜಲಸಂಪನ್ಮೂಲಗಳ ಪೋಲನ್ನು ತಪ್ಪಿಸುತ್ತದೆ ಎಂದೆಲ್ಲ ಸರಕಾರ ಹೇಳಿಕೊಂಡಿದೆ. ಇಡೀ ವಲಯವನ್ನು ಕಾರ್ಪೊರೇಟ್ ಸುಲಿಗೆ ಮತ್ತು ಗುತ್ತೇದಾರಿಕೆಗೆ ತೆರೆದಿಟ್ಟ ಮೇಲೆ ಇವೆಲ್ಲ ಸಾಧ್ಯವಾಗುತ್ತದೆ ಎಂಬುದು ಕೇವಲ ಬೊಗಳೆ ಎಂಬುದೀಗ ಯಾರಿಗಾದರೂ ಅರ್ಥವಾಗುವ ಸಂಗತಿ.

ನದಿಗಳು, ಕಾಲುವೆಗಳಿಂದ ನೀರು ಪಡೆಯುತ್ತಿದ್ದ ರೈತರು ಈ ಜಲನೀತಿಯ ಪ್ರಕಾರ ಇನ್ನು ಮುಂದೆ ಲಾಭಕೋರತೆಗೆ ಕುಖ್ಯಾತರಾಗಿರುವ ಕಾರ್ಪೊರೇಟುಗಳಿಂದ ನೀರು ಖರೀದಿಸಬೇಕು. ರೈತರು ನೀರಾವರಿ ಮೂಲರಚನೆಗಳ ವಿಸ್ತರಣೆಯಾಗಬೇಕೆಂದು ಕೇಳುತ್ತಿದ್ದಾರೆ. ಅದರ ಬದಲು ಈಗ ಇಡೀ ನೀರಿನ ಪೂರೈಕೆಯನ್ನೇ ಖಾಸಗೀಕರಿಸಬೇಕೆಂಬ ಪ್ರಸ್ತಾವ್ ರೈತರ ಸಂಕಟಗಳನ್ನು ಉಲ್ಬಣಗೊಳಿಸುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ. ಇದು ಕೃಷಿ ವೆಚ್ಚವನ್ನು ಇನ್ನಷ್ಟು ವಿಪರೀತವಾಗಿ ಹೆಚ್ಚಿಸಿ ಉತ್ಪಾದಕತೆಯನ್ನು ಮತ್ತಷ್ಟು ಪ್ರತಿಕೂಲವಾಗಿ ತಟ್ಟಲಿದೆ. ರಸಗೊಬ್ಬರಗಳ ಬೆಲೆಗಳ ಮೇಲಿನ ಹತೋಟಿ ರದ್ಧತಿ, ಪೆಟ್ರೋಲಿಯಂ ಉತ್ಪನ್ನಗಳ



ವೇದರಾಜ ಎನ್.ಕೆ.

ದರ ಹೆಚ್ಚಳ, ರೈಲ್ವೆ ಸಾಗಾಣಿಕೆ ದರದಲ್ಲಿ ಹೆಚ್ಚಳ ಇತ್ಯಾದಿಗಳೊಂದಿಗೆ ಇದೂ ಸೇರಿಕೊಂಡು ರೈತರ ಬದುಕನ್ನು ನರಕ ಮಾಡಲಿರುವುದರಿಂದ ಸರಕಾರ ಮತ್ತು ವಿಶ್ವಬ್ಯಾಂಕಿನ ಈ ಹೊಸ ದಾಳಿಯನ್ನು ತನ್ನೆಲ್ಲ ಶಕ್ತಿಯನ್ನು ಬಳಸಿ ವಿರೋಧಿಸುವುದಾಗಿ ಅಖಿಲ ಭಾರತ ಕಿಸಾನ್ ಸಭಾ ಎಚ್ಚರಿಸಿದೆ.

ದಿನಕ್ಕೆ 32ರೂ./26ರೂ. ಆದಾಯವಿರುವವರು ಬಡವರಲ್ಲ ಎಂದು ಹೇಳಿ ಸುಪ್ರಿಂಕೋರ್ಟ್ ಸೇರಿದಂತೆ ದೇಶಾದ್ಯಂತ ಛೀಮಾರಿಗೆ ಗುರಿಯಾಗಿರುವ ಯೋಜನಾ ಆಯೋಗದ ಅಧ್ವರ್ಯುಗಳು ಈಗ ಮುಂದಿಟ್ಟಿರುವ ಈ ಕರಡು ರಾಷ್ಟ್ರೀಯ ಜಲ ನೀತಿ ಅದೇ ದಾರಿಯಲ್ಲಿದೆ ಎಂಬುದು ಸ್ಪಷ್ಟ. ಮಾಜಿ ಕೇಂದ್ರ ಜಲಸಂಪನ್ಮೂಲ ಮಂತ್ರಿಯೊಬ್ಬರು ಕೂಡ ಯೋಜನಾ ಆಯೋಗದಲ್ಲಿರುವವರಿಗೆ ಅಲ್ಲಿ ಮುಂದುವರೆಯುವ ಹಕ್ಕು ಉಳಿದಿಲ್ಲ ಎಂದಿದ್ದಾರೆ!

ವಾಲ್‌ಮಾರ್ಟ್ ದೊರೆಗೆ ಯುಪಿಎ-2 ಮಂತ್ರಿಯ ಭರವಸೆ!

ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 51 ಶೇ. ಎಫ್‌ಡಿಐಗೆ ಅವಕಾಶ ನೀಡುವ ನಿರ್ಣಯವನ್ನು ಕೈಬಿಟ್ಟಿಲ್ಲ, ಅದನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆಯಷ್ಟೇ, ಅದಕ್ಕೆ ಸಮ್ಮಿಶ್ರ ಸರಕಾರ ನಡೆಸುವುದರ ಕಷ್ಟಗಳು ಮತ್ತು ಪಕ್ಷಪಾತಪೂರ್ಣ ನಿಲುವುಗಳು ಕಾರಣ, ಅವೆಲ್ಲ ಸರಿಯಾಗುತ್ತವೆ. ನಿಮಗೇನು ಭಯ ಬೇಡ, ನಮ್ಮ ಸುಧಾರಣಾ ಅಜೆಂಡಾಕ್ಕೆ ಏನೂ ಆಗಿಲ್ಲ ಎಂದು ಯುಪಿಎ-2 ಸರಕಾರದ ವಾಣಿಜ್ಯ ಮಂತ್ರಿಗಳು ವಾಲ್‌ಮಾರ್ಟ್‌ನ ಅಧ್ಯಕ್ಷರಿಗೆ ಮತ್ತು ಮೆಟ್ರೋ ಕಂಪನಿಯ ಆಡಳಿತ ಮಂಡಳಿ ಸದಸ್ಯರಿಗೆ ವೈಯಕ್ತಿಕವಾಗಿ ಭರವಸೆ ಕೊಟ್ಟಿದ್ದಾರೆ. ಅದಕ್ಕೆ ಪ್ರತಿಯಾಗಿ ಈ ಬಹುರಾಷ್ಟ್ರೀಯ ಚಿಲ್ಲರೆ ಮಾರಾಟ ದೊರೆಗಳು ಈ ನಿರ್ಣಯದ ಜಾರಿಯಿಂದ ಭಾರತಕ್ಕೆ, ಭಾರತದ ಜನರಿಗೆ ಎಷ್ಟೊಂದು ಲಾಭಗಳಿವೆ, ಅವರ ಸೇವೆಗೆ ತಾವು ತುದಿಗಾಲ ಮೇಲೆ ನಿಂತಿರುವುದಾಗಿ ಪುನರುಚ್ಚರಿಸಿದ್ದಾರಂತೆ!

ಅತ್ತ ಪ್ರಧಾನ ಮಂತ್ರಿಗಳು ಕೂಡ ಐದು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳ ನಂತರ ಆ ನಿರ್ಣಯವನ್ನು ಜಾರಿಗೊಳಿಸಲಾಗುವುದು ಎಂದಿದ್ದಾರೆ. ಈ ನಿರ್ಣಯ ಅಮೆರಿಕಾದ ವಾಲ್‌ಮಾರ್ಟ್ ಮತ್ತು ಜರ್ಮನಿಯ ಮೆಟ್ರೊ ದೊರೆಗಳು ಹೇಳುವಂತೆ ಹಾಗೂ ಯುಪಿಎ-2 ಸರಕಾರ ಅದಕ್ಕೆ ತಲೆಯಾಡಿಸುವಂತೆ ನಿಜವಾಗಿಯೂ ನಮ್ಮ ಪ್ರಧಾನಿಗಳ 'ಆಮ್ ಆದ್ಮಿ'ಯ ಪರವಾಗಿದ್ದರೆ ಚುನಾವಣೆ ಮುಗಿಯುವವರೆಗೆ ಏಕೆ ಕಾಯಬೇಕೋ?

ಭ್ರಷ್ಟಾಚಾರದ ವಿಚಾರಣೆಗೆ ಮಂಜೂರಾತಿ: ಸಮಯ ತಳ್ಳಬೇಡಿ ಎಂದ ಸುಪ್ರಿಂ ಕೋರ್ಟ್

ಭ್ರಷ್ಟಾಚಾರದ ವಿಚಾರಣೆಗೆ ಸಂಬಂಧಪಟ್ಟಂತೆ ಯುಪಿಎ-2 ಸರಕಾರ ಸರ್ವೋಚ್ಚ ನ್ಯಾಯಾಲಯದಿಂದ ಮತ್ತೊಮ್ಮೆ ಟೀಕೆಗೊಳಗಾಗಿದೆ. ಆದರೆ ಕೆಳಗೆ ಬಿದ್ದರೂ ಮೂಗು ಮೇಲಿದೆಯಲ್ಲಾ ಎಂದಿದೆ ಪ್ರಧಾನ ಮಂತ್ರಿಗಳ ಕಚೇರಿ.

ಸಾರ್ವಜನಿಕ ಸೇವೆಯಲ್ಲಿರುವವರ ಮೇಲಿನ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಲು ಸಂಬಂಧಪಟ್ಟ ಮೇಲಧಿಕಾರಿಗಳ ಮಂಜೂರಾತಿ ಅಗತ್ಯ. ಆದರೆ ಸಂಬಂಧಪಟ್ಟವರು ಮಂಜೂರಾತಿಯನ್ನೂ ಕೊಡದೆ, ಅದರ ನಿರಾಕರಣೆಯನ್ನೂ ಮಾಡದೆ ತಿಂಗಳುಗಟ್ಟಲೆ ಸಮಯ ತಳ್ಳುತ್ತಿದ್ದರೆ ಏನು ಮಾಡುವುದು? ಈ ರೀತಿ ಸಮಯ ತಳ್ಳಬಾರದು, ಭ್ರಷ್ಟಾಚಾರ ತಡೆ ಕಾನೂನಿನ ಸೆಕ್ಷನ್ 19ರ ಅಡಿಯಲ್ಲಿ ಮೂರು ತಿಂಗಳೊಳಗೆ ನಿರ್ಧಾರವನ್ನು ತಿಳಿಸಬೇಕು ಎಂದು ಸುಪ್ರಿಂ ಕೋರ್ಟ್ ತಾಕೀತು ಮಾಡಿದೆ.

2ಜಿ ತರಂಗಾಂತರ ಹಗರಣದ ಕೇಸಿನಲ್ಲಿ ಮಾಜಿ ದೂರಸಂಪರ್ಕ ಮಂತ್ರಿ ಎ. ರಾಜ ಅವರ ವಿಚಾರಣೆಗೆ ಮಂಜೂರಾತಿ ನೀಡಬೇಕೆಂದು ಜನತಾಪಕ್ಷದ ಮುಖಂಡ ಸುಬ್ರಮಣ್ಯ ಸ್ವಾಮಿ ಸಲ್ಲಿಸಿದ ಅರ್ಜಿಗೆ ಸಂಬಂಧಪಟ್ಟ ಮಂಜೂರಾತಿ ಅಧಿಕಾರಿಯಾದ ಪ್ರಧಾನ ಮಂತ್ರಿಗಳಿಂದ ಉತ್ತರ ಪಡೆಯುವಲ್ಲಿ ವಿಳಂಬವಾಗುತ್ತಿದೆ ಎಂದು ಸುಪ್ರಿಂ ಕೋರ್ಟ್ ಮೊರೆ ಹೋಗಿದ್ದರು. ಇದರ ಮೇಲೆ ತೀರ್ಪು ನೀಡುತ್ತ ಸುಪ್ರಿಂ ಕೋರ್ಟ್ ಈ ತಾಕೀತು ಮಾಡಿದೆ.

ಪ್ರಧಾನ ಮಂತ್ರಿಗಳಿಗೆ ನಿಜವಾದ ಸಂಗತಿಗಳನ್ನು, ಕಾನೂನು ನಿಲುವನ್ನು ತಿಳಿಸಿದ್ದರೆ ಅವರು ಈ ವಿಷಯ ಒಂದು ವರ್ಷಕ್ಕೂ ಹೆಚ್ಚು ಕಾಲ ನೆನೆಗುದಿಯಲ್ಲಿರಲು ಬಿಡುತ್ತಿರಲಿಲ್ಲ ಎಂಬ ಒಬ್ಬ ನ್ಯಾಯಾಧೀಶರ ಟಿಪ್ಪಣಿಯನ್ನು ಉದ್ಧರಿಸುತ್ತ ಪ್ರಧಾನ ಮಂತ್ರಿಗಳ ಕಚೇರಿ ಇದು ಪ್ರಧಾನ ಮಂತ್ರಿಗಳ ಗೆಲುವು ಎಂದಿದೆ!

ಅದೇ ವೇಳೆಗೆ ಈ ಪೀಠದಲ್ಲಿದ್ದ ಇನ್ನೊಬ್ಬ ನ್ಯಾಯಾಧೀಶರು "ಮಂಜೂರಾತಿ ನೀಡುವಲ್ಲಿ ವಿಳಂಬ ಹಲವು ವಿಚಾರಣೆಗಳನ್ನು ಕೆಡಿಸಿದೆ ಮತ್ತು ಸಾರ್ವಜನಿಕ ಮನದಲ್ಲಿ ಇದನ್ನು ಒಬ್ಬ ಭ್ರಷ್ಟ ಸಾರ್ವಜನಿಕ ಅಧಿಕಾರಿಗೆ ಆತ ಹಿಂದೆ ಸಲ್ಲಿಸಿದ ಅಥವ ಮುಂದೆ ಸಲ್ಲಿಸಬಹುದಾದ ಸೇವೆಗೆ ಪ್ರತಿಯಾಗಿ ರಕ್ಷಣೆ ಕೊಡಲಾಗುತ್ತಿದೆ, ಒಂದೇ ದುಷ್ಕೃತ್ಯದಲ್ಲಿ ಮಂಜೂರಾತಿ ನೀಡುವವರು ಮತ್ತು ಆ ಭ್ರಷ್ಟ ಅಧಿಕಾರಿ ಪಾಲುದಾರರಾಗಿದ್ದರು ಅಥವ ಆಗಿದ್ದಾರೆ ಎಂದು ಪ್ರತಿಕೂಲ ರೀತಿಯಲ್ಲಿ ಕಾಣಲಾಗುತ್ತದೆ" ಎಂದಿರುವುದರ ಬಗ್ಗೆ ದಿವ್ಯಮೌನ!

ಅಷ್ಟೇ ಅಲ್ಲ, 'ಇಂದು ಭ್ರಷ್ಟಾಚಾರ ನಮ್ಮ ದೇಶದಲ್ಲಿ ಸಂವಿಧಾನಿಕ ಆಳ್ವಿಕೆಯ ಪರಿಕಲ್ಪನೆಗೆ ಬೆದರಿಕೆಯೊಡ್ಡಿದೆಯಷ್ಟೇ ಅಲ್ಲ, ಅದು ಭಾರತೀಯ ಪ್ರಜಾಪ್ರಭುತ್ವದ ಮತ್ತು ಕಾನೂನಿನ ಆಳ್ವಿಕೆಯ ಅಡಿಪಾಯಕ್ಕೇ ಬೆದರಿಕೆ ಒಡ್ಡಿದೆ' ಎಂಬ ಅವರ ಮಾತನ್ನು ಉದ್ಧರಿಸುವ ನೈತಿಕ ಧೈರ್ಯವೂ ಯುಪಿಎ-2 ಸರಕಾರಕ್ಕೆ ಇದ್ದಂತಿಲ್ಲ.

ಕೇಂದ್ರೀಯ ಜಾಗೃತಾ ಆಯೋಗ ಕೂಡ ಯುಪಿಎ-2 ಸರಕಾರದ 17 ಇಲಾಖೆಗಳು ತನ್ನ ಮುಂದೆ ಇರುವ 28 ಕೇಸುಗಳಿಗೆ ಮಂಜೂರಾತಿ ಬಗ್ಗೆ ನಾಲ್ಕು ತಿಂಗಳಿಂದಲೂ ಹೆಚ್ಚಿನ ಸಮಯದಿಂದ ನಿರ್ಧಾರ ತಿಳಿಸಿಲ್ಲ. ಬೇಗನೇ ತಿಳಿಸಿ ಎಂದು ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದಿದೆಯಂತೆ.

ಜಗದಗಲ

ಶರತ್‌ಚಂದ್ರ

ನೈಜೀರಿಯಾಕ್ಕೂ ಬಂತು 'ತಹರೀರ್ ಚೌಕ'

ಈಜಿಪ್ಟಿನ ಕೈರೋದ 'ತಹರಿರ್ ಚೌಕ' ಮತ್ತು ಅಮೆರಿಕದ 'ವಶಪಡಿಸಿಕೊಳ್ಳಿ' ಚಳುವಳಿ ನೈಜೀರೀಯಾಕ್ಕೂ ಬಂತು - ಈ ವರ್ಷದ ಮೊದಲ ದಿನವೇ. ಈವರೆಗೆ ಮುಸ್ಲಿಂ-ಕ್ರಿಶ್ಚಿಯನ್ನರ ಮತ್ತು ಹಲವು ಜನಾಂಗೀಯ ಗುಂಪುಗಳ ನಡುವೆ ಸಂಘರ್ಷ ಹಾಗೂ ದಂಗೆಗಳಿಗೆ ಕುಖ್ಯಾತವಾಗಿದ್ದ ನೈಜೀರಿಯಾದಲ್ಲಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ ಮತ್ತು ದಂಗೆ ನಡೆಯಿತು. ಒಂದು ವಾರ ನಡೆದ ಈ ದಂಗೆ ಉತ್ತರ ಆಫ್ರಿಕಾದಲ್ಲೆಡೆ ಹರಡಿದ 'ತಹರಿರ್ ಚೌಕ'ದ ಮತ್ತು ಅಮೆರಿಕದ 'ವಶಪಡಿಸಿಕೊಳ್ಳಿ' ಚಳುವಳಿ ಎರಡರ ಅಂಶಗಳನ್ನೂ ತೆಗೆದುಕೊಂಡಿತು. ಕಾರ್ಮಿಕರ ಸಾರ್ವತ್ರಿಕ ಮುಷ್ಕರವನ್ನು ಅದಕ್ಕೆ ಸೇರಿಸಿದ್ದು ಅದರ ವಿಶೇಷತೆಯಾಗಿತ್ತು. ಅದು ನೈಜೀರಿಯನ್ ಜನತೆಯ ದಂಗೆಯ ಮಹತ್ವವನ್ನೂ ಹೆಚ್ಚಿಸಿದೆ. ನೈಜೀರಿಯಾ ಪಶ್ಚಿಮ ಆಫ್ರಿಕಾದ ಒಂದು ಪ್ರಮುಖ ದೇಶ. ತೈಲ ಮತ್ತಿತರ ಪ್ರಾಕೃತಿಕ ಸಂಪನ್ಮೂಲಗಳನ್ನು ಹೊಂದಿದ್ದು ಅದರ ರಫ್ತಿನ ಮೇಲೆ ಆರ್ಥಿಕ ಆಧಾರಿತವಾಗಿದೆ.

ಈ ವಿಶಿಷ್ಟ ದಂಗೆಗೆ ಕಿಡಿ ಹೊತ್ತಿಸಿದ್ದು ನೈಜೀರಿಯನ್ ಸರ್ಕಾರ ಜನವರಿ 1 ರಂದು ಪೆಟ್ರೋಲ್ ಬೆಲೆಯನ್ನು ಇಮ್ಮಡಿಗಿಂತಲೂ ಹೆಚ್ಚಿನ ಮಟ್ಟಕ್ಕೆ ಹೆಚ್ಚಿಸಿದ ಕ್ರಮ. ಪ್ರತಿ ಲೀಟರಿಗೆ 65 ನೈರಾ (ಸುಮಾರು ರೂ. 20)ದಿಂದ 140 ನೈರಾಕ್ಕೆ (ಸುಮಾರು ರೂ. 43) ಒಮ್ಮೆಲೆ ಹೆಚ್ಚಿಸಿತ್ತು. ಇದು ಎಲ್ಲಾ ವಿಭಾಗಗಳ ನೈಜೀರಿಯನ್ನರಲ್ಲಿ ತೀವ್ರ ಆಕ್ರೋಶ ಉಂಟು ಮಾಡಿತ್ತು. ಒಂದು ವಾರ ನಡೆದ ತೀವ್ರ ದಂಗೆಗಳ ಫಲವಾಗಿ ಸರ್ಕಾರ ಬೆಲೆ ಏರಿಕೆಯನ್ನು



97 ನೈರಾಕ್ಕೆ (ಸುಮಾರು ರೂ. 30) ಮಿತಿಗೊಳಿಸಬೇಕಾಗಿ ಬಂತು. ಅದಕ್ಕಿಂತಲೂ ಹೆಚ್ಚಾಗಿ ನೈಜೀರಿಯನ್ ಕಾರ್ಮಿಕ ವರ್ಗ ಮತ್ತು ಸಾಮಾನ್ಯ ಜನತೆಯಲ್ಲಿ ರಾಜಕೀಯ ಜಾಗೃತಿ ಮತ್ತು ಪ್ರಜ್ಞೆಯನ್ನೂ ಮೂಡಿಸಿತು.

ಎರಡೂ ನೈಜೀರಿಯನ್ ಕೇಂದ್ರೀಯ ಟ್ರೇಡ್ ಯೂನಿಯನುಗಳು ಮತ್ತು ನಾಗರಿಕ ಸಂಘಟನೆಗಳ ಒಕ್ಕೂಟ ಸಾರ್ವತ್ರಿಕ ಮುಷ್ಕರಕ್ಕೆ ಮತ್ತು ಹರತಾಳಕ್ಕೆ ಕರೆ ಕೊಟ್ಟಿದ್ದು, ಜನತೆಯ ಆಕ್ರೋಶಕ್ಕೆ ಕೇಂದ್ರ ಬಿಂದು ಒದಗಿಸಿತು. ನೈಜೀರಿಯಾದ ಎಲ್ಲಾ ಪ್ರಮುಖ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು, ಸಾರ್ವಜನಿಕ ಸೇವೆಗಳು ಮತ್ತು ಸರ್ಕಾರಿ ಕೆಲಸ ಸ್ತಬ್ಧವಾಗಿತ್ತು. ಎಲ್ಲಾ ಪ್ರಮುಖ ಜನವಿಭಾಗಗಳು - ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ನಿರುದ್ಯೋಗಿ ಯುವಜನರು, ಮಹಿಳೆಯರು, ಮಧ್ಯಮ ವರ್ಗದ ಲಾಯರುಗಳು ಡಾಕ್ಟರುಗಳು ಬುದ್ದಿಜೀವಿಗಳು - ತಮ್ಮೆಲ್ಲಾ ಜನಾಂಗೀಯ, ಧಾರ್ಮಿಕ ಬೇಧಗಳನ್ನು ಮರೆತು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ರಾಜಧಾನಿ ಅಬುಜಾ ಮತ್ತು ಮಹಾನಗರ ಲಾಗೋಸ್ ಸೇರಿದಂತೆ ಎಲ್ಲಾ ನಗರಗಳಲ್ಲಿ ಭಾರಿ ಪ್ರದರ್ಶನಗಳು ನಡೆದವು. ಆಯಾ ನಗರಗಳ ಕೇಂದ್ರೀಯ ಚೌಕ ಅಥವಾ ಪಾರ್ಕುಗಳನ್ನು ಜನಸ್ತೋಮ 'ವಶಪಡಿಸಿಕೊಂಡಿತ್ತು'. ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ಹಾಡು, ಸಂಗೀತ ಕಚೇರಿ, ಭಾಷಣಗಳು, ಚರ್ಚೆಗಳು ಅಲ್ಲಿ ನಡೆಯುತ್ತಿದ್ದವು.

ಈ ಚಳುವಳಿ ನಡೆದ ಒಂದು ವಾರ ಕಾಲ, ದಿನದಿಂದ ದಿನಕ್ಕೆ ಚಳುವಳಿಯಲ್ಲಿ ಭಾಗವಹಿಸುವ ಜನರ ಸಂಖ್ಯೆ ಹೆಚ್ಚುತ್ತಾ ನಡೆದಿತ್ತು. ಈ ಒಂದು ವಾರ ಹಿಂದೆಂದೂ ಒಂದು ಕಡೆ ಸೇರದ ಪರಸ್ಪರ ಸಂಪರ್ಕ ಇರದ ಜನವಿಭಾಗಗಳ ನಡುವೆ ಗಂಭೀರ ಸಂವಾದ ಏರ್ಪಟ್ಟಿತು. ಹೊಸ ರಾಜಕೀಯ ಪ್ರಜ್ಞೆ ಮೂಡಿ ಬಂತು. ಇದರ ನಾಯಕತ್ವವನ್ನು ಹಿಂದೆ ಯಾವುದೇ ರಾಜಕೀಯ ಚಟುವಟಿಕೆ ನಡೆಸದ ಕಾರ್ಮಿಕರ ಯೂನಿಯನುಗಳು ವಹಿಸಿದ್ದು ಇನ್ನಷ್ಟು ವಿಶೇಷವಾಗಿತ್ತು. ಈ ಒಂದು ವಾರ ಜನತೆಯಲ್ಲಿ ಕಂಡು ಬಂದ ಐಕ್ಯತೆ ಸಹ ಅದ್ಭುತವಾಗಿತ್ತು. ಇಡೀ ದಿನ ನಡೆಯುತ್ತಿದ್ದ ರ‍್ಯಾಲಿಗಳಲ್ಲಿ ಕ್ರಿಶ್ಚಿಯನ್ನರು ಇತರ ಧಾರ್ಮಿಕರು, ಮುಸ್ಲಿಮರ ಪ್ರಾರ್ಥನೆ ಹೊತ್ತಿಗೆ ಸ್ವಲ್ಪ ಕಾಲ ಕಾರ್ಯಕ್ರಮ ನಿಲ್ಲಿಸಿ ಅದಕ್ಕೆ ಅನುವು ಮಾಡಿಕೊಡುತ್ತಿದ್ದುದು ಕಂಡು ಬಂತು. ಇತ್ತೀಚೆಗಷ್ಟೇ ಕ್ರಿಶ್ಚಿಯನ್-ಮುಸ್ಲಿಂ ಮತ್ತು ಕೆಲವು ಆದಿವಾಸಿ ಪಂಗಡಗಳ ನಡುವೆ ಕೋಮುದಂಗೆಗಳು ನಡೆದ ಹಿನ್ನೆಲೆಯಲ್ಲಿ ಇದು ವಿಶೇಷವಾಗಿತ್ತು.

ತೈಲ ಮುಂತಾದ ಪ್ರಾಕೃತಿಕ ಸಂಪನ್ಮೂಲ ರಫ್ತುಗಳಿಂದ ಶ್ರೀಮಂತವಾಗಿರುವ ಬಂಡವಾಳಶಾಹಿ ವರ್ಗ ಧಾರ್ಮಿಕ ಜನಾಂಗೀಯ ಗುಂಪುಗಳನ್ನು ಒಡೆದು ಆಳುವ ನೀತಿ ಮತ್ತು ಕಾರ್ಮಿಕರ ರಾಜಕೀಯ ಪ್ರಜ್ಞೆ ಆಧರಿಸಿ ಸುಲಭವಾಗಿ ಆಳುತ್ತಿದ್ದರು. ತೈಲ ದೇಶದಲ್ಲೇ ಉತ್ಪಾದನೆಯಾಗುತ್ತಿದ್ದರೂ ಅಂತರ್‍ರಾಷ್ಟ್ರೀಯ ಬೆಲೆಏರಿಕೆಯ ನೆಪ ಹೇಳಿ ಅದರ ಬೆಲೆ ಏರಿಸುವ ದಾರ್ಷ್ಟ್ಯ ಅದಕ್ಕಿತ್ತು. ಇದು ಮುಂಬರುವ ದಿನಗಳಲ್ಲಿ ಅಷ್ಟು ಸುಲಭವಾಗಲಿಕ್ಕಿಲ್ಲ. ಈ ವಾರದಲ್ಲಿ ಜನತೆ ಪಡೆದ ರಾಜಕೀಯ ಪ್ರಜ್ಞೆ ಮತ್ತು ಅನುಭವ ನೈಜೀರಿಯಾದ ರಾಜಕೀಯದಲ್ಲಿ ಮಹತ್ತರ ಬದಲಾವಣೆ ತರಲಿದೆ ಎಂಬುದು ರಾಜಕೀಯ ವೀಕ್ಷಕರ ಅಭಿಪ್ರಾಯ. ●

ಚೀನಾದಲ್ಲಿ 1911 ಕ್ರಾಂತಿಯ ಶತಕದ ಸಂಭ್ರಮ

ಚೀನಾದಲ್ಲಿ 1911 ರ ಸನ್-ಯಾಟ್-ಸೇನ್ ನಾಯಕತ್ವದ ಪ್ರಜಾಸತ್ತಾತ್ಮಕ ಕ್ರಾಂತಿಯ ಶತಮಾನೋತ್ಸವವನ್ನು ಇತ್ತೀಚೆಗೆ ವ್ಯಾಪಕವಾಗಿ ಆಚರಿಸಲಾಯಿತು. 1911 ರ ಕ್ರಾಂತಿ ಮೂರು ಶತಮಾನಗಳ ಕಿಂಗ್ ವಂಶದ ರಾಜರ (1644-1911) ಆಳ್ವಿಕೆ ಮತ್ತು ಎರಡು ಸಾವಿರ ವರ್ಷಗಳ ಪಾಳೆಯಗಾರಿ ಅಧಿಕಾರಶಾಹಿ ಸರ್ವಾಧಿಕಾರವನ್ನು ಕೊನೆಗೊಳಿಸಿ ರಾಷ್ಟ್ರೀಯ ವಿಮೋಚನೆ ಮಾಡಿತ್ತು. ಚೀನಾ ಪ್ರಜಾಪ್ರಭುತ್ವ, ಆಧುನಿಕೀಕರಣ ಮತ್ತು ಹೊರ ಜಗತ್ತಿಗೆ ತೆರೆದುಕೊಂಡಿದ್ದು ಈ ಕ್ರಾಂತಿಯಿಂದಲೇ. ಈ ರಾಜಕೀಯ ಕ್ರಾಂತಿ ಪಾಳಯೆಗಾರಿ ಸಾಮಾಜಿಕ ಪದ್ಧತಿಗಳು ಮತ್ತು ಸೈದ್ಧಾಂತಿಕ ಹಿಡಿತದಿಂದ ಜನರ ಮನಸ್ಸನ್ನು ಬಿಡುಗಡೆ ಮಾಡುವತ್ತ ಮೊದಲ ಮತ್ತು ದೊಡ್ಡ ಹೆಜ್ಜೆ ಆಗಿತ್ತು. ಈ ಕ್ರಾಂತಿಯ ನಂತರ ಚೀನಾದಲ್ಲಿ ತೀವ್ರ ಕೈಗಾರಿಕೀಕರಣ ಆರಂಭವಾಗಿತ್ತು. ಜನಾಂಗೀಯತೆ ಮತ್ತಿತರ ಹಿಂದುಳಿದ ಅಂಶಗಳ ಮೇಲೆ ಆಧರಿತ ಅಸಮಾನತೆ ಹೋಗಲಾಡಿಸುವ ಪ್ರಕ್ರಿಯೆ ಸಹ ಆರಂಭವಾಗಿತ್ತು.

ಚೀನಾದ ಕಾರ್ಮಿಕ ವರ್ಗ ಮತ್ತು ಅದರ ಪಕ್ಷವಾದ ಚೀನಾ ಕಮ್ಯುನಿಸ್ಟ್ ಪಕ್ಷ ಈ ಕ್ರಾಂತಿಯ ಕೂಸು. ಕ್ರಾಂತಿಯ ನಂತರದ ತೀವ್ರ ಕೈಗಾರಿಕೀಕರಣವೇ ಚೀನಾದ ಕಾರ್ಮಿಕ ವರ್ಗದ ಹುಟ್ಟು ಬೆಳವಣಿಗೆಗೆ ಕಾರಣವಾಗಿತ್ತು. ಮಾರ್ಕ್ಸ್‌ವಾದ ಮುಂತಾದ ಆಧುನಿಕ ಸಿದ್ಧಾಂತಗಳು ಚೀನಾ ಪ್ರವೇಶಿಸಿ ಆ ನೆಲದಲ್ಲಿ ಬೇರೂರಿದ್ದು ಸಹ ಕ್ರಾಂತಿ ಸಿದ್ಧ ಮಾಡಿದ ಭೂಮಿಕೆಯಿಂದಲೇ. ಕಮ್ಯುನಿಸ್ಟ್ ಪಕ್ಷದ ಮೊದಲ ದಿನಗಳ ಕಾರ್ಯಕರ್ತರಲ್ಲಿ ಹಲವರು 1911 ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅದರ ಪಾಳೆಯಗಾರಿ-ವಿರೋಧಿ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಧ್ಯೇಯ ಉದ್ದೇಶಗಳಿಂದ ಪ್ರಭಾವಿತರಾಗಿದ್ದರು.

ಚೀನಾದ ಅಧ್ಯಕ್ಷ ಹು ಜಿಂತಾವೊ ಪ್ರಜಾಸತ್ತಾತ್ಮಕ ಕ್ರಾಂತಿಯ ಶತಮಾನೋತ್ಸವವನ್ನು ಬೆಜಿಂಗಿನಲ್ಲಿ ಉದ್ಘಾಟಿಸಿದರು. 1840ರ ಅಫೀಮು ಯುದ್ಧದಿಂದ 1911ರ ಕ್ರಾಂತಿಯ ನಡುವಿನ ಅವಧಿಯನ್ನು ನೆನಪಿಸಿಕೊಳ್ಳುತ್ತಾ, ಅದು ಚೀನಾದ ಜನತೆಯ ರಾಷ್ಟ್ರೀಯ ವಿಮೋಚನೆ ಮತ್ತು ಪುನರುಜ್ಜೀವನದ ಆಶಯಗಳ ಫಲವಾಗಿತ್ತು. ಅದು ಒಂದು ಸಮಗ್ರ ಆಧುನಿಕ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯಾಗಿತ್ತು. ಅದರ ನಾಯಕರಾದ ಸನ್-ಯಾಟ್-ಸೇನ್ ದೇಶ ನೆನಪಿಸಿಕೊಳ್ಳಬೇಕಾದ ಆಧುನಿಕ ರಾಷ್ಟ್ರೀಯ ಹೀರೋ. ಅಗ್ರಣಿ ದೇಶಪ್ರೇಮಿ ನಾಯಕರ ಸಾಲಿಗೆ ಸೇರುತ್ತಾರೆ. ಚೀನಾ ಕಮ್ಯುನಿಸ್ಟ್ ಪಕ್ಷ 1911ರ ಕ್ರಾಂತಿಯ ಪಾಳೆಯಗಾರಿ-ವಿರೋಧಿ ಸಾಮ್ರಾಜ್ಯಶಾಹಿ-ವಿರೋದಿ ಮತ್ತು ರಾಷ್ಟ್ರೀಯ ವಿಮೋಚನೆಯ ಆಶಯಗಳನ್ನು ಅದರ ತಾರ್ಕಿಕ ಕೊನೆಯತ್ತ ಒಯ್ದಿತು ಎಂದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಹು ಜಿಂತಾವೊ ನಾನ್‌ಜಿಂಗ್ ನಗರಕ್ಕೆ ಸನ್-ಯಾಟ್-ಸೇನ್ ಅವರ ಮೂರ್ತಿಯನ್ನು ಅರ್ಪಿಸಿದರು. 1911 ರ ಕ್ರಾಂತಿಯ ನಂತರ ನಾನ್‌ಜಿಂಗ್ ನಗರದಲ್ಲಿ ತಮ್ಮ ರಿಪಬ್ಲಿಕನ್ ಸರ್ಕಾರ ಸ್ಥಾಪಿಸಿದ್ದರು. ●

ಕೈಗಾ ಅಣುಸ್ಥಾವರದಿಂದ ಬಾಧಿತ ಜನತೆಯ ಹೋರಾಟ 60ನೇ ದಿನಕ್ಕೆ

ಪುಟ 12 ರಿಂದ

ಭಾಗದ ಜನರನ್ನೂ ಒಳಗೊಂಡ ಪುನರ್ವಸತಿ ಸಮಿತಿ ರಚಿಸಬೇಕು. ಸರ್ಕಾರ ಈ ಹಿಂದೆ 1996ರಲ್ಲಿ ತನ್ನ ಪುನರ್ವಸತಿ ಸಮಿತಿಯಲ್ಲಿ ಠರಾವು ಪಾಸು ಮಾಡಿದಂತೆ ಹಿಂದಿನ ಸಭೆಯ ತೀರ್ಮಾನಗಳು ಜಾರಿಯಾಗಬೇಕು.

4. ಯಾವುದೇ ಅವಘಡ ಸಂಭವಿಸಿದರೂ ತಪ್ಪಿಸಿಕೊಂಡು ಹೋಗಲಾರದ ವಿಶಿಷ್ಟ ಸನ್ನಿವೇಶವಿರುವ ಈ ಪ್ರದೇಶದ ಬಗ್ಗೆ ರಾಜ್ಯ ಸರ್ಕಾರವು ತಕ್ಷಣ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು ಎಂದು ಆಗ್ರಹಿಸಿರುವ ಹೋರಾಟ ಸಮಿತಿಗೆ ಕರ್ನಾಟಕ ಪ್ರಾಂತ ರೈತ ಸಂಘ, ಸಿ.ಐ.ಟಿಯು., ಎಸ್.ಎಫ್.ಐ., ಡಿ.ವೈ.ಎಫ್.ಐ. ಸಂಪೂರ್ಣವಾಗಿ ಬೆಂಬಲಿಸಿವೆ. ಮುಖ್ಯ ಮಂತ್ರಿಗಳ ಮಾತುಕತೆ ನಡೆಸುವವರೆಗೂ ಹೋರಾಟ ಮುಂದುವರಿಸುವ ನಿರ್ಧಾರವನ್ನು ಗ್ರಾಮಸ್ಥರು ಕೈಗೊಂಡಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಸಂಸ್ಕೃತಿ-ಸಾಮರಸ್ಯ' ಮಾರ್ದನಿಸಿದ.....

ಪುಟ 16 ರಿಂದ....

ರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿ

ಸೋಮವಾರ(ಜ.23)ದ ಕಾರ್ಯಕ್ರಮ ಸಾಮರಸ್ಯದ ಥೀಮ್ ಸುತ್ತ ಹೆಣೆದ ಕವನ ವಾಚನದೊಂದಿಗೆ ಆರಂಭವಾಯಿತು. ಈ ರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿಯಲ್ಲಿ ಪ್ರೊ. ಜಿ.ಎಸ್.ಸಿದ್ದರಾಮಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಎಚ್.ಎಲ್.ಪುಷ್ಪ, ಎಲ್.ಹನುಮಂತಯ್ಯ, ಕೆ. ಶರೀಫಾ ಮುಂತಾದ ಕವಿಗಳು ಕನ್ನಡ ಕವನಗಳನ್ನು ಓದಿದರು. ಟಿ.ವಿ.ಸುಬ್ಬರಾವ್ ಮತ್ತು ರಾಜೇಶ್ವರಿ ತೆಲುಗು, ಪ್ರಭಾಶಂಕರ್ ಪ್ರೇಮಿ ಮತ್ತು ಕವಿತಾ ಹಿಂದಿ ಮತ್ತು ವಾಹಿಲ್ ಮನ್ಸೂರ್ ಉರ್ದು ಕವಿತೆಗಳನ್ನು ಓದಿದರು. ಹಲವು ಶತಮಾನಗಳಿಂದ ನಮ್ಮನ್ನು ಕಾಡುತ್ತಿರುವ ಜಾತಿ ಸಮಸ್ಯೆಯನ್ನು ಕರ್ಣನ ದೃಷ್ಟಾಂತದೊಂದಿಗೆ ವಿಶ್ಲೇಷಣೆಗೆ ಒಳಪಡಿಸುವ, ಕುಂದಾಪುರ ಘಟಕ ಪ್ರಸ್ತುತ ಪಡಿಸಿದ ರಾಜಪ್ಪ ದಳವಾಯಿ ಬರೆದ 'ಕುಲಂ' ಅಂದಿನ ನಾಟಕವಾಗಿತ್ತು. ಜಾತಿ ಜತೆಗೆ ಅಧಿಕಾರ ಸ್ವಾರ್ಥಸಾಧನೆಗಾಗಿ ಯುದ್ಧದ ಹಿನ್ನೆಲೆ ನಾಟಕಕ್ಕೆ ಇನ್ನೊಂದು ಆಯಾಮ ಒದಗಿಸಿತು. 'ಬುದ್ಧ ಪ್ರಬುದ್ಧ'ದಂತೆ 'ಕುಲಂ'ನಲ್ಲೂ ವಾಸು ಗಂಗೇರ ಅವರ ಕಲಾತ್ಮಕ ನಿರ್ದೇಶನದಡಿಯಲ್ಲಿ ಎಲ್ಲಾ ಉತ್ತಮ ನಾಟಕೀಯ ಅಂಶಗಳು ಮೇಳವಿಸಿದವು. ವಾರದ ದಿನವಾದರೂ ಕಿಕ್ಕಿರಿದಿದ್ದ ಜನ ಕಲಾಕ್ಷೇತ್ರದ 'ಗಾಂಭೀರ್ಯ' ಲೆಕ್ಕಿಸದೆ, ಸಿಳ್ಳೆ ಚಪ್ಪಾಳೆಗಳಿಂದ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜಕೀಯ ಮತ್ತು ಸಾಂಸ್ಕೃತಿಕ ಚಳುವಳಿಗಳ ನಡುವೆ ಡೈಲೆಕ್ಟಿಕಲ್ ಸಂಬಂಧ

'ಜನಸಂಸ್ಕೃತಿಗಾಗಿ ಹೊಸ ಚಳುವಳಿ' ರಾಷ್ಟ್ರೀಯ ವಿಚಾರ ಸಂಕಿರಣ ಮಂಗಳವಾರ(ಜ.24)ದ ಕಾರ್ಯಕ್ರಮ ಆರಂಭಿಸಿತು. ಉದ್ಘಾಟನಾ ಭಾಷಣ ಮಾಡಬೇಕಿದ್ದ ಪ್ರಸಿದ್ಧ ಸಾಂಸ್ಕೃತಿಕ ಚಿಂತಕ ಪ್ರೊ.ಕೆ.ಎನ್.ಪಣಿಕ್ಕರ್ ಅಸ್ವಸ್ಥತೆಯಿಂದ ಬರಲಿಲ್ಲ. ಆದರೆ ತಮ್ಮ ಲಿಖಿತ ಭಾಷಣ ಕಳಿಸಿದ್ದರು. ಅದನ್ನು ಡಾ. ಎಸ್ ಚಟರ್ಜಿ ಓದಿದರು. ಪ್ರಗತಿಶೀಲ ಲೇಖಕರ ಸಂಘ ಮತ್ತು ಇಪ್ಟಾ ಭಾರತದಲ್ಲಿ 1930 ರ ದಶಕದಲ್ಲಿ ಆರಂಭಿಸಿದ ಸಾಂಸ್ಕೃತಿಕ ಚಳುವಳಿಯ 75 ವರ್ಷಗಳ ಇತಿಹಾಸದತ್ತ ವಿಹಂಗಮ ನೋಟ ಬೀರಿದ ಪ್ರೊ. ಪಣಿಕ್ಕರ್ ಅದರ ಏಳುಬೀಳುಗಳು, ಸಾಧನೆ-ವೈಫಲ್ಯಗಳು, ಅದಕ್ಕೆ ಕಾರಣಗಳು, ಇಂದಿನ ಪರಿಸ್ಥಿತಿ, ಮುಂದಿನ ಹಾದಿ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. 1930-40 ರಲ್ಲಿ ಯಶಸ್ವಿಯಾದ ಸಾಂಸ್ಕೃತಿಕ ವಲಯದಲ್ಲಿ 'ಐಕ್ಯರಂಗ' ಮತ್ತೆ ಕಟ್ಟುವುದು, ಸಂಸ್ಕೃತಿಯಲ್ಲಿ ಮಧ್ಯಪ್ರವೇಶ, ರಾಜಕೀಯ ಮತ್ತು ಸಾಂಸ್ಕೃತಿಕ ಚಳುವಳಿಗಳ ನಡುವೆ ಡೈಲೆಕ್ಟಿಕಲ್ ಸಂಬಂಧ ಸ್ಥಾಪಿಸುವುದು - ಹೊಸ ಸಾಂಸ್ಕೃತಿಕ ಚಳುವಳಿ ಕಟ್ಟಲು ಅವರ ಕೆಲವು ಸೂಚನೆಗಳು. ಸಮುದಾಯ ಶಿರಸಿ ಕಾರ್ಯಾಗಾರದಲ್ಲಿ ರೂಪಿಸಿದ ಕರಡು ಹೇಳಿಕೆಯ ಸುತ್ತ ಸಂವಾದ ನಡೆಯಿತು. ಡಾ.ಕೆ.ವೈ.ನಾರಾಯಣಸ್ವಾಮಿ 'ಜನಸಂಸ್ಕೃತಿ ಎಂದರೇನು ?', ಫಕೀರ್ ಮಹ್ಮದ್ ಕಟ್ಪಾಡಿ 'ಸಾಂಸ್ಕೃತಿಕ ದಾಳಿಯ ಸ್ವರೂಪ' ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಸುಚಿತ್ರ ಅಕಾಡೆಮಿಯ ವಿದ್ಯಾಶಂಕರ್ ಸಿನೇಮಾ, ಟಿವಿ, ಮತ್ತು ಇತರ ಇಲೆಕ್ಟ್ರಾನಿಕ್ ಮಾಧ್ಯಮಗಳ ಸ್ವರೂಪವನ್ನು ವಿಶ್ಲೇಷಿಸಿ, ಸಾಂಸ್ಕೃತಿಕ ಚಳುವಳಿ ಏನು ಮಾಡಬಹುದು ಎಂದು ತಮ್ಮ ಅಭಿಪ್ರಾಯ ಹೇಳಿದರು.

ಡಾ.ಎಂ.ವಿ.ವಸು ಪ್ರತಿಕ್ರಿಯಿಸುತ್ತಾ ಜನಸಂಸ್ಕೃತಿ ಜನ ಚಳುವಳಿಯಿಂದ ಹೊಮ್ಮುವ ಸಂಸ್ಕೃತಿ ಎಂದು ಅರ್ಥೈಸುತ್ತಾ, ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಜನ ಸಾಂಸ್ಕೃತಿಕ ಚಳುವಳಿ ಮಧ್ಯಪ್ರವೇಶ ಮಾಡಲೇಬೇಕಾದರ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ಪ್ರಸಿದ್ಧ ವಿಮರ್ಶಕ ಮತ್ತು ಚಿಂತಕ ಡಾ.ಎಚ್.ಎಸ್. ರಾಘವೇಂದ್ರ ರಾವ್ ಅಧ್ಯಕ್ಷೀಯ ಭಾಷಣ ಮಾಡುತ್ತಾ ಸಾಂಸ್ಕೃತಿಕ ಚಳುವಳಿ ಸಮಾನ ಶಿಕ್ಷಣಕ್ಕೆ ಒತ್ತಾಯವನ್ನು ಒಳಗೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಸಂಸ್ಕೃತಿ ರಾಜಕೀಯಕ್ಕೆ ಸಂಬಂಧ ಇಲ್ಲದ ಒಂದು ಸ್ವಾಯತ್ತ ಸಂಗತಿ ಅಲ್ಲ. ಸಮಾಜದ ಆರ್ಥಿಕ ತಳಹದಿ ಬದಲಾಯಿಸದೆ 'ಸಾಂಸ್ಕೃತಿಕ ಕ್ರಿಯೆ' ಯಿಂದಲೇ ಬದಲಾವಣೆ ಅಸಾಧ್ಯ. ರಾಜಕೀಯ ಚಳುವಳಿಗೆ ನಿರ್ಲಿಪ್ತವಾದ ಸಾಂಸ್ಕೃತಿಕ ಚಳುವಳಿ ಟೊಳ್ಳಾಗಿರುತ್ತದೆ ಎಂಬುದನ್ನು ನೆನಪಿನಲ್ಲಿ ಇಡಬೇಕು ಎಂದರು.

ಜಗದ ಜಲಗಾರ

ಸಿಂಧನೂರು ಘಟಕ ಪ್ರಸ್ತುತ ಪಡಿಸಿದ ಸತೀಶ ಮಂಡ್ಯ ನಿರ್ದೇಶಿಸಿದ ಕುವೆಂಪುರವರ 'ಜಲಗಾರ' ಅಂದಿನ ನಾಟಕವಾಗಿತ್ತು. ಗುಡಿ-ಮಸೀದಿಗಳ ಸ್ಥಾವರ ಕಲ್ಪನೆ ತಿರಸ್ಕರಿಸುವ ಮಾನವತಾವಾದಿ, ವರ್ಣವ್ಯವಸ್ಥೆಯ ಕಸವನ್ನು ಗುಡಿಸಿ ಹಾಕಿ, ಹೊಸದೊಂದು ಸಮ ಸಮಾಜ ಕಟ್ಟುವ 'ಜಗದ ಜಲಗಾರ' ನ ಪರಿಕಲ್ಪನೆಯನ್ನು ನಾಟಕ ಶಕ್ತಿಯುತವಾಗಿ ಮೂಡಿಸಿತು.

ಐದು ದಿನಗಳ ಈ ಉತ್ಸವ ಕೊನೆಯ ದಿನದ ಸಮಾರೋಪದಲ್ಲಿ ಸಮುದಾಯದ ಸ್ಥಾಪಕ-ರೂವಾರಿ ಪ್ರಸನ್ನ, ಇಂದು ತೀವ್ರ ಅವಮಾನಕ್ಕೆ ಗುರಿಯಾಗಿರುವ ಶ್ರಮಸಂಸ್ಕೃತಿಗೆ ಮನ್ನಣೆ ಕೊಡುವ ಕಾಯಕದಲ್ಲಿ ಸಮುದಾಯ ತೊಡಗಿಸಿಕೊಳ್ಳಬೇಕೆಂದು ಕರೆ ಕೊಟ್ಟರು. ರಂಗ ವಿಮರ್ಶಕ ಮತ್ತು ಚಿಂತಕ ಡಾ.ಕೆ.ಮರುಳಸಿದ್ದಪ್ಪ ಸಾಮರಸ್ಯ ಕೆಡಿಸುವ ಶಕ್ತಿಗಳ ಹುನ್ನಾರ ಬಯಲಿಗೆಳೆಯುವ ಕಾಯಕದ ಮಹತ್ವದ ಬಗ್ಗೆ ಒತ್ತಿ ಹೇಳಿದರು. ಕೊನೆಯ ದಿನದ ನಾಟಕ 'ಪಿನಾಕಿನಿ ತೀರದಲ್ಲಿ' ವಿದುರಾಶ್ವತ್ಥದಲ್ಲಿ ನಡೆದ ಧ್ವಜಸತ್ಯಾಗ್ರಹದ ಕಥಾನಕವನ್ನು (ರಿಪಬ್ಲಿಕ್ ದಿನದ ಹಿಂದಿನ ದಿನ) ರಂಗಕ್ಕೆ ತಂದಿತು. ಆ ಮೂಲಕ ಸಂಸ್ಕೃತಿ-ಸಾಮರಸ್ಯ ಕಾಪಾಡಲು, ಜನ ಸಾಮಾನ್ಯರು ಸಾಮ್ರಾಜ್ಯಶಾಹಿ ಮುಂತಾದ ಸಮಾನ ಶತ್ರುವಿನಿಂದ ವಿಮೋಚನೆಯ ಉದಾತ್ತವಾದ ಉದ್ದೇಶಗಳಿಗೆ ಒಂದಾಗಿ ಹೋರಾಡಿದಾಗ ಮಾತ್ರ ಸಾಧ್ಯ ಎಂದು ಬಿಂಬಿಸುತ್ತಾ ಉತ್ಸವದ ಆಶಯವನ್ನು ಇನ್ನಷ್ಟು ವಿಸ್ತರಿಸಿತು. ಐದು ದಿನಗಳ ಯಶಸ್ವಿ ಉತ್ಸವಕ್ಕೆ ತೆರೆ ಎಳೆಯಿತು. ●

....ಐಕ್ಯತೆ ತೋರಿದ ಜೆಸಿಟಿಯು ಸಮಾವೇಶ

ಪುಟ 10 ರಿಂದ

ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ/ ಸತ್ಯಾಗ್ರಹ ನಡೆಸಲಾಗಿದೆ. ಕೇಂದ್ರ ಕಾರ್ಮಿಕರ ಸಂಘಟನೆಗಳು ಈಗಾಗಲೇ ಗುರುತಿಸಿರುವ 5 ಪ್ರಮುಖ ಬೇಡಿಕೆಗಳಾದ

1. ಬೆಲೆ ಏರಿಕೆ ನಿಯಂತ್ರಣ
2. ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್
3. ಕಾರ್ಮಿಕ ಕಾನೂನಗಳ ಕಠಿಣವಾದ ಅನುಷ್ಠಾನ
4 ಸಾರ್ವತ್ರಿಕವಾಗಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳು ಹಾಗೂ
5. ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಷೇರು ಮಾರಾಟ ಮಾಡದಿರಲು ಒತ್ತಾಯಿಸಿಲಾಗಿದೆ.

ಕರ್ನಾಟಕ ರಾಜ್ಯದಲ್ಲೂ ಕೇಂದ್ರ ಕಾರ್ಮಿಕ ಸಂಘಟನೆಗಳು ಐತಿಹಾಸಿಕ ಐಕ್ಯತೆಯೊಂದಿಗೆ ನೀಡಿರುವ ರಾಷ್ಟ್ರೀಯ ಕರೆಯನ್ನು ಯಶಸ್ವಿಗೊಳಿಸಲು ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಕೈಗಾರಿಕಾ ಕೇಂದ್ರಗಳಲ್ಲಿ ಸಭೆ ಸಮಾವೇಶಗಳನ್ನು ನಡೆಸಿ ಕಾರ್ಮಿಕರಲ್ಲಿ ಜಾಗೃತಿಯನ್ನು ಉಂಟು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಮುಷ್ಕರವನ್ನು ಐತಿಹಾಸಿಕವಾಗಿ ಯಶಸ್ವಿಗೊಳಿಸಲು ಎಲ್ಲಾ ಕಾರ್ಮಿಕ ಸಂಘಗಳು ಐಕ್ಯತೆಯಿಂದ ಶ್ರಮಿಸಬೇಕೆಂದು ಸಮಾವೇಶ ಕರೆ ನೀಡಿದೆ. ●

ಸಭಾಧ್ಯಕ್ಷರ ಮೊಂಡಾಟ-ಭಂಡಾಟ

ಪುಟ 3ರಿಂದ.....

ಈ ಮೊದಲೇ ಪ್ರಯತ್ನ ಮಾಡಬಹುದಿತ್ತಲ್ಲ. ಬಹುಮತವಿಲ್ಲ ಎನ್ನುವ ಜೆಡಿ(ಎಸ್) ಇದನ್ನು ಯಾಕೆ ಒಂದು ರಾಜಕೀಯ ಹೋರಾಟವಾಗಿ ಮಾಡುತ್ತಿಲ್ಲ?. ಸರ್ಕಾರದಿಂದ ಬೆಂಬಲ ವಾಪಸು ಪಡೆದು, ನ್ಯಾಯಾಲಯದ ತೀರ್ಪಿನ ನಂತರ ತಾಂಬೂಲ... ಪಡೆದು, ಬೆಂಬಲ ಕೊಟ್ಟು ಮತ್ತೇ ಈಗ ಕಪ್ಪು ಬಾವುಟ ಹಿಡಿಯುವ ಪಕ್ಷೇತರರ ಹಿಂದೆ ಏನಿದೆ ? ಯಾರಿದ್ದಾರೆ ? ಎಂಬ ಪ್ರಶ್ನೆ ಬಂದಿದೆಯಾದರೂ ಸಭಾಧ್ಯಕ್ಷರು ರಾಜೀನಾಮೆ ಕೊಡಲೇಬೇಕೆಂಬ ಅವರ ಬೇಡಿಕೆ ಸರಿಯಾದುದೇ ಆಗಿದೆ.

ಆದ್ದರಿಂದ ಈ ಎಲ್ಲಾ ಉಯ್ಯಾಲೆ ಆಟದಿಂದ ವಿರೋಧ ಪಕ್ಷಗಳು ಹೊರಬರಬೇಕು. ದೃಢವಾಗಿ ಬಿಜೆಪಿಗೆ, ಈ ಸರ್ಕಾರಕ್ಕೆ ಎದಿರೇಟು ನೀಡಿ ಸಭಾಧ್ಯಕ್ಷ ಬೋಪಯ್ಯ ರಾಜೀನಾಮೆ ಕೊಡುವವರೆಗೂ ಹೋರಾಡಬೇಕು... ಜನತೆಯೂ ದನಿ ಎತ್ತಬೇಕು.

ಇಷ್ಟಾದ ಮೇಲಾದರೂ, ಛೀಮಾರಿ ಹಾಕಿಸಿಕೊಂಡ ನಂತರವಾದರೂ ದೇಶಭಕ್ತ ಸಭಾಧ್ಯಕ್ಷರು ರಾಜೀನಾಮೆ ಕೊಡಬಾರದೇ ? ಆರ್.ಎಸ್.ಎಸ್. ನಂತಹ ಫ್ಯಾಶಿಸ್ಟ್ ಮನೋಭಾವದ ಸೋಂಕು, ಅಧಿಕಾರದಾಹ, ಸಂವಿಧಾನಕ್ಕಿಂತಲೂ 'ಸಂಘ'ವೇ ಪರಮೋಚ್ಛ ಎನ್ನುವವರಿಗೆ ಇರುವುದೇನಿದ್ದರೂ...

'ನ ಭಯಂ ನ ಲಜ್ಜಾ' ! ●

ಸನ್ಯಾಸಿ ಸ್ವಾಮಿ ವಿವೇಕಾನಂದ.....


ಪುಟ 8 ರಿಂದ......

ಯೂರೋಪ್, ಅಮೇರಿಕ ದೇಶಗಳ ಈ ಕೆಳವರ್ಗಗಳ ಜನ ಸಮೂಹ ಪ್ರಪ್ರಥಮ ಬಾರಿಗೆ ಇಂತಹ ಜಾಗೃತಿಯನ್ನೂ ಪಡೆದುಕೊಂಡು ತಮ್ಮ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಭಾರತದಲ್ಲೂ ಇತ್ತೀಚೆಗೆ ಕೆಳಸ್ತರದ ಜನರಿಂದ ಬಹಳಷ್ಟು ಸಂಖ್ಯೆಯ ಮುಷ್ಕರಗಳು, ಪ್ರತಿಭಟನೆಗಳು ಬೆಳೆದು ಬರುತ್ತಿವೆ. ಮೇಲ್ವರ್ಗದ ಜನಕ್ಕೆ ಇನ್ನು ಮುಂದೆ ಕೆಳವರ್ಗದ ಜನರನ್ನು ದಮನಿಸಲು ಸಾಧ್ಯವಾಗಲಾರದು" ಎಂದಿದ್ದಾರೆ.

ನವ ಭಾರತದ ಆಗಮನಕ್ಕಾಗಿ ಹಂಬಲಿಸುತ್ತಾ "ಭಾರತ ಮಾತೆ ಎದ್ದು ಬರಲಿ, ಬಡ ರೈತರ ಗುಡಿಸಲುಗಳಿಂದ, ಮೀನುಗಾರರ ಜೋಪಡಿಗಳಿಂದ, ಸಮಗಾರರು ಮತ್ತು ಕಸಗುಡಿಸುವವರ ಕೇರಿಗಳಿಂದ, ಕಾರ್ಖಾನೆಗಳಿಂದ, ಮಾರಾಟದ ಮಳಿಗೆಗಳಿಂದ ಮೂಡಿ ಬರಲಿ" ಎಂದು ಅವರು ಹಾರೈಸುತ್ತಾರೆ. ಸ್ವಾಮಿ ವಿವೇಕಾನಂದರ ಈ ಕೆಲವು ವಿಚಾರಗಳು ಅವರ ಬಗ್ಗೆ ಗೌರವವನ್ನು ಹೆಚ್ಚಿಸುತ್ತದೆ.

ಆದರೆ ಸ್ವಾಮಿ ವಿವೇಕಾನಂದರ ಮಹಾನ್ ಮಾನವತಾವಾದಿ ವ್ಯಕ್ತಿತ್ವವನ್ನು ತಿರುಚುವ, ಅವರನ್ನು ಪ್ರತಿಗಾಮಿ ಹಿಂದುತ್ವದ ವಕ್ತಾರನನ್ನಾಗಿಸುವ ಪ್ರಯತ್ನವನ್ನು ಸಂಘಪರಿವಾರದವರು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಅವರು ನಮ್ಮೆಲ್ಲರಂತೆ ಮನುಷ್ಯರೇ ಆಗಿದ್ದರೂ ಅವರನ್ನು 'ದೇವರು' ಮಾಡುವ ಪ್ರಯತ್ನ ನಡೆಯುತ್ತಿದೆ. ಇತಿಹಾಸದುದ್ದಕ್ಕೂ ಸನಾತನಿಗಳು ಇದನ್ನೇ ಮಾಡುತ್ತಾ ಬಂದಿದ್ದಾರೆ. ದೇವರ ಅಸ್ತಿತ್ವವನ್ನು ವೇದಗಳ ಶ್ರೇಷ್ಠತೆಯನ್ನು ನಿರಾಕರಿಸಿದ ಬುದ್ಧನನ್ನೇ 'ಅವತಾರ ಪುರುಷ' ಎಂದು ಬಿಂಬಿಸಲಾಯಿತು. ಪುರೋಹಿತಶಾಹಿಯನ್ನು, ಜಾತಿ ಪದ್ಧತಿಯನ್ನು ವಿರೋಧಿಸಿದ ಬಸವಣ್ಣನನ್ನು'ನಂದಿ' ಅವತಾರ ಎಂದು ಬಿಂಬಿಸಿ ಪೂಜಿಸುವಂತೆ ಮಾಡಲಾಗಿದೆ. ತಾನೊಬ್ಬ ನಾಸ್ತಿಕ ಎಂದು ಘೋಷಿಸಿಕೊಡ ಭಗತ್‌ಸಿಂಗ್ ಅವರ ಹಾಗೂ "ಹಿಂದೂ ಆಗಿ ಹುಟ್ಟಿದ್ದರೂ ಹಿಂದೂ ಆಗಿ ಸಾಯಲಾರೆ" ಎಂದು ಘೋಷಿಸಿದ್ದ ಡಾ॥ ಅಂಬೇಡ್ಕರ್ ಅವರ ಭಾವ ಚಿತ್ರಗಳನ್ನು ಹಾಕಿಕೊಂಡು ಸಂಘಪರಿವಾರದ ಸಂಘಟನೆಗಳು ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ವಿಚಾರಗಳ ಕುರಿತು ನಮ್ಮ ವಸ್ತುನಿಷ್ಠವಾದ ಅಧ್ಯಯನ ಹೆಚ್ಚಾಗಬೇಕಾಗಿದೆ. ●

RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO



ವಸಂತ

ಇತ್ತೀಚಿನ ವರ್ಷಗಳಲ್ಲಿ ರಾಜ್ಯವ್ಯಾಪಿ ಸಾಂಸ್ಕೃತಿಕ ಚಳುವಳಿ ಮತ್ತು ಶಕ್ತಿಯಾಗಿ ಪುನಃ ಹೊಮ್ಮುತ್ತಿದ್ದು, ಜನವರಿ 21 ರಿಂದ 25 ರ ವರೆಗೆ ನಡೆದ ಐದು ದಿನದ 'ಸಂಸ್ಕೃತಿ-ಸಾಮರಸ್ಯ ಸಮುದಾಯ ರಂಗಸಂಗಮ' ಇತ್ತೀಚೆಗೆ ನಡೆದ ಅತ್ಯಂತ ಯಶಸ್ವಿ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಕಳಶವಿಟ್ಟಂತಿತ್ತು. ಜನಸಂಸ್ಕೃತಿ ಉತ್ಸವ, 'ಟಾಗೋರ್ ಉತ್ಸವ' ಮುಂತಾದ ಇತ್ತೀಚಿನ ಕಾರ್ಯಕ್ರಮಗಳಿಗಿಂತ ಬಹಳ ಭಿನ್ನವಾಗಿತ್ತು. ಐದು ನಾಟಕಗಳು, ಒಂದು ಬೀದಿ ನಾಟಕ, ಎರಡು ವಿಚಾರ ಸಂಕಿರಣಗಳು, ಒಂದು ಕವಿಗೋಷ್ಠಿ, ತತ್ವಪದ ಗಾಯನ, ಮಹಾಕಾದಂಬರಿ ಒಂದರ ಪ್ರಕಟಣಾ-ಪೂರ್ವ ಕೂಪನ್ ಬಿಡುಗಡೆ - ಹೀಗೆ ವೈವಿಧ್ಯತೆ ಈ ಉತ್ಸವದ ಪ್ರಮುಖ ವಿಶೇಷತೆಯಾಗಿತ್ತು. ಆದರೆ ಎಲ್ಲಾ ವಿವಿಧ ಕಾರ್ಯಕ್ರಮಗಳಲ್ಲೂ 'ಸಂಸ್ಕೃತಿ-ಸಾಮರಸ್ಯ'ಕ್ಕೆ ಮಿಡಿಯುವ ಸಾಮಾನ್ಯ ಧ್ವನಿ ಸಹ ಇತ್ತು. ಕರ್ನಾಟಕದ ಹೊರಗಿನ ಎರಡು ಪ್ರಗತಿಪರ ರಂಗ ಚಳುವಳಿ ಪ್ರತಿನಿಧಿಸುವ, ದೆಹಲಿಯ ಸಫ್ದರ್ ಹಶ್ಮಿ ಸ್ಥಾಪಿಸಿದ 'ಜನ ನಾಟ್ಯ ಮಂಚ್(ಜನಮ್)' ತಂಡದ ಸುಧನ್ವ ದೇಶಪಾಂಡೆ ಮತ್ತು 'ಚೆನ್ನೈ ಕಲೈ ಕುಳು'ವಿನ ಪ್ರಳಯನ್ ಭಾಗವಹಿಸಿದ್ದು ಇನ್ನೊಂದು ವಿಶೇಷವಾಗಿತ್ತು. ಹೆಚ್ಚಿನ ದಿನಗಳಲ್ಲಿ ಹೆಚ್ಚಿನ ಕಾರ್ಯಕ್ರಮಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ರೆಕಾರ್ಡ್ ಎನ್ನಬಹುದಾದ ಅತ್ಯಂತ ಹೆಚ್ಚಿನ ಪ್ರಮಾಣದ ಜನರ ಭಾಗವಹಿಸುವಿಕೆ ಮತ್ತೊಂದು ವಿಶೇಷವಾಗಿತ್ತು.

ಬೆಂಗಳೂರಿನ ಹೊರಗಿರುವ ದೂರದ ಜಿಲ್ಲೆಗಳ ಘಟಕಗಳು ಆಯಾ ಪ್ರದೇಶದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ ಇತ್ತೀಚಿನ ನಾಟಕಗಳನ್ನು ಬೆಂಗಳೂರಿನಲ್ಲಿ ಪ್ರದರ್ಶಿಸುವ ಅವಕಾಶ ಮಾಡಿಕೊಟ್ಟಿತ್ತು. ನಾಟಕಗಳ ವಸ್ತುಗಳಲ್ಲಿ ವಿವಿಧತೆ ಕಂಡುಬಂದರೂ ಸಂಸ್ಕೃತಿ-ಸಾಮರಸ್ಯಗಳ ಥೀಮನ್ನು ಹಲವು ರೀತಿಗಳಲ್ಲಿ ಮಾರ್ದನಿಸಿದವು. 18 ನೇ ಶತಮಾನದಲ್ಲಿ ಸಂಸ್ಕೃತಿ-ಸಾಮರಸ್ಯಗಳ ಸಂದೇಶವನ್ನು ಜನರಲ್ಲಿ ಬಿತ್ತಿದ ಕಡಕೋಳ ಮಡಿವಾಳಪ್ಪನವರ ತತ್ವಪದಗಳ ಮೂಲಕ ಉತ್ಸವದ ಆರಂಭ ಆಯಿತು. ಖುಶವಂತ್ ಸಿಂಗ್ ಅವರ ಪ್ರಸಿದ್ಧ ಕಾದಂಬರಿ ಆಧಾರಿತ 'ಟ್ರೈನ್ ಟು ಪಾಕಿಸ್ತಾನ್' ಭಾರತ-ಪಾಕಿಸ್ತಾನದ ವಿಭಜನೆಯ ಸಂದರ್ಭದಲ್ಲಿ ಸಾಮರಸ್ಯದ ಪರಂಪರೆಯ ಮೇಲೆ ಬರೆ ಎಳೆದ ಭಯಾನಕ ಕಥಾನಕವನ್ನು, ರಾಯಚೂರು ಘಟಕ ತಾಯಣ್ಣ ಎರ್ರಗೇರಾ ನಿರ್ದೇಶನದಲ್ಲಿ ರಂಗದ ಮೇಲೆ ಪುನಃಸೃಷ್ಟಿಸುವ ಸಾಹಸದೊಂದಿಗೆ ಉತ್ಸವ ಜನವರಿ 21 ರಂದು ಭರ್ಜರಿ ಆರಂಭ ಕಂಡಿತು. ಅದಕ್ಕಿಂತ ಮೊದಲು ಉತ್ಸವದ ಘೋಷವಾಕ್ಯವಾದ 'ಸಂಸ್ಕೃತಿ-ಸಾಮರಸ್ಯ'ಕ್ಕೆ ಬರಗೂರು ರಾಮಚಂದ್ರಪ್ಪ ತಮ್ಮ ಉದ್ಘಾಟನಾ ಭಾಷಣದಲ್ಲಿ ಕೊಟ್ಟ ಹರಹು ಉತ್ಸವದ ಅರ್ಥವಂತಿಕೆ ಹೆಚ್ಚಿಸಿತು. ಸಂಸ್ಕೃತಿ-ಸಾಮರಸ್ಯಗಳ ಅಭಿವ್ಯಕ್ತಿ ಮೇಲೆ ನಡೆಯುತ್ತಿರುವ ದಾಳಿಯ ಗಂಭೀರತೆಯ ಬಗ್ಗೆ ಸುಧನ್ವ ದೇಶಪಾಂಡೆ ಮಾತನಾಡಿ ಸಮುದಾಯದ ಸಾಂಸ್ಕೃತಿಕ ಕರ್ತವ್ಯದ ಕಡೆಗೆ ಗಮನ ಸೆಳೆದರು.

'ಜನ ರಂಗಭೂಮಿ-ದಿಕ್ಕು ದೆಸೆ'

ಭಾನುವಾರವಾದ ಎರಡನೇ ದಿನದಂದು ಬೆಳಿಗ್ಗೆ 'ಜನ ರಂಗಭೂಮಿ -ದಿಕ್ಕು ದೆಸೆ' ರಾಷ್ಟ್ರೀಯ ವಿಚಾರ ಸಂಕಿರಣದೊಂದಿಗೆ ಉತ್ಸವ ಮುಂದುವರೆಯಿತು. ಸುಧನ್ವ ದೇಶಪಾಂಡೆ ಮತ್ತು ಪ್ರಳಯನ - ತಮ್ಮ ರಂಗ ಚಳುವಳಿಗಳು ಎದುರಿಸುತ್ತಿರುವ ತೀವ್ರ ಸಮಸ್ಯೆಗಳು, ಬದಲಾದ ಸಾಂಸ್ಕೃತಿಕ ಸನ್ನಿವೇಶ ಅರ್ಥೈಸುವ ಬಗೆ, ಅದನ್ನು ಎದುರಿಸಲು ತಮ್ಮ ತಂಡ ಕಂಡುಕೊಂಡ ಬಗೆ - ಇವುಗಳ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಕೋಲಾರದ ಪ್ರಸಿದ್ಧ 'ಆದಿಮ' ಕಟ್ಟಿ ಬೆಳೆಸಿದ ಕೋಟಗಾನಹಳ್ಳಿ ರಾಮಯ್ಯ ಕರ್ನಾಟಕದ ಸಾಂಸ್ಕೃತಿಕ ಚಳುವಳಿ ಎದುರಿಸುತ್ತಿರುವ ಸವಾಲು ಮತ್ತು ಏಳುಬೀಳುಗಳನ್ನು ಸಮುದಾಯದ ಉದಾಹರಣೆಯೊಂದಿಗೆ ವಿವರಿಸಿದರು. ಆ ನಂತರ ಹಲವು ಪ್ರಸಿದ್ಧ ರಂಗಕರ್ಮಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಬೀದಿ ನಾಟಕ ಮತ್ತು ರಂಗ ನಾಟಕಗಳ ನಡುವೆ ಭಿನ್ನತೆ, ಬೀದಿ ನಾಟಕದ ಇಂದಿನ ಪ್ರಸ್ತುತತೆ, ಇಂದಿನ ಸಂದರ್ಭದಲ್ಲಿ ಜನ ರಂಗಭೂಮಿಯ ಹಾದಿ - ಇತ್ಯಾದಿ ಚರ್ಚೆಗೆ ಬಂದವು. ಅಧ್ಯಕ್ಷತೆ ವಹಿಸಿದ್ದ ಡಾ.ವಿಜಯಾ ಚರ್ಚೆಗೆ ಬಂದ ಈ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿ, ಸಾಂಸ್ಕೃತಿಕ ಚಳುವಳಿಯಲ್ಲಿನ ಒಡಕು ಮತ್ತು ವೈಫಲ್ಯಗಳ ಬಗ್ಗೆ ಒತ್ತು ಕೊಡುವ ಬದಲು ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸಲು ಬೇಕಾದ ಐಕ್ಯತೆ ಮತ್ತು ಕಾರ್ಯಾಚರಣೆಗಳ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ವಿಚಾರ ಸಂಕಿರಣ ನಡೆದ ಕಲಾಕ್ಷೇತ್ರ ಲಾಂಜ್ ತುಂಬಿ ತುಳುಕಿ, ತಡವಾಗಿ ಬಂದ ಉತ್ಸಾಹಿಗಳಿಗೆ ಜಾಗ ಸಿಗದೆ ಹೋಯಿತು.


ವಿಚಾರಸಂಕಿರಣದಲ್ಲಿ ಪ್ರಸನ್ನ....

ಮಿಂಚಿದ ತತ್ವಪದ ಗಾಯನ ಮತ್ತು 'ಬುದ್ಧ ಪ್ರಬುದ್ಧ'

ಮಾರ್ಚ್‌ನಲ್ಲಿ ಪ್ರಕಟವಾಗಲಿರುವ (ಹಿಂದೆ ಸಮುದಾಯದ ಅಧ್ಯಕ್ಷರಾಗಿದ್ದ) ಬೋಳುವಾರ ಮಹಮ್ಮದ್ ಕುಂಞ ಅವರ ಸಾವಿರಕ್ಕೂ ಹೆಚ್ಚು ಪುಟಗಳ ಮಹಾಕಾದಂಬರಿ 'ಸ್ವಾತಂತ್ರ್ಯದ ಓಟ'ದ ಪ್ರಕಟಣಾ-ಪೂರ್ವ ಕೂಪನ್ ಬಿಡುಗಡೆ ಮಾಡುವ ವಿಶಿಷ್ಟ ಕಾರ್ಯಕ್ರಮ ಮುಂದಿನ ಕಾರ್ಯಕ್ರಮವಾಗಿತ್ತು. ಕೂಪನ್ ಬಿಡುಗಡೆ ಮಾಡಿ, 1947 ರಿಂದ 2006 ರ ವರೆಗೆ ದೂರದ ಪಾಕಿಸ್ತಾನದಿಂದ ದಕ್ಷಿಣದವರೆಗೆ ಕಾಲ-ದೇಶಗಳ ವಿಸ್ತಾರ ಹೊಂದಿರುವ ಈ ಬೃಹತ್ ಕಾದಂಬರಿಯ ಇಣುಕುನೋಟವನ್ನು ಪ್ರೊ.ಎಸ್.ಜಿ. ಸಿದ್ದರಾಮಯ್ಯ ನೀಡಿದರು. ಸಂಜೆ ಕುವೆಂಪುರವರ ಕಥೆ 'ಧನ್ವಂತರಿ ಚಿಕಿತ್ಸೆ'ಯ ಬೀದಿ ನಾಟಕ ರೂಪವನ್ನು ಶಶಿಧರ ಬಾರಿಘಾಟ್ ನಿರ್ದೇಶನದಲ್ಲಿ ಬೆಂಗಳೂರು ಘಟಕ ಪ್ರದರ್ಶಿಸಿತು. ಹಲವು ದಶಕಗಳ ಹಿಂದೆ ರೈತನ ರಕ್ತ ಹೀರಿ ಬದುಕುವ ವ್ಯವಸ್ಥೆಯ ದರ್ಶನ ಮಾಡಿಸಿದ ಕುವೆಂಪು ಕಥೆಯನ್ನು ಇಂದಿನ ಸನ್ನಿವೇಶಕ್ಕೆ ಮತ್ತು ಬೀದಿನಾಟಕ ರೂಪಕ್ಕೆ ಅಳವಡಿಸಿಕೊಂಡದ್ದು ಪರಿಣಾಮಕಾರಿಯೂ ಅರ್ಥಪೂರ್ಣವೂ ಆಗಿತ್ತು.

ರಾಮಲಿಂಗಯ್ಯ ಗೌಡಗಾಂವ್ ಗವಾಯಿಗಳು ಮತ್ತು ತಂಡ ಪ್ರಸ್ತುತ ಪಡಿಸಿದ ತತ್ವಪದ ಗಾಯನ ಸುಮಾರು ಎರಡು ಗಂಟೆಗಳ ಕಾಲ ಪ್ರೇಕ್ಷಕರನ್ನು ಮಂತ್ರಮುಗ್ಧರಾಗಿಸಿತು. ಹೆಚ್ಚಾಗಿ ಅಪರಿಚಿತವಾದ 18 ನೇ ಶತಮಾನದ ಅವಧಿಯಲ್ಲಿ ಪುರೋಹಿತಶಾಹಿ ಮತ್ತು ಪ್ರಭುತ್ವಗಳ ವಿರುದ್ಧ ಪ್ರಬಲ ಪ್ರತಿಭಟನಾ ಕಾವ್ಯವಾದ ತತ್ವಪದಗಳ ಗಾಢ ಪರಿಚಯ ಬೆಂಗಳೂರಿಗರಿಗೆ ಆಯಿತು. ಅರಿವಿನ ಹರಿಕಾರ ಬುದ್ಧ ಮತ್ತು ಹಿಂಸೆಯ ಪ್ರತಿರೂಪವೇ ಎಂಬತ್ತಿದ್ದ ಅಂಗುಲಿಮಾಲ ನಡುವಿನ ಮುಖಾಮುಖಿ ಶ್ರೀಶೈಲ ಹುದ್ದಾರ ಅವರ 'ಬುದ್ಧ ಪ್ರಬುದ್ಧ'ದ ವಸ್ತುವಾಗಿತ್ತು. ವಾಸು ಗಂಗೇರ ಅವರ ಸಮರ್ಥ ನಿರ್ದೇಶನ, ಬೆಳಕಿನ ವಿನ್ಯಾಸ, ವೇಷಭೂಷಣ, ಅಭಿನಯ, ಸಂಗೀತ, ಧ್ವನಿ ಎಲ್ಲವೂ ಅಚ್ಚುಕಟ್ಟಾಗಿ ಮೇಳವಿಸಿ 'ಬುದ್ಧ ಪ್ರಬುದ್ಧ'ಜನರ ಅಪಾರ ಮೆಚ್ಚುಗೆ ಗಳಿಸಿತು. ಅಂಗುಲಿಮಾಲ ದುಡಿಯುವ ಜನರ ಪ್ರಬುದ್ಧ ಪ್ರತಿನಿಧಿಯಾಗಿ ಮಾರ್ಪಡುವ ಪ್ರಕ್ರಿಯೆ, ಬುದ್ಧನ ಚಿಂತನೆಗಳು ಗಾಂಧಿ ಮತ್ತು ಅಂಬೇಡ್ಕರ್ ಮೂಲಕ ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾಗಿರುವುದನ್ನು ನಾಟಕ ಸಶಕ್ತವಾಗಿ ಧ್ವನಿಸಿತು. ಹೀಗೆ ಎರಡನೇ ದಿನದ ಹಲವು ಕಾರ್ಯಕ್ರಮಗಳ ಮೂಲಕ ಉತ್ಸವಕ್ಕೆ ಪೂರ್ಣ ರಂಗೇರಿತು.

ಕವಿಗೋಷ್ಠಿಯಲ್ಲಿ ಕವನ ವಾಚನ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH